
ಕಲ್ಯಾಣ ಕಿರಣ



ಕಲ್ಯಾಣ ಕಿರಣ
ಮಾಸಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಪೂಜ್ಯಶ್ರೀ
ಜಗದ್ಗುರು ಮಾತೆ ಮಹಾದೇವಿ

* * *

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನಪಡಿಸುವುದು.

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ
ಬೆಂಗಳೂರು–೫೬೦೦೧೦

ಕಲೆ :
ಬಿ. ಪಿ. ಕೃಷ್ಣಯ್ಯ
ಮುದ್ರಣ : ಸೂಪರ್ ಪ್ರಿಂಟರ್ಸ್
ಬೆಂಗಳೂರು–೫೬೦೦೫೩

ಚಂದಾ ವಿವರ :

ಬಿಡಿ ಸಂಚಿಕೆ :	ರೂ.	೧–೦೦
ವಾರ್ಷಿಕ :	ರೂ.	೧೨–೦೦
ದ್ವೈವಾರ್ಷಿಕ :	ರೂ.	೨೩–೦೦
ಆಜೀವ ಸದಸ್ಯತ್ವ :	ರೂ.	೧೫೧–೦೦
ಪೋಷಕರು :	ರೂ.	೫೦೧–೦೦
ಮಹಾಪೋಷಕರು :	ರೂ.	೧೦೦೧–೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪ್ರತಿಕೆಯು ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಪಷ್ಟವಾಗಿ ಬರೆದಿರಬೇಕು

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಫುಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.

* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ.ಪಿ.ಇಲ್ಲ)

* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ಕಲ್ಯಾಣ ಕಿರಣ

ಸಂಪುಟ ೫ ಬಸವ ಶಕೆ ೮೬೩ ಆಗಸ್ಟ್ ೧೯೭೮ ಸಂಚಿಕೆ : ೪

ನುಡಿನೈವೇದ್ಯ

ಪ್ರತಿಜ್ಞೆ

ಭಾರತ ನೆಲದಲಿ ಹುಟ್ಟಿಹ ನಾನು
ಭಾರತ ಮಾತೆಗೆ ವಂದಿಪೆನು ॥
ಗುರುವನು ಸ್ಮರಿಸಿ ದೇವನ ನಂಬಿ
ಪೂಜೆಯ ತೊಟ್ಟು ದುಡಿಯುವೆನು ॥

ಗಂಗಾಜಲದಲಿ ಮೈತೊಳೆಯುವೆನು
ತುಂಗಾಜಲವನು ಈಂಟುವೆನು
ಗೌರಿಶಂಕರ ಗಿರಿಗೆ ವಂದಿಸಿ
ಕನ್ಯಕುಮಾರಿಯ ಸ್ಮರಿಸುವೆನು ॥

ಧರ್ಮದ ಕವಚವ ಧರಿಸುವೆನು
ಸತ್ಯದ ಖಡ್ಗವ ಹಿಡಿಯುವೆನು
ದೇಶವಿದೇಶದಿ ಭಾರತ ಕೀರ್ತಿ
ಹಸರಿಸುವೊಲ್ ನಾ ದುಡಿಯುವೆನು ॥

ನನ್ನವರೆಲ್ಲರು ನಾಡಿನ ಕುಡಿಗಳು
ಎನ್ನುವ ಭಾವವ ತಾಳುವೆನು
ಸುಂದರ ಬಂಧುರ ಭಾರತ ಮಂದಿರ
ಕಟ್ಟಲು ನಾನು ಬಾಳುವೆನು ॥

—ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ

ಮಾಸಪತ್ರಿಕೆ

ವಾರ್ಷಿಕ ಚಂದಾ : ೧೨ ರೂ.

ಆಜೀವ ಸದಸ್ಯತ್ವ : ೧೫೧ ರೂ.

ಕಿರಣಗನ್ನಡಿ

ಮುಖಪುಟ :- ಮದ್ರಾಸ್ ನಗರದಲ್ಲಿರುವ ಮಹಾತ್ಮಗಾಂಧಿ ಸ್ಮಾರಕ ಭವನ.

ಹಿಂಬದಿಯ ಹೊದಿಕೆ :- ಮದ್ರಾಸ್ ನಗರದಲ್ಲಿರುವ ಶ್ರೀ ತಿರುವಳ್ಳುವರು ಸ್ಮಾರಕ "ತಿರುವಳ್ಳುವರ್ ಕೊಟ್ಟಮ್"

ನಿಮ್ಮ ಅನಿಸಿಕೆ

ಪ್ರಕಾಶಕರು, ಕಲ್ಯಾಣಕಿರಣ ಅವರ ಸಮಕ್ಷಮಕ್ಕೆ

ಪತ್ರಿಕೆಗಳು ಕ್ರಮವಾಗಿ ಬರುತ್ತಿವೆ. ಪತ್ರಿಕೆಯ ಗುಣಮಟ್ಟ, ಮುದ್ರಣ, ಲೇಖನ, ಸಂವಿಧಾನ-ಇವೆಲ್ಲ ದೃಷ್ಟಿಯಿಂದ ಅಚ್ಚುಕಟ್ಟಾಗಿ ಹೊರಬರುತ್ತಿರುವದು ಎಂಥವರನ್ನೂ ಸಂತೋಷಗೊಳಿಸುವಂತಹುದಾಗಿದೆ. ಈ ಪತ್ರಿಕೆಯ ಮೂಲಕ ಪೂಜ್ಯ ಶ್ರೀ ಮಾತಾಜಿಯವರ, ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ವಿಚಾರಧಾರೆ, ಕಾರ್ಯಚಟುವಟಿಕೆ, ಹೆಚ್ಚಾಗಿ ಅವಿಶ್ರಾಂತ ಶ್ರಮದಿಂದ ನಾಡಿನ ಮೂಲೆಮೂಲೆಗಳಲ್ಲಿ ಬಸವ ತತ್ತ್ವ ಪ್ರದೀಪವನ್ನು ಜಾಜ್ವಲಮಾನವಾಗಿ ಬೆಳಗುತ್ತಿರುವುದು ಶ್ಲಾಘನೀಯವಾದ ಅಂಶ. ಮಾತಾಜಿಯವರ ಇತ್ತೀಚಿನ ಮಂಗಳೂರಿನ ಪ್ರವಚನ ಅವರ ಅದ್ಭುತ ಪ್ರತಿಭೆ, ಪರಿಶ್ರಮ, ಸಾಹಸಿಗಳಿಗೊಂದು ಮೈಲಿಗಲ್ಲು. ತಮ್ಮ ಅನುಭವಗಳನ್ನು ಕಲ್ಯಾಣ ಕಿರಣದ ಮೂಲಕ ಜನತೆಯ ಎದುರಿಗಿಡುತ್ತಿರುವುದು ತುಂಬಾ ಪ್ರಯೋಜನಕಾರಿ.

ಪತ್ರಿಕೆಯು ಓದುಗರಲ್ಲಿ ಉತ್ತರೋತ್ತರ ಬಹಳ ಆಸೆ ಆಕಾಂಕ್ಷೆಗಳನ್ನು ಹುಟ್ಟಿಸುತ್ತ ನಡೆದಿದೆ. ನಿಮ್ಮೀ ಸಾಹಸಕ್ಕೆ ಜ್ಞಾನ-ವಿಜ್ಞಾನ ಪ್ರಸಾರಕ್ಕೆ ಈಶ್ವರನ ಬೆಂಬಲವಿದೆ. ಅನೇಕ ಶರಣು ಶರಣಾರ್ಥಿಗಳು.

ತಮ್ಮ ವಿಶ್ವಾಸಿ,

ಬೆಂಗಳೂರು. **ಪಂಡಿತ ಎರೇಸೀಮೆ ಚನ್ನಪ್ಪ**

ಪೂಜ್ಯರೇ,

ಕಲ್ಯಾಣದ ದೀಪವನ್ನು ಹಚ್ಚಿ, ಜನರನ್ನು ಸನ್ಮಾರ್ಗ ಪಥದಲ್ಲಿ ನಡೆಯುವಂತೆ ಮಾಡಿದ ನನ್ನ (ನಿಮ್ಮ) ಕಲ್ಯಾಣಕಿರಣಕ್ಕೆ ಧನ್ಯವಾದಗಳು.

ನಿಮ್ಮ ಪತ್ರಿಕೆಯಲ್ಲಿನ ಅನೇಕ ಸ್ತಂಭಗಳಲ್ಲಿ ಸಮಸ್ಯೆ-ಸಮಾಧಾನ ? ನಿಜವಾಗಿಯೂ ಸಮಾಧಾನ ನೀಡುವ ವಿಭಾಗ. ಏಪ್ರಿಲ್ ಸಂಚಿಕೆಯಿಂದ ಪ್ರಾರಂಭವಾದ "ವಿಶ್ವವಿಭೂತಿ ಬಸವಣ್ಣನವರು" ಜೀವನ ನಿರೂಪಣೆ ಅತ್ಯುತ್ತಮವಾಗಿದೆ. ಇಂಥ ಉತ್ಕೃಷ್ಟ ಮತ್ತು ವಿವರವಾದ ಲೇಖನವನ್ನು ಬೇರಾವ ಎಡೆಯಲ್ಲೂ ನಾವು ನೋಡಿರಲಿಲ್ಲ. ಇವರಿಂದ ಬಸವಣ್ಣನವರ ಬಗೆಗೆ ನಾವು ಹೆಚ್ಚು ತಿಳಿದಂತಾಗಿದೆ. ಅವರ ಬದುಕಿನ ಮುಂದಿನ ಘಟನಗಳನ್ನು ತಿಳಿಯಬೇಕೆಂಬ ಅದಮ್ಯ ಕುತೂಹಲದಿಂದ ಮುಂದಿನ ಸಂಚಿಕೆಗಳನ್ನು ಕಾಯುತ್ತಿರುತ್ತೇವೆ. ಕಲ್ಯಾಣ ಕಿರಣದ ಸೊಬಗು ಹೆಚ್ಚು ಹೆಚ್ಚಿನ ಜನಕ್ಕೆ ಸಿಗುವಂತಾಗಲೀ ಎಂದು ಹಾರೈಸುವೆ.

ಇಂಡಿ

ಆನಂದ ಈರಪ್ಪ ಸುರಪುರ



ಮತಾಂತರದ ಶಿಕ್ಷಣ

ದಕ್ಷಿಣ ಭಾರತದ ಸುಪ್ರಸಿದ್ಧ ಗಿರಿಧಾಮಗಳಲ್ಲೊಂದಾದ ಕೊಡೈಕನಾಲನ್ನು ಸಂದರ್ಶಿಸಬೇಕೆಂದು ಹದಿನಾರು ದಿವಸಗಳ ಪ್ರವಾಸದಲ್ಲಿ ಯೋಜನೆ ಇಟ್ಟುಕೊಂಡಿದ್ದೆವು. ಅದರಂತೆ ಹೋದೆವು ನಮ್ಮ ಬಸ್ ತೆಗೆದುಕೊಂಡು. (ಕೊಡೈಕನಾಲಿನ ನಿಸರ್ಗ ಸೌಂದರ್ಯದ ವರ್ಣನೆಯನ್ನೇನೂ ಈಗ ಮಾಡುತ್ತಿಲ್ಲ. ಅದಕ್ಕೆ ಸೂಕ್ತ ಸಂದರ್ಭವಿಲ್ಲ) ಒಂದು ಪ್ರವಾಸಿನಿಲಯದಲ್ಲಿ ಬೀಡು ಬಿಡಲು ಇಳಿಯುತ್ತಿದ್ದಂತೆಯೇ ಆಶ್ಚರ್ಯಕಾರಕ ಘಟನೆ ನಡೆಯಿತು. ನಮ್ಮ ಹಳೆಯ ಪರಿಚಯದ, ಧಾರ್ಮಿಕ ಮನೆತನದ, ಕಾಲೇಜು ಪ್ರಾಧ್ಯಾಪಕರೊಬ್ಬರು ಭೇಟಿಯಾದರು. ಅನ್ಯರಾಜ್ಯಗಳಲ್ಲಿ ಸುತ್ತಾಡುವಾಗ ತನ್ನ ಮಾತೃಭಾಷೆಯ ಮನುಷ್ಯ ಬೇಗನೇ ಮನಸೆಳೆಯುವುದು ಸ್ವಾಭಾವಿಕ. ಅದರಲ್ಲಿಯೂ ಇವರು ಕೇವಲ ಕನ್ನಡಿಗರಷ್ಟೇ ಅಲ್ಲ, ಶಿಕ್ಷಣ ಕ್ಷೇತ್ರದಲ್ಲಿ ಬಲ್ಲಿದರು, ಲಿಂಗಾಯತ ಧರ್ಮದ ನಿಷ್ಠಾವಂತ ವ್ಯಕ್ತಿಗಳು. ಇಷ್ಟು ದೂರದಲ್ಲಿ ಬಹಳ ದಿನಗಳನಂತರ ಕಂಡಾಗ ನಿಜಕ್ಕೂ ಸಂತೋಷವಾಯಿತು. ನಂತರ ಅಷ್ಟೇ ಬೇಗನೆ ವಿಷಾದದ ಛಾಯೆ ಆವರಿಸಿ, ಸಂತೋಷದ ಬಲೂನ್ ಕ್ಷಣಾರ್ಧದಲ್ಲಿ ಒಡೆಯಿತು ಎರಡೇ ಸಾಲುಗಳ ಸಂಭಾಷಣೆಯಿಂದ.

"ನೀವೂ ಪ್ರವಾಸಕ್ಕೆ ಬಂದಿದ್ದೀರಾ "

"ಇಲ್ಲ; ನನ್ನ ಮಗನನ್ನು ಸೇಂಟ್ ಜೋಸೆಫ್ ರೆಸಿಡೆನ್ಷಿಯಲ್ ಶಾಲೆಗೆ ಸೇರಿಸಲು ಬಂದಿದ್ದೆ."

"ತಿಂಗಳಿಗೆ ಶುಲ್ಕವೆಷ್ಟು?" "450 ರೂಗಳು. ಪ್ರವೇಶ ಇತ್ಯಾದಿ ಒಂದು ಸಾವಿರಕ್ಕೂ ಮೇಲೆ...."

"ಎಷ್ಟನೇ ಕ್ಲಾಸಿಗೆ ..."

"ಒಂದನೇ ಕ್ಲಾಸಿಗೆ ಅವನಿಗಿನ್ನೂ ಐದು ವರ್ಷ...."

ಮನಸ್ಸು ವಿಷಾದದ ಕಾರ್ಮೋಡಗಳಿಂದ ತುಂಬಿಹೋಯಿತು. ಹೊಟ್ಟೆಯಲ್ಲಿ ಹಾವು ಹರಿದಾಡಿದಂತಾಯಿತು. ಒಂದು ಶಬ್ದವನ್ನೂ ಮಾತನಾಡಲು ಇಚ್ಛಿಸದೆ ನಾನು ಮುಖ ತಿರುಗಿಸಿಕೊಂಡು ಒಳಹೋದೆ....

ನಮ್ಮೊಡನೆ ಪ್ರವಾಸದಲ್ಲಿದ್ದ ಶ್ರೀಮತಿ. ಸುಜಯಾದೇವಿ ಮಹಾಲಿಂಗಯ್ಯ, ಮನೋವಿಜ್ಞಾನದ ಪ್ರಾಧ್ಯಾಪಕಿಯವರಿಗೂ ಅದೇ ಅನುಭವ ಆಯಿತಂತೆ. ಎಲ್ಲರೂ ಒಂದು ರೀತಿಯ ತೀಕ್ಷ್ಣ ವಿದ್ಯುದಾಘಾತಕ್ಕೆ ಒಳಗಾದಷ್ಟು ಸ್ತಂಭೀಭೂತರಾದೆವು ಒಮ್ಮೆಗೇ.

ಅಂಥ ಅಚಾತುರ್ಯವೇನಾಯಿತು ? ಎಂದು ಅನೇಕರು ಭಾವಿಸಬಹುದು. ಇದು ಅಚಾತುರ್ಯವಷ್ಟೇ ಅಲ್ಲ, ತಿಳಿದೂ ಮಾಡುವ ತಪ್ಪು, ತಾಯಿ - ತಂದೆ ಮಾಡಬಹುದಾದದ್ದು. ಶ್ರೀ ಅರವಿಂದಘೋಷರ ತಂದೆ ಕೃಷ್ಣಧನ ಘೋಷರು ತನ್ನ ಮಗನಿಗೆ ಭಾರತೀಯ "ಅನಾಗರಿಕ ಸಂಸ್ಕೃತಿ"ಯ ಸೋಂಕು ಬಡಿಯಬಾರದು, ಭಾರತೀಯ ಭಾಷೆಗಳು ನಾಲಿಗೆಯ ಮೇಲೆ ಸುಳಿಯಬಾರದು ಎಂದು ಎಳೆಯ ಮಗುವನ್ನು ಬ್ರಿಟಿಷ್ ದಾದಿಯೊಡನೆ ಬೆಳೆಸಿ, ನಂತರ ಇಂಗ್ಲೆಂಡಿಗೆ ಮುಗ್ಧ ಮಕ್ಕಳನ್ನು ರವಾನಿಸಿದರು. ಆದರೆ ತಿಳುವಳಿಕೆ ಬಂದ ಮೇಲೆ ತಂದೆಯ ಈ ಕೃತಿಯ ಬಗ್ಗೆ ಮಕ್ಕಳಿಗೆ ತಿರಸ್ಕಾರ ಹುಟ್ಟುವುದು, ಜಿಗುಪ್ಸೆ ತಾಳುವುದನ್ನು ಶ್ರೀ ಅರವಿಂದರ ಬದುಕಿನಲ್ಲಿ ಕಾಣುತ್ತೇವೆ. ಯಥೇಚ್ಛವಾಗಿ ಹಣ ವ್ಯಯಿಸಿ ಹಸುಳೆಯನ್ನು ದೂರ ಇರಿಸಿ, ಮಾತೃವಾತ್ಸಲ್ಯದಿಂದಲೂ ದೂರಮಾಡಿ ಹಿಂದೂಗಳಿಗೆ ಹೊರತಾದ ವಿಲಕ್ಷಣ ಸಂಸ್ಕೃತಿಯಲ್ಲಿ ಬೆಳೆಸಿದರೆ, ಬುದ್ಧಿ ಬಂದಾಗ ಮಗನಿಗೆ ತನ್ನ ತಾಯಿ-ತಂದೆಯವರ ವರ್ತನೆ ಅರ್ಥವಾಗದ ಒಗಟಾಗಬಹುದು, ತಂದೆಯು ತನ್ನನ್ನು ಮಾತೃ ಸಂಸ್ಕೃತಿಯಿಂದ ದೂರಮಾಡಿದ್ದಕ್ಕೆ ಕಾಲಾನಂತರದಲ್ಲಿ ಕ್ರೋಧವೂ ಹುಟ್ಟಬಹುದು.

ನರ್ಸರಿ ಮತ್ತು ಒಂದನೆಯ ತರಗತಿಯ ಕಂದನನ್ನ ರೆಸಿಡೆನ್ಷಿಯಲ್ ಕ್ರೈಸ್ತ ಶಾಲೆಗೆ ಕಳಿಸಿದರೆ ಆಗಬಹುದಾದ ಪರಿಣಾಮಗಳನ್ನು ಚಿಂತಿಸೋಣ. ಒಂದು ವ್ಯಕ್ತಿಗತವಾಗಿ. ಎರಡನೆಯದು ಕೌಟುಂಬಿಕ - ಸಾಮಾಜಿಕವಾಗಿ ಮತ್ತು ಮೂರನೆಯದು ಧಾರ್ಮಿಕವಾಗಿ. ತೆಂಗಿನಕಾಯಿಯನ್ನು ಸಸಿ ಮಾಡಿದಾಗ ಕನಿಷ್ಠ ಒಂದು ವರ್ಷದ ಕಾಲಮಾನ ಪೂರೈಸುವ ತನಕ ಆ ಸಸಿಯನ್ನು ಮಾತೃಸ್ಥಾನದಿಂದ ಬೇರ್ಪಡಿಸಬಾರದು ಎಂಬ ಆಚರಣೆ ಇದೆ. ಆ ಸಸಿ ತನ್ನತನ ಸಂಪಾದಿಸಿಕೊಂಡು ಹೊಸನೆಲದಲ್ಲಿ ಬೇರುಬಿಡುವ ಸಾಮರ್ಥ್ಯ ಪಡೆಯುವ ತನಕ ಅದನ್ನು ಮೊಳಕೆಯ ಸ್ಥಾನದಿಂದ ಬೇರ್ಪಡಿಸದಿರುವುದು ಉಚಿತ. ಹಾಗೆಯೇ ಮಗುವು ಹತ್ತು ವರ್ಷಗಳ ತನಕವಾದರೂ ತಾಯಿ-ತಂದೆಯರ ಪ್ರೀತಿಯ ವಲಯದಿಂದ ದೂರ ಹೋಗಬಾರದು. ತನ್ನ ತಾಯಿ-ತಂದೆಯರನ್ನು ಗುರುತಿಸಲು ಮಗುವಿಗೆ ಹುಟ್ಟಿದಾನಂತರ ಕೆಲವು ತಿಂಗಳು ಬೇಕಾಗುತ್ತದೆ. ಅವರ ಪ್ರೀತಿಯನ್ನು ಅರಿತುಕೊಳ್ಳಲು ಕೆಲವು ವರ್ಷ ಬೇಕಾಗುತ್ತದೆ. ಹತ್ತುವರ್ಷಗಳ ಒಳಗೆ ಮಗುವಿನ ಪ್ರೀತಿಯ ಬೇರು ತನ್ನ ತಾಯಿ

ತಂದೆ ಕುಟುಂಬ ಸಹೋದರರಲ್ಲಿ ಬೇರು ಬಿಟ್ಟಿರುತ್ತದೆ. ಆ ಬಳಿಕ ಉತ್ತಮ ಶಿಕ್ಷಣ ಕೊಡಲು ಬೇರೆಡೆ ಇಟ್ಟರೂ ಅದು ತಾಯಿ-ತಂದೆಯರ ಸ್ಮರಣೆಯನ್ನಾದರೂ ಮಾಡಿಕೊಂಡು ಮಾನಸಿಕವಾಗಿ ವಾತ್ಸಲ್ಯವನ್ನು ಅನುಭವಿಸುತ್ತದೆ. ಸಂಪೂರ್ಣವಾಗಿ ಮಮತೆಯಿಂದ ಪೋಷಣೆಗೊಳ್ಳಬೇಕಾದ ಕಂದನನ್ನು ಕೃತಕ ಮನುಷ್ಯನನ್ನಾಗಿ, ಟಸ್‌ಪುಸ್ ಇಂಗ್ಲಿಷ್ ವ್ಯಾಮೋಹಿಯನ್ನಾಗಿ ಮಾಡಲು ನೂರಾರು ಮೈಲಿಗಳಾಚೆ ಕೊಂಡೊಯ್ಯುದೆಂದರೆ ಅರ್ಥಹೀನವೇ ಸರಿ. ಒಂದು ಹಸುವನ್ನೇ ತೆಗೆದುಕೊಳ್ಳೋಣ. ಜರ್ಸಿ ಅಥವಾ ಹೋಲ್‌ಸ್ಟೇನ್ ಇತ್ಯಾದಿ ವಿದೇಶೀ ತಳಿಗಳ ಹಸುಗಳ ಕರುಗಳನ್ನು ತಾಯಿಯ ಕೆಚ್ಚಲಿಗೇ ಸೋಕಿಸದೆ ಬಕೆಟಿನಲ್ಲಿ ಹಾಲು ಹಾಕಿ ಕುಡಿಸುತ್ತಾರೆ. ಈದ ತಕ್ಷಣ ತಾಯಿಯಿಂದ ಬೇರ್ಪಡಿಸಿ ಬೇರೆ ರೀತಿ ಹಾಲು ಹಾಕಿದರೆ ಹಸುವಿನ ಬಗ್ಗೆ ಕರುವಿಗೆ ಮಮತೆಯಾಗಲೀ, ಕರುವಿನ ಬಗ್ಗೆ ಹಸುವಿಗೆ ವಾತ್ಸಲ್ಯವಾಗಲೀ ಬೆಳೆಯದು. ಹಸು ನಿರ್ವಿಕಾರವಾಗಿ ಕಂಭದಂತೆ ನಿಂತು ಮೆಷಿನಿನಂತೆ ಹಾಲು ಸುರಿಸುತ್ತೆ. ಆದರೆ ನಮ್ಮ ನಾಡದನಗಳು ಕರುಗಳನ್ನು ಚೀಪಲು ಬಿಡದಿದ್ದರೆ ಸ್ವರ್ಗ-ನರಕಗಳು ಒಂದು ಮಾಡುವಷ್ಟು ಕುಣಿದಾಡುತ್ತವೆ. ತನ್ನ ಕರುವನ್ನು ನೆಕ್ಕುತ್ತ ಹಾಲು ಇಳಿಸುವುದು ಅದಕ್ಕೆ ಸ್ವರ್ಗೀಯ ಆನಂದ. ತಾಯಿಯಿಂದ ನೆಕ್ಕಿಸಿಕೊಂಡು ನಿಂತು ಸೊಗಸು ಅನುಭವಿಸುವುದು ಕರುವಿಗೂ ಸಂತೋಷದ ಸಂಗತಿ. ಅದನ್ನು ನೋಡುವಾಗ ನಿಸರ್ಗದ ಒಂದು ಲೀಲೆಯನ್ನು ಅರಿತು ನಮಗೂ ಆನಂದ. ಹುಲಿ ಮುಂತಾದ ಕ್ರೂರ ಪ್ರಾಣಿಗಳಲ್ಲೂ ಆ ಮಾತೃ-ಸುತ ಸಂಬಂಧ ವಿಲಕ್ಷಣ. ಹೀಗಿದ್ದಾಗ ತಾಯಿ-ತಂದೆಯರ ಮಮತೆಯ ಮಡಿಲ ಸರೋವರದಲ್ಲಿ, ಮಾತೃ ಸಂಸ್ಕೃತಿಯ ರವಿಕಿರಣದಿಂದ ಅರಳಬೇಕಾದ ಕಂದನೆಂಬ ತಾವರೆಯ ಮೊಗ್ಗನ್ನು ನೀರಿಲ್ಲದ ಕೆರೆಗೆ ಬಿತ್ತುವುದು ಯಾವ ನ್ಯಾಯ ?

ಮನೋವಿಜ್ಞಾನ ದೃಷ್ಟಿಯಿಂದಲೂ ಇದು ಅನ್ಯಾಯ. ಏಕೆಂದರೆ ಮಗುವಿನ ಮನೋದಾರ್ಢ್ಯತೆ ಬೆಳೆಯುವ ವಯಸ್ಸು ಹತ್ತರ ತನಕ. ಯಾರು ಹೊಟ್ಟೆಯಲ್ಲಿದ್ದಾಗಲೇ ಯಾವುದಾದರೂ ತಿರಸ್ಕಾರಕ್ಕೆ ಒಳಗಾಗುತ್ತಾರೋ ಮತ್ತು ಹುಟ್ಟಿದಾಗ ತಾಯಿಯ ಎದೆಹಾಲಿನಿಂದ ವಂಚಿತರಾಗುವರೋ, ಅಥವಾ ನಂತರ ತಾಯಿ-ತಂದೆಯರ ನೈಸರ್ಗಿಕ ವಾತ್ಸಲ್ಯದಿಂದ ದೂರವಾಗುತ್ತಾರೋ ಅವರು ಸಮಗ್ರವಾಗಿ ಬೆಳೆಯರು. ಎಳೆವರೆಯದಲ್ಲಿ ವಾತ್ಸಲ್ಯ ಪಡೆಯದವರೇ ಹೆಚ್ಚು ಬಾಲಾಪರಾಧಿಗಳಾಗುತ್ತಾರೆ ಎಂಬುದು ವೈಜ್ಞಾನಿಕ ಸಮೀಕ್ಷೆಯಿಂದ ತಿಳಿದುಬಂದ ಅಂಶ. ಶ್ರೀಮಂತಿಕೆಯ ಜನ ಬಾಲಾಪರಾಧಿಗಳಾಗದಿದ್ದರೂ, ಅವರ ಮಾನಸಿಕ ಮತ್ತು ಭಾವಾತ್ಮಕ ಬೆಳವಣಿಗೆ ಕುಂಠಿತವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಎರಡನೆಯದಾಗಿ ಹಿಂದು ಸಂಸ್ಕೃತಿಯ ರೆಸಿಡೆನ್ಷಿಯಲ್ ಶಾಲೆಗಳು ಒಂದು ರೀತಿ. ಅವರು ದೊಡ್ಡ ಮಕ್ಕಳನ್ನು ಇಟ್ಟುಕೊಳ್ಳಲಿ ಅಥವಾ ಒಂದನೆಯ ತರಗತಿಯಿಂದಲೇ ಇಟ್ಟುಕೊಳ್ಳಲಿ ಮಾತೆ, ಮಾತೃಭೂಮಿ ಮುಂತಾದವುಗಳ ಬಗೆಗಿರುವ

ಭಕ್ತಿ-ಅಭಿಮಾನ ಕಳೆಯರು. ತಾಯಿ-ತಂದೆ, ಗುರುಹಿರಿಯರಿಗೆ ಗೌರವ ನೀಡಲು ಶಿಕ್ಷಣ ಕೊಡುವರು. ಇಲ್ಲಿ ವ್ಯಕ್ತಿಯನ್ನು ಕುಟುಂಬ, ಸಮಾಜ, ರಾಷ್ಟ್ರ, ಧರ್ಮಗಳೊಡನೆ ಬೆಸೆಯುವ ಪ್ರಯತ್ನ ನಡೆಯುತ್ತದೆ. ಆದರೆ ಕ್ರೈಸ್ತ ಸಂಸ್ಕೃತಿಯ ರೆಸಿಡೆನ್ಷಿಯಲ್ ಶಾಲೆಗಳಲ್ಲಿ ಹಿಂದು ಮಕ್ಕಳನ್ನು ಅವರ ಮಾತೃ ಸಂಸ್ಕೃತಿಯಿಂದ ಬೇರ್ಪಡಿಸಿ, ತಮ್ಮ ಸಂಸ್ಕೃತಿಗೆ ಹೊಂದಿ:ಕೊಳ್ಳುವುದೇ ಪ್ರಮುಖ ಉದ್ದೇಶವಾಗಿರುತ್ತದೆ. ನಿಮ್ನವರ್ಗದ ದೀನದಲಿತ ಹಿಂದುಗಳು ಮತಾಂತರ ಹೊಂದಿದಾಗಲೆ ಅವರಿಗೆ ಹಾಲು-ಸಕ್ಕರೆ ಕುಡಿದಷ್ಟು ಸಂತೋಷ. ಇನ್ನು ಶ್ರೀಮಂತರು, (ಸಾಮಾನ್ಯವಾಗಿ ತಿಂಗಳಿಗೆ 450 ರೂಪಾಯಿ ತೆತ್ತು ಅಲ್ಲಿಗೆ ಕಳಿಸುವ ಪಾಲಕರು ಹಣ ಜಾಸ್ತಿಯಾದವರೇ ಇರಬೇಕಷ್ಟೆ) ಮತ್ತು ಏನು ಹೇಳಿದ್ದನ್ನು ಅಚ್ಚೊತ್ತಿಸಿಕೊಳ್ಳುವ ಮಕ್ಕಳು ಕೈಗೆ ಸಿಕ್ಕರಂತೂ ಸ್ವರ್ಗ ಒಂದೇ ಗೇಣು. ಅದೇ ಆಗ ಹುಟ್ಟಿದ ಆನೆ ಮರಿ ಹಸಿದ ಸಿಂಹದ ಬಾಯಿಗೆ ಸಿಕ್ಕಂತೆ. ಹತ್ತು ಹನ್ನೆರಡು ವರ್ಷಗಳ ಕಾಲ ಆ ಗರಡಿಯಲ್ಲಿ ಈ ಮಗ ಪಳಗಿಬಿಟ್ಟರಂತೂ ಅವನಿಗೆ ಹಿಂದೂಗಳ ನಮಸ್ಕಾರ ಪದ್ಧತಿ ಅಸಹ್ಯ, ಕ್ರಾಸ್ ಮಾಡುವುದು ಸರ್ವಶ್ರೇಷ್ಠ; ಅರವಿಂದ, ವಿವೇಕಾನಂದ, ಬಸವಣ್ಣ, ಅಕ್ಕಮಹಾದೇವಿ, ಬುದ್ಧ, ಮಹಾವೀರರು ತ್ಯಾಗ ಮಾಡಿದ ಮಹಾತ್ಮರೇ ಅಲ್ಲ; ಕೇವಲ ಏಸುವಷ್ಟೇ ಲೋಕಕ್ಕಾಗಿ ಬಲಿದಾನ ಮಾಡಿದ ಪ್ರವಾದಿ. ಉಪನಿಷತ್ತು, ವಚನಗಳು ಧರ್ಮಗ್ರಂಥಗಳೇ ಅಲ್ಲ. ಸತ್ಯವೇದವಾದ ಬೈಬಲ್ ಮಾತ್ರ ಸಂಪೂಜ್ಯ ಗ್ರಂಥ. ಆ ಬಾಲಕನ ಕಣ್ಣಲ್ಲಿ ಹಿಂದೂ ಪರಂಪರೆ ವಿಚಿತ್ರ, ವಿಲಕ್ಷಣ, ತಿರಸ್ಕರಣೀಯ. ಇದನ್ನು ಮಗುವಿಗೆ ಬಿತ್ತಲಿಕ್ಕಾಗಿ ತಾಯಿ-ತಂದೆ ತಿಂಗಳಿಗೆ 450 ರೂ. ವ್ಯಯಿಸುತ್ತಾರೆ. ಆಹಾ ! ಎಂಥಾ ತ್ಯಾಗ.

ನಾನು ಎಷ್ಟು ಕ್ರೂರಭಾವದಿಂದ ಬರೆಯುತ್ತಿರುವೆ ಎಂದು ಕೆಲವರಿಗೆ ಅನ್ನಿಸಬಹುದು. ಕ್ರೈಸ್ತರ ರೆಸಿಡೆನ್ಷಿಯಲ್ ಶಾಲೆಗಳಲ್ಲಿ ಓದಿದವರೆಲ್ಲ ಮತಾಂತರವಾಗುತ್ತಾರೆಯೇ ಎನ್ನಬಹುದು, ದಿನಬೆಳಗೆದ್ದರೆ ಸಮಾಜದಲ್ಲಿ ಓಡಾಡಿ, ವಿದೇಶೀ ಸಂಸ್ಕೃತಿಗಳಲ್ಲಿ ಮುಗ್ಧ ಮಕ್ಕಳು ಪ್ರವಾಹಕ್ಕೆ ಸಿಕ್ಕಂತೆ ತತ್ತರಿಸುವುದನ್ನು ಕಂಡು ಮನ ನೊಂದು ಬರೆಯುತ್ತಿರುವೆ. ಮತಾಂತರ ಎರಡು ಪ್ರಕಾರ. ಒಂದು ಶಾರೀರಿಕ, ಇನ್ನೊಂದು ಮಾನಸಿಕ. ತಾಯಿ-ತಂದೆ, ಕುಟುಂಬ, ಸಮಾಜಗಳ ಮಮತೆ ಇಲ್ಲದವನು ಆ ವಾತಾವರಣದ ಸೆಳವಿಗೆ ಸಿಕ್ಕು ಮತಾಂತರಗೊಳ್ಳುತ್ತಾನೆ. ಈ ಕಡೆ ಸೆಳೆತ ಜೋರಾಗಿದ್ದರೆ ಶಾರೀರಿಕವಾಗಿ ಮತಾಂತರಗೊಳ್ಳದಿದ್ದರೂ ಮಾನಸಿಕವಾಗಿ ಪರಿವರ್ತಿತನಾಗಿ, ಅದನ್ನೇ ಮೆಚ್ಚಿ ತನ್ನ ಧರ್ಮಸಂಸ್ಕೃತಿಗಳನ್ನು ಯಾವುದೇ ರೀತಿ ಅಭ್ಯಸಿಸದೆ ಅವಹೇಳನ ಮಾಡಲು ತೊಡಗುವನು. ಆಗ ನನಗೆ ವ್ಯಥೆಯಾಗುವುದು ಇದಕ್ಕೆ : "ಎಲೈ ಮೂರ್ಖ ಹಿಂದುಗಳೇ ನಿಮ್ಮ ಹಣದಿಂದ ನಿಮ್ಮ ಮಕ್ಕಳಿಗೆ ನಿಮ್ಮ ಸಂಸ್ಕೃತಿ–ಆದರ್ಶಗಳನ್ನು ಕಲಿಸುವ ಯೋಗ್ಯತೆ ನಿಮಗಿಲ್ಲವಲ್ಲಾ ! ನೀವು ದುಡಿದ ಹಣ ತೆತ್ತು, ನಿಮ್ಮ ಮಕ್ಕಳಿಗೆ ಪರಕೀಯ ಧರ್ಮಸಂಸ್ಕೃತಿ

ಗಳನ್ನು ಕಲಿಸುವರಲ್ಲ ; ನಿಮಗೇನಾಗಿದೆ ? ಬುದ್ಧಿಯಿಲ್ಲವೇ ? ತ್ಯಾಗವಿಲ್ಲವೇ ? ಸಂಘಟನೆಯಿಲ್ಲವೆ ?" ಈ ಸಂಪಾದಕೀಯ ಬರೆಯಲು ಕಾರಣೀಭೂತರಾದವರು ಶಿಕ್ಷಣ ತರಬೇತಿ ಕಾಲೇಜಿನಲ್ಲಿ ಅಧ್ಯಾಪಕರು, ಶಿಕ್ಷಣದ ಮನೋವಿಜ್ಞಾನದ ಬಗ್ಗೆ ಸಾಕಷ್ಟು ಅಭ್ಯಸಿಸಿದ (ಗ್ರಂಥಗಳನ್ನು ಬರೆದಿರಬಹುದಾದ) ವಿದ್ವಾಂಸರು. ತಾವೇ ಏಕೆ ಅನೇಕರಿಗೆ ಪ್ರೇರಣೆ ನೀಡಿ ಒಂದು ಮಾದರಿ ಶಾಲೆ ತೆರೆಯಬಾರದು ? ಅಂಥ ಸಂಘಟನಾ ಚತುರತೆಯನ್ನು ಏಕೆ ಹಿಂದೂಗಳು ಬೆಳೆಸಿಕೊಳ್ಳಬಾರದು ?

ಕ್ರೈಸ್ತ ರೆಸಿಡೆನ್ಷಿಯಲ್ ಶಾಲೆಯಲ್ಲಿ ದೀರ್ಘಕಾಲ ಬೆಳೆದ ಮಕ್ಕಳಲ್ಲಿ ಬಹುಪಾಲು ಜನ ಹಿಂದು ಸಂಸ್ಕೃತಿಗೆ ಹೊರತಾಗುತ್ತಾರೆ, ಅಥವಾ ಅವಹೇಳನ ಮಾಡುತ್ತಾರೆ ಎಂಬುದಕ್ಕೆ ಹಲವಾರು ನಿದರ್ಶನಗಳಿವೆ. ಅದರದಲ್ಲಿ ಒಂದನ್ನು ಪ್ರಸ್ತಾಪಿಸುತ್ತೇನೆ. ಕಳೆದ ಭಾನುವಾರ 8-7-1979 ರಂದು ಬೆಳಿಗ್ಗೆ 10 ಗಂಟೆಗೆ ರೋಟರಿ ಕ್ಲಬ್ಬಿನ ಸ್ತ್ರೀಯರ ವಿಭಾಗ Inner wheel ನ ಜಿಲ್ಲಾ ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಹೋಗಿದ್ದೆ. ಸಮಾರಂಭದ ಆರಂಭಕ್ಕೆ ಮುನ್ನ ಓರ್ವ ಮಹಿಳೆ ಭೇಟಿಯಾದರು. "ಮಾತಾಜಿ, ತಮ್ಮಿಂದ ನಮ್ಮ ಮನೆ ಉದ್ಧಾರವಾಯಿತು. ನಮ್ಮ ಹೆಣ್ಣುಮಕ್ಕಳು ನಮ್ಮ ಪಾಲಿಗೆ ಸಿಕ್ಕಿದರು. ಈಗ S.S.L.C. ಓದುತ್ತಿದ್ದಾರೆ. ಸ್ನಾನ, ಪೂಜೆ ಇಲ್ಲದೆ ಬಾಯಲ್ಲಿ ನೀರು ಹಾಕರು. ನಿಮ್ಮನ್ನು ಎಷ್ಟು ಕೊಂಡಾಡಿದರೂ ಸಾಲದು " ಎಂದರು. ಇದಕ್ಕೊಂದು ಹಿನ್ನೆಲೆಯಿದೆ. ಒಂದು ದೊಡ್ಡ ಜಿಲ್ಲಾ ಕೇಂದ್ರದಲ್ಲಿ ಪ್ರವಚನ ಮಾಡುತ್ತಿದ್ದೆ. ಓರ್ವ ಸದ್ಗೃಹಸ್ಥರು ಒಂದು ದಿನ ಬಂದರು. ಅವರು ಶ್ರೀಮಂತರು ಕುಲೀನ ಮನೆತನದ ಲಿಂಗವಂತರು. ಪತಿ-ಪತ್ನಿಯರಿಬ್ಬರೂ ಧರ್ಮನಿಷ್ಠರು. ಆದರೆ ತಮ್ಮ ಹೆಣ್ಣುಮಕ್ಕಳನ್ನು ಶಿಸ್ತು ಕಲಿಸಲೋಸುಗ ಕ್ರೈಸ್ತ ಶಾಲೆಗೆ ಸೇರಿಸಿದ್ದರು. ಆಗ ಅವರು ಕೇವಲ 11 ಮತ್ತು 12 ವರ್ಷಗಳ ಹುಡುಗಿಯರಿದ್ದಿರಬಹುದು. ಆದರೆ ತಾಯಿ-ತಂದೆಯರನ್ನು ವಿಪರೀತ ವಿಡಂಬನೆ ಮಾಡುತ್ತಿದ್ದರು. ಯಾವುದೇ ಹಿಂದು ಅಥವಾ ಲಿಂಗಾಯತ ಸಂಸ್ಕೃತಿಯನ್ನು ಪಾಲಿಸಲು ಸಿದ್ಧರಿಲ್ಲ. ಕುಂಕುಮವಿಡಲು, ಬಳೆತೊಡಲು ನಿರಾಕರಿಸುತ್ತಿದ್ದರು. ಮನೆಯಲ್ಲಿ ಪೂಜೆ ಮಾಡಲು ಒಪ್ಪುತ್ತಿರಲಿಲ್ಲ. ಬೆಳಗಾಗುತ್ತಲೇ ಏಸುವಿನ ಭಾವಚಿತ್ರ ದರ್ಶನ. ಮಲಗುವಾಗ ಬೈಬಲ್ ಓದಿ ಏಸುವಿಗೆ ಮೊಳಕಾಲೂರಿ ಕ್ರಾಸ್ ಮಾಡಿ ಮಲಗುವುದು. ಮಕ್ಕಳ ಈ ವರ್ತನೆಯಿಂದ ದಂಪತಿಗಳು ಸಂಪೂರ್ಣ ನಿರಾಶರಾಗಿದ್ದರು ; ಹತಾಶರಾಗಿದ್ದರು.

"ನಮಗೆ ಹಗಲಿರುಳು ಇದೇ ಚಿಂತೆಯಾಗಿದೆ. ನಮ್ಮ ಮಕ್ಕಳು ಎಲ್ಲಿ ಮತಾಂತರ ಹೊಂದುವರೋ ಎಂಬ ಭಯವಾಗಿದೆ. ನಮ್ಮ ದುಡ್ಡೂ ಖರ್ಚಾಯಿತು. ಶಿಸ್ತನ್ನು ಕಲಿಯುತ್ತಾರೆಂದು ಕಳಿಸಿದರೆ ಅದೇ ತರಬೇತಿ ಪೆಡಂಭೂತವಾಗಿದೆ. ನಾವೆಲ್ಲ ಅವರ ಕಣ್ಣಿನಲ್ಲಿ ಅನಾಗರಿಕರು, ಅಸಂಸ್ಕೃತರು. ಏನು ಮಾಡುವುದೀಗ...." "ಈಗ ಹೇಗಿದ್ದರೂ ರಜೆ ಇದೆ. ಇಲ್ಲಿಯ ನನ್ನ ಪ್ರವಚನ

ಮುಗಿಯುವ ತನಕ ನಮ್ಮೊಡನೆ ತಂದುಬಿಡಿರಿ. ಆನಂತರ ಹಿಂದಿನ ವಾತಾವರಣಕ್ಕೆ ಬಿಡಬೇಡಿರಿ." ನಾನು ಸೂಚಿಸಿದೆ. ಇಬ್ಬರೂ ಸಹೋದರಿಯರು ಬುದ್ಧಿವಂತರಾದ ಮುದ್ದುಮಕ್ಕಳು. ಅವರ ಕ್ರೈಸ್ತ ಪಾದ್ರಿನಿ ಹೇಳಿಕೊಟ್ಟ ಪ್ರಶ್ನೆಗಳ ಸಾಲೇ ಅವರ ಬಳಿ ಇದ್ದವು. ಒಂದೊಂದಾಗಿ ಉತ್ತರಿಸಿ, ಅವರ ಸಂಶಯ ನಿವಾರಿಸಿ ನಮ್ಮ ಸಂಸ್ಕೃತಿಯ ಹಿರಿಮೆಯನ್ನು ವೈಚಾರಿಕವಾಗಿ ವಿವರಿಸಿದಾಗ ಎಂಟು ದಿವಸಗಳ ನಂತರ ಬದಲಾದರು. ಅಂತೂ ಅದೇ ಪ್ರಭಾವ ಅವರಲ್ಲಿ ಉಳಿದಿದೆ, ಬೆಳೆದಿದೆ ಎಂಬುದನ್ನು ಕಳೆದ ವಾರ ಅವರ ತಾಯಿಯ ಬಾಯಿಯಲ್ಲಿ ಕೇಳಿ ಸಂತೋಷವಾಯಿತು.

ಇಂಥ ಪ್ರಸಂಗಗಳು ಹಲವಾರು. ಹಿಂದೂ (ಅಥವಾ ಲಿಂಗಾಯತ) ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳುವ ಮುನ್ನವೇ ಮಕ್ಕಳಿಗೆ ಪೂರ್ವಾಗ್ರಹ ಪೀಡಿತ ದೃಷ್ಟಿಕೋನ ಬೆಳೆದರೆ ಅವರು ತಿಳಿಯುವುದಿನ್ನೇನನ್ನು ?!

ಅಲ್ಲದೆ ಎಳೆಮಕ್ಕಳಿಗೆ ತಾಯಿ-ತಂದೆಯರ ಒಡನಾಟ ಕೇವಲ ಬೇಸಿಗೆ ರಜದಲ್ಲಿ ಮತ್ತು ದೀಪಾವಳಿಯಲ್ಲಿ ಬಾಕಿ ಎಲ್ಲ ಕಾಲ ಪಾದ್ರಿಗಳ ಸನಿಹದಲ್ಲಿ ಉದಾಹರಣೆಗೆ ಈಗ ಒಂದನೆ ತರಗತಿಗೆ ಸೇರಿಸಿರುವ ಈ ಸಂಪಾದಕೀಯದ ಪ್ರೇರಕರ ಮಗುವನ್ನು ತೆಗೆದುಕೊಳ್ಳೋಣ. 5 ವರ್ಷದ ಬಾಲಕ, ಹೊಟ್ಟೆಯಲ್ಲಿದ್ದ ಅವಧಿ ಹಿಡಿದು 6 ವರ್ಷವೆಂದು ಲೆಕ್ಕ ಹಾಕೋಣ. ಎಸ್.ಎಸ್.ಎಲ್.ಸಿ. ವರೆಗೆ ವರ್ಷಕ್ಕೆ ಮೂರು ತಿಂಗಳು ಮನೆಯಲ್ಲಿ ; ಅಂದರೆ ಎರಡೂವರೆ ವರ್ಷ. ಬಾಕಿ ಏಳೂವರೆ ವರ್ಷ ಪಾದ್ರಿಗಳ ಸಂಪರ್ಕದಲ್ಲಿ ; ಅದೂ ಮತಾಂತರವನ್ನೇ ಮುಖ್ಯ ಗುರಿಯಾಗಿ ಇಟ್ಟುಕೊಂಡವರಲ್ಲಿ ; ಹೇಳಿಕೊಟ್ಟದನ್ನು ನೀರನ್ನು ಹೀರುವ ಸ್ಪಂಜಿನಂತೆ ಗ್ರಹಿಸುವ ವಯಸ್ಸಿನಲ್ಲಿ. ಅಂತೂ ಭಾರತದಲ್ಲಿ ಪಾದ್ರಿಗಳ ಸಂಖ್ಯೆ ಬೆಳೆಯಲು ಬಹು ದೊಡ್ಡ ಉಪಕಾರವನ್ನು ನಮ್ಮ ಶ್ರೀಮಂತರು ಮಾಡುತ್ತಿದ್ದಾರೆ. ಪಾದ್ರಿಗಳ ತರಬೇತಿಗೆ ವಿದೇಶೀ ಹಣ ಬರುವದಷ್ಟೇ, ಅದನ್ನು ಉಳಿಸಿ, ತಮ್ಮ ಜೇಬಿನಿಂದ ವ್ಯಯಿಸಿ, ಹತ್ತಾರು ವರ್ಷಕಾಲ ಮಕ್ಕಳನ್ನು ಹಣ ಕೊಟ್ಟು ಓದಿಸಿ, ಕ್ರೈಸ್ತ ಸಮಾಜಕ್ಕೆ ಉಪಕಾರ ಮಾಡುತ್ತಾರೆ. ಇಷ್ಟು ದೀರ್ಘಕಾಲ ದೂರವಿಟ್ಟ ತಾಯಿ-ತಂದೆಯರ ಬಗ್ಗೆ ಹುಡುಗನಲ್ಲಿ Aversion ಒಂದು ಬಗೆಯ ಜಿಗುಪ್ಸೆ, ಉದಾಸೀನ ಸುಪ್ತ ಮನಸ್ಸಿನಲ್ಲಿ ಬೆಳೆಯುವುದರೊಡನೆ ದಾದಿಯಾಗಿ, ಬಂಧುವಾಗಿ ನೋಡಿಕೊಳ್ಳುವ ಪಾದ್ರಿಯ ಬಗ್ಗೆ ಮಮತೆ ಬೆಳೆಯಲು ತೊಡಗುತ್ತದೆ. ಹತ್ತು ಹದಿನೈದು (ಕಾಲೇಜು ಪೂರ್ತಿ ಆಗುವುದರಲ್ಲಿ) ವರ್ಷಕಾಲ ದೂರವಿದ್ದ ಮಗನಿಗೆ ಏಕೆ ತಾಯಿ-ತಂದೆಯರ ಬಗ್ಗೆ ಮೋಹ ಬೆಳೆಯಬೇಕು? ಈ ಉದಾಸೀನ ಮತಾಂತರಕ್ಕೆ ಹೆದ್ದಾರಿಯನ್ನು ನಿರ್ಮಾಣ ಮಾಡಿಕೊಡುತ್ತದೆ.

ಆದ್ದರಿಂದ ಹಿಂದೂ ಸಮಾಜದ ನೇತಾರರು, ಸಂಘಟಕರು, ಅಭಿಮಾನಿಗಳಿಗೆ ಒಂದು ಕಿವಿ ಮಾತು. ಅದರೊಟ್ಟಿಗೆಯೇ ಮಕ್ಕಳನ್ನು ಶಿಸ್ತು ಕಲಿಸಲು ಕೇವಲ

ಕ್ರೈಸ್ತ ರೆಸಿಡೆನ್ಶಿಯಲ್ ಶಾಲೆಗೆ ಬಿಡಬೇಕೆಂಬ ಮಾತಾ-ಪಿತೃಗಳಿಗೂ ಒಂದು ಕಿವಿ ಮಾತು.

ಹಿಂದೂ (ಲಿಂಗಾಯತ) ಪ್ರಮುಖರು, ಮಠಾಧಿಕಾರಿಗಳು, ವಿದ್ಯಾಸಂಸ್ಥೆಗಳೂ ಎಲ್ಲರಿಗೂ ಸಾಮೂಹಿಕ ಕಿವಿಮಾತು. "ನೀವೇನೂ ದಡ್ಡರಲ್ಲ. ನಿಮ್ಮಲ್ಲಿ ಹಣವಿದೆ (ಅವರಿಗೆ ಹೋಗುವ ಹಣ ನಿಮ್ಮದೇ!) ಎಲ್ಲಕ್ಕಿಂತ ಮಿಗಿಲಾಗಿ ಅಮೋಘ ಸಂಸ್ಕೃತಿ ಇದೆ. ಬೃಹತ್ತಾದ ಸಮಾಜವಿದೆ." ಈಗಾಗಲೇ ಮತಾಂತರಗೊಂಡವರನ್ನು ವಾಪಸ್ಸು ಕರೆದುಕೊಳ್ಳುವ ಮನಸ್ಸು, ತಾಕತ್ತು ಇಲ್ಲದಿದ್ದರಷ್ಟೇ. ಈಗಿರುವವರನ್ನಾದರೂ ಸರಿಯಾಗಿ ಸಂರಕ್ಷಿಸಿರಿ. ವೈಜ್ಞಾನಿಕವಾಗಿ, ವೈಚಾರಿಕವಾಗಿ, ವಿಶಾಲ ದೃಷ್ಟಿಕೋನದಿಂದ ನಿಮ್ಮ ಧರ್ಮ-ಸಂಸ್ಕೃತಿಗಳನ್ನು ನಿಮ್ಮ ಮಕ್ಕಳಿಗೆ ಕಲಿಸುವ ಯತ್ನಮಾಡಿರಿ. ರಾಷ್ಟ್ರೀಯ, ನೈತಿಕ, ಧಾರ್ಮಿಕ, ಮಾನವೀಯ ಮೌಲ್ಯಗಳ ಪ್ರಸರಣದ ಶಿಕ್ಷಣಕೊಡುವ ಆದರ್ಶ ರಸಿಡೆನ್ಶಿಯಲ್ ಶಾಲೆಗಳನ್ನು ತೆರೆಯಿರಿ. ಹಣವಿದ್ದವರು ಅಂಥವರಿಗೆ ನೆರವು ಕೊಡಿರಿ. ನೆಣವಿದ್ದ ತರುಣರೇ ಮುಂದೆ ಬಂದು ನಿಮ್ಮ ದೇಹ ಮನಸ್ಸುಗಳನ್ನು ಸಮರ್ಪಿಸಿ ದುಡಿಯಲು ಸಿದ್ಧರಾಗಿರಿ. ಡೊನೇಷನ್ ಹುಚ್ಚಿನಿಂದ ಬರೀ "ವ್ಯಾಪಾರಿ ಸಂಸ್ಥೆಗಳನ್ನು ನಿರ್ಮಾಣ ಮಾಡದಿರಿ "


ನಮ್ಮ ಹಿರಿಯರು,

ಏತದ್ದೇಶ ಪ್ರಸೂತಸ್ಯ ಸಕಾಶಾದಗ್ರಜನ್ಮನಃ ।
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ ॥

[ಈ ನಾಡಿನ ಅಗ್ರಜರ ಪದತಲದಲ್ಲಿ ಕುಳಿತು ಪ್ರಪಂಚದವರೆಲ್ಲ ತಮ್ಮ ತಮ್ಮ ಜೀವನದ ಪಾಠಗಳನ್ನು ಕಲಿಯಲಿ] ಎಂದು ಘೋಷಿಸಿದ್ದರು. ಅಂತಹ ಪರಂಪರೆಯ ವೀರಸಾಧಕರು ನಾವು ಎಂಬುದನ್ನು ನೆನಪಿಟ್ಟುಕೊಳ್ಳಿ.

ಮಹನೀಯರಾದ, ಮಕ್ಕಳನ್ನು ಹೆತ್ತು, ಹಣವನ್ನೂ ತೆತ್ತು ಸಂಸ್ಕೃತಿಯನ್ನು ಬಲಿಗೊಟ್ಟು ಭವಿಷ್ಯದಲ್ಲಿ ವಿಪತ್ತನ್ನು ಆಹ್ವಾನಿಸುವ ಹಿಂದೂ ಶ್ರೀಮಂತ ಮಾತಾಪಿತೃಗಳೇ ! ನಿಮಗೊಂದು ಕಿವಿಮಾತು. ಕ್ರೈಸ್ತ ಶಾಲೆಯಲ್ಲಿ ಓದಿದರೇ ಶಿಸ್ತು ಬರುವುದು, ವಿದ್ವಾಂಸರಾಗುವರು ಎಂಬ ಭ್ರಮೆ ಬಿಡಿರಿ. ನಮ್ಮ ರಾಷ್ಟ್ರೀಯ ನೇತಾರರಲ್ಲಿ ಸುರೇಂದ್ರನಾಥ ಬ್ಯಾನರ್ಜಿ, ನೆಹರೂಜಿ, ಅರವಿಂದ ಮಹರ್ಷಿ ಮುಂತಾದ ಕೆಲವರನ್ನು ಬಿಟ್ಟರೆ ಗಾಂಧೀಜಿ, ವಿವೇಕಾನಂದರು, ಸರ್. ಎಂ. ವಿಶ್ವೇಶ್ವರಯ್ಯ, ರಾಜಾರಾಮ್ ಮೋಹನ್‌ರಾಯ್ ಮುಂತಾದ ಬಹುಪಾಲು ಘನವಂತರು ಸರ್ಕಾರಿ ಶಾಲೆಯಲ್ಲಿ ಕಲಿತು, ಕಷ್ಟದ ಕುಲುಮೆಯಲ್ಲಿ ಬೆಂದು, ಬೀದಿ ದೀಪಗಳ ಕೆಳಗೆ ಅಭ್ಯಸಿಸಿ, ಸಾರ್ವಜನಿಕ ನಲ್ಲಿಗಳಲ್ಲಿ ಸ್ನಾನ ಮಾಡಿ, ಮುಂದೆ ಬಂದವರು. ಜನ

(೧೬ನೇ ಪುಟ ನೋಡಿ)



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು.

ಜಂಗಮ

ಹಸಿವು ತೃಷೆ ವ್ಯಸನಕ್ಕೆ ಕುದಿಕುದಿದು,
ಚರಾಚರದೊಳಗೆ ಲಯವಾಗಿ ಹೋದರಲ್ಲಾ !
ಉದರವ ಹೊರೆವ ಕೋಟಿ ವೇಷಧಾರಿಗಳೆಲ್ಲ ಜಂಗಮವಪ್ಪರೆ ?
ಅಲ್ಲ. ಲಿಂಗಸ್ಥಲವನರಿಯರು, ಜಂಗಮಸ್ಥಲವನರಿಯರು
ಪ್ರಸಾದಸ್ಥಲವನರಿಯರು. ಇಂತೀ ತ್ರಿವಿಧಸ್ಥಲವನರಿಯದ ಕಾರಣ
ಅವರ ಗಾವಿಲರ ಮಕ್ಕಳೆಂಬೆ ಕಲಿದೇವಾ.

—ಮಡಿವಾಳ ಮಾಚಿದೇವರು

ನೇರವಾದ ಅಭಿಪ್ರಾಯ, ತತ್ತ್ವನಿಷ್ಠೆಯ ನಡೆ-ನುಡಿಗಳಿಂದ ಕೀರ್ತಿವಿಶೇಷಿತರಾದ ಮಡಿವಾಳ ಮಾಚಿದೇವರು ಅನುಭವ ಮಂಟಪದ ಆಧಾರಸ್ತಂಭದಂತೆ ಕಾರ್ಯಗೈದ ಮಹಿಮರು. ಈ ವಚನದಲ್ಲಿ ಜಂಗಮನ ಕೆಲವು ಲಕ್ಷಣಗಳನ್ನು ಹೇಳುವರು.

ಹಸಿವೆ, ತೃಷೆಗಳು ಜೀವಂತ ಮನುಷ್ಯನ ಸ್ವಾಭಾವಿಕ ಕ್ರಿಯೆಗಳು. ಪ್ರಾಣದ ಗುಣಗಳಾದ ಇವು ಪ್ರಾಣವಿದ್ದಾಗ ಮಾತ್ರ ತೋರಿಬರುವುವು. ವ್ಯಸನವು ಮನಸ್ಸಿನ ಗುಣ. ಹಸಿವು, ತೃಷೆ, ವ್ಯಸನಗಳು ಸಹಜಪ್ರವೃತ್ತಿಗಳು, ಹುಟ್ಟಿನಿಂದ ದೇಹವನ್ನು ಆಶ್ರಯಿಸಿದವು. ಇವಿಲ್ಲದೆ ಬಾಳೂ ಸಾಧ್ಯವಿಲ್ಲ. ಇವುಗಳಿಲ್ಲದೆ ಬಾಳು ಸಾಧ್ಯವಿಲ್ಲ ಎಂದರೆ ಇವುಗಳಿಗಾಗಿ ಬಾಳುವುದೇ ಮಾನವನ ಗುರಿಯೆ ? ಹಸಿವು, ತೃಷೆ, ವ್ಯಸನಗಳ ತೃಪ್ತಿಗೆ ಬಾಳದಿರುವ ಪ್ರಾಣಿಗಳಾವು ? ಆದ್ದರಿಂದ ಇವುಗಳ ಆಧಾರದ ಮೇಲೆ ಜಗತ್ತನ್ನು ಮೂರು ಬಗೆಯಲ್ಲಿ ವಿಂಗಡಿಸಬಹುದು. ಕೇವಲ ಹಸಿವು, ತೃಷೆ, ವ್ಯಸನಗಳಲ್ಲಿಯೇ ಬದುಕುವ ಪ್ರಾಣಿವರ್ಗ. ಅವುಗಳನ್ನು

ಸಾಧನವಾಗಿ ಇಟ್ಟುಕೊಂಡು ಜೀವನದಲ್ಲಿ ಹೆಚ್ಚಿನ ಗುರಿ ಇಟ್ಟುಕೊಂಡ ಮನುಷ್ಯ ವರ್ಗ. ಅವುಗಳನ್ನು ಮೆಟ್ಟಿ, ಗೆದ್ದು, ಅತಿಮಾನವತ್ವವನ್ನು ಸಾಧಿಸಿ, ಮಹಂತತ್ವವನ್ನು ಪಡೆದುದು ಮಹಾತ್ಮರ, ವಿಭೂತಿಪುರುಷರ ವರ್ಗ. ಈ ಮೂರರಲ್ಲಿ ಜಂಗಮನದು ಮೂರನೆಯ ವರ್ಗದ ಸ್ಥಿತಿ. ಇದು ಗುಣವಾಚಕ ಪದ. ತತ್ತ್ವ ಪ್ರಧಾನ ಜೀವನ. ಇದು ಬಿಟ್ಟು ವಿಪರೀತಾರ್ಥದಲ್ಲಿ ವಿಕೃತ ರೀತಿಯಲ್ಲಿ ಜಂಗಮ ತತ್ತ್ವ ಬಳಕೆಯಾಗುತ್ತಿದೆ ಎರಡು ಬಗೆಯಲ್ಲಿ. 1. ಜಾತಿಯಿಂದ ಜಂಗಮತ್ವ ಬರುವುದೆಂಬುದು. 2. ಕೇವಲ ವೇಷಧಾರಣೆಯಿಂದ ಬರುವುದೆಂಬುದು.

ಜಾತಿಯಿಂದ ದೊಡ್ಡವನಾಗಲು ಬಯಸುವವನಾಗಲೀ, ವೇಷದಿಂದ ಕೀರ್ತಿ ಬಯಸುವವನಾಗಲೀ ತನ್ನಲ್ಲಿ ಜಂಗಮಲಕ್ಷಣಗಳಿವೆಯೋ ಎಂಬುದನ್ನು ನೋಡಿಕೊಳ್ಳಬೇಕೆ ವಿನಾ ಕೇವಲ ಹೊಟ್ಟೆಯ ಬಾಧೆ, ಮನಸ್ಸಿನ ಆಸೆಗಳಿಗಾಗಿ ಬದುಕುವವದಲ್ಲ. ಜಂಗಮತ್ವ ಜಂಗಮನ ಲಕ್ಷಣವೇನು. 1. ಅಂಗಸ್ಥಲ 2. ಜಂಗಮಸ್ಥಲ 3. ಪ್ರಸಾದಸ್ಥಲಗಳನ್ನು ಅರಿತಿರುವುದು. ಹಸಿವು ತೃಷೆ ವ್ಯಸನಗಳ ಗೆಲಿದಿರುವುದು.

ದೇವನಲ್ಲಿ ಶ್ರದ್ಧೆ; ಅವನ ಸ್ವರೂಪದ ಅರಿವು, ಅನನ್ಯವಾದ ಶರಣಾಗತಿ, ದೇವನಲ್ಲಿ ಮನಸ್ಸನ್ನು ನಿಲ್ಲಿಸಿ ಸತತವಾಗಿ ಅವನನ್ನು ಧ್ಯಾನಿಸುವುದು, ತಪ್ಪದೆ ಸಾನಂದದಿಂದ ಲಿಂಗಾರ್ಚನೆಗೈವುದು ಲಿಂಗಸ್ಥಲದ ಲಕ್ಷಣ. 'ಅರಿವೆ ತೊಟ್ಟವನು ಜಂಗಮನಲ್ಲ. ಅರಿವು ಹೊಂದಿದವ ಜಂಗಮ'. ಸಮಾಜದ ಪ್ರತಿನಿಧಿಯಂತೆ ಜನಜಾಗೃತಿ, ಸೇವೆ ಮಾಡುತ್ತ, ಗೋವುಗಳನ್ನು ಕ್ರೂರಮೃಗಗಳ ಕೈಗೆ ಸಿಗದಂತೆ ಕಾಪಾಡುವ ಗೋವಳಿಗನಂತೆ ಸಮಾಜವನ್ನು ಅಧರ್ಮ. ಅನೀತಿ, ನಾಸ್ತಿಕತೆಗಳ ಕೈಗೆ ಕೊಡದಂತೆ ಸಂರಕ್ಷಿಸುವವ ಜಂಗಮ. ಜನನ ಮರಣ ಗಮನಗಳ ಉಪಟಳವನ್ನು ಗೆಲಿದು ನಿಂತು, ಸುಜ್ಞಾನ-ಸದ್ಭಾವ-ಸ್ವಾನುಭೂತಿಗಳ ಮೇರುಗಿರಿಯಾಗಿ ಅಪೂರ್ವ ಯೋಗಸಿದ್ಧಿಯನ್ನು ಪಡೆದ ಮಹಾತ್ಮನೇ ಜಂಗಮಸ್ಥಲವನರಿತವನು. ದೇವನೆಂಬ ಮಹಾನ್‌ಶಕ್ತಿಯ ಅಡಿಯಲ್ಲಿ ಶರಣಾಗಿ, ಅವನ ಶ್ರೀ ಹಸ್ತಕ್ಕೆ ತನ್ನ ಸಮಸ್ತವನ್ನೂ ಅರ್ಪಿಸಿ, ಆ ಪರಮಾತ್ಮನ ಒಂದು ಅಂಗವಾಗಿ, ಅಥವಾ ಉಪಕರಣವಾಗಿ ತಾನು ಜೀವಿಸುವಾಗ, ಈ ಭಕ್ತನ ಜೀವನದ ತಟ್ಟೆಗೆ ಆ ದೇವನು ಬೇವನ್ನೇ ನೀಡಲಿ, ಬೆಲ್ಲವನ್ನೇ ನೀಡಲಿ, ದುಃಖ-ಸುಖ, ಮಾನ-ಅಪಮಾನ, ಕೀರ್ತಿ-ನಿಂದೆ-ಯಾವುದನ್ನೇ ನೀಡಿದರೂ ಅದೆಲ್ಲವೂ ಶಿವನ ಪ್ರಸಾದ ಎಂಬ ಚಿತ್ತಸಮತೆಯಿಂದ ಸ್ವೀಕರಿಸುವವನು ಯಾವನೋ ಅವನೇ ಪ್ರಸಾದಿಸ್ಥಲವನರಿತವನು. ತನ್ನ ಜೀವಿತವೆಲ್ಲ ಪರಮಾತ್ಮನ ನೈವೇದ್ಯ; ಅವನು ಅನುಗ್ರಹಿಸಿದುದೆಲ್ಲ ಪ್ರಸಾದ ಎಂಬ ಸಂತೃಪ್ತಿ ಜೀವನವಿಲ್ಲದೆ ಪ್ರಸಾದಿಸ್ಥಿತಿ ಅಳವಡದು.

ಹೀಗೆ ಮೂರು ಸ್ಥಲಗಳನ್ನು ಅಂದರೆ ಸ್ಥಿತಿಗಳನ್ನು ಅರಿತು ಅಳವಡಿಸಿಕೊಂಡವನು ಜಂಗಮ. ಹೀಗಲ್ಲದೆ ನಾಲಿಗೆಯ ತೃಪ್ತಿಗಾಗಿ ರುಚಿಗಳನ್ನರಸುತ್ತ ಭಕ್ತರ ಮನೆಯಲ್ಲಿ ಬೇಡಿಕಾಡಿ ಪಂಚಭಕ್ಷ್ಯ ಪರಮಾನ್ನಗಳನ್ನು ಮಾಡಿಸಿಕೊಂಡು ಉಂಡು, ಅದರಲ್ಲಿ ಉಪ್ಪಿಲ್ಲ ಇದರಲ್ಲಿ ಹುಳಿಯಿಲ್ಲ, ಇದು ರುಚಿಯಿಲ್ಲ ಎಂದು ಟೀಕಿಸುವವನಾಗಲೀ, ಅರ್ಚನೆ, ಧ್ಯಾನ, ಜಪ-ತಪಗಳಲ್ಲಿ ಆಸಕ್ತಿಯಿಲ್ಲದೆ ಸ್ತ್ರೀಯರೊಡನೆ ಚಪಲ ಚೇಷ್ಟೆಗಳನ್ನಾಡುತ್ತ ಆತ್ಮಚಿಂತನೆಯಲ್ಲಿ ತೊಡಗದೆ ಕೇವಲ ವ್ಯಸನಾಸಕ್ತನಾಗುವವನಲ್ಲ; ಸಮಾಜ-ರಾಷ್ಟ್ರಗಳ ಚಿಂತನೆಯನ್ನೇ ಮಾಡದೆ ತಾನು, ತನ್ನ ಸಂಸಾರ ಎಂದು ಆಲೋಚಿಸುವವನಾಗಲೀ ಜಂಗಮನಾಗಲುಂಟೆ ?

ಜಂಗಮತ್ವ ಅತ್ಯಂತ ಅಪೂರ್ವವಾದ ಒಂದು ಮಾನಸಿಕ ಸ್ಥಿತಿ, ಸಿದ್ಧಿ. ಇದು ಜನನದಿಂದ, ಜಾತಿಯಿಂದ ಎಂದೂ ಬರದು. 'ಬ್ರಹ್ಮಜ್ಞಾನಿಯಲ್ಲದಿದ್ದರೂ ಬ್ರಾಹ್ಮಣನ ಮಗ ಬ್ರಾಹ್ಮಣ' ಎಂಬಂತೆ ಜಂಗಮತ್ವ ಸ್ಥಾಪಿಸಿಕೊಳ್ಳದೆ ಜಂಗಮನ ಮಗ ಜಂಗಮ ಎನ್ನುವುದು ಹಾಸ್ಯಾಸ್ಪದ. ಡಾಕ್ಟರನ ಮಗನಾದ ಮಾತ್ರ ಈ. ಹೆ. ಗು. ಮನುಷ್ಯ ಡಾಕ್ಟರನಲ್ಲ. ಡಾಕ್ಟರನ ಮಗನಲ್ಲದಿದ್ದರೂ, ಕೇವಲ ಅವಿದ್ಯಾವಂತನಾದ ಕೃಷಿಕನೋರ್ವನ ಮಗನಿದ್ದರೂ ವೈದ್ಯಕೀಯ ಪದವೀಧರನಾದವನು ನಿಜವಾದ ಡಾಕ್ಟರನು. ವೈದ್ಯನಾಗಲು ಹೇಗೆ ಯಾವ ಜಾತಿಮತ ಪಂಥಗಳ ಗೊಂದಲವಿಲ್ಲವೋ ಹಾಗೆ ಜಂಗಮನಾಗಲು ಯಾವ ಜಾತಿಮತ ಪಂಥಗಳ ಗೊಂದಲವಿಲ್ಲ.

ವೇಷಹಾಕಿದ ಮಾತ್ರಕ್ಕೂ ಜಂಗಮತ್ವ ಸಮನಿಸದು ಕರಿಯಕೋಟು. ಹಾಕಿದವರೆಲ್ಲ ವಕೀಲರಲ್ಲ; ಸ್ಟೆತೆಸ್ಕೋಪ್ ಕೊರಳಿಗೆ ಹಾಕಿದವರೆಲ್ಲ ಡಾಕ್ಟರಲ್ಲ. ವಕೀಲನು ಕರಿಯಕೋಟು ಹಾಕಿದಾಗ ಅದಕ್ಕೆ ಶೋಭೆ. ನಿಜವಾದ ವೈದ್ಯನು ಹಾಕಿಕೊಂಡಾಗ ಸ್ಟೆಥಸ್ಕೋಪಿಗೆ ಶೋಭೆ. ಹಾಗೆ ಯೋಗ್ಯನಾದ ಜಂಗಮನು ಕಾಷಾಯಲಾಂಛನ ಧರಿಸಿದಾಗ ಶೋಭೆ. ಇಲ್ಲವಾದರೆ, ಜಾತಿಯಿಂದ ಕುಲತ್ವ ಅಳೆಯುವ ಮೂಢ ಸಂಪ್ರದಾಯಕ್ಕೆ ಕೊಡಲಿಪೆಟ್ಟು ಹಾಕಿ, ನೀತಿ-ಜ್ಯೋತಿಗಳಿಂದ ಶ್ರೇಷ್ಠತ್ವ ಅಳೆಯುವ ಗುಣಪ್ರಧಾನ ವ್ಯವಸ್ಥೆ ಕಲಿಸಿದ ಬಸವಣ್ಣನವರಿಗೆ, ಅವರ ಧರ್ಮಕ್ಕೆ ದ್ರೋಹ ವೆಸಗಿದಂತಾಗುತ್ತೆ.

ಪ್ರತಿಜ್ಞೆ

ನಿನ್ನ ಪಾದಗಳಾಣೆ ಓ ! ಭಾರತಮಾತೆ
ನನ್ನ ಜೀವನ-ವಿದ್ಯೆ ಮುಡಿಪು ನಿನ್ನ ಸೇವೆಗೆ ।
ಊರೂರು ಸುತ್ತುವೆ, ಸಂದಿಸುವೆ ನಿನ್ನ ಮಕ್ಕಳೆಲ್ಲರ
ಮೂಡಿಸುವೆ ನಾವೆಲ್ಲ ಒಂದು ಎಂಬ ಭಾವನೆಯ ।

—ಷಡಕ್ಷರಿ

ದಕ್ಷಿಣ ಭಾರತದ ಪ್ರವಾಸದ ಸಾರ

—ಸೋದರಿ ಭಾನುಮತಿ

ಪ್ರವಾಸದ ಸಾರ
ರ ಅಕ್ಷರದ ಕಾರುಭಾರ
ಓದಿ ನೋಡಿ ಸರಸರ
ಇಲ್ಲವೇ ಬಿಟ್ಟುಬಿಡಿರಿ
ನನ್ನದೇನಿಲ್ಲ ಅಭ್ಯಂತರ.

ಆಹಾ ಭವ್ಯಕಲೆಯೋ ಭಾರತವೇ ನಿನಗೆ ನೆಲೆ
ನೀ ಮಹಂತರ ಜೀವನವ ಹಿಡಿದಿಡುವ ಬಲೆ
ಸಂಸ್ಕೃತಿಯ ಸತ್ವವನು ಎತ್ತಿಹಿಡಿವ ತೊಲೆ
ಇದನರಿದು ಹೆಮ್ಮೆ ಪಟ್ಟು ಆನಂದಿಸದಿರೆ,
ಓ ಪ್ರವಾಸಿಗ ಇದ್ದೂ ವ್ಯರ್ಥ ನಿನ್ನ ತಲೆ !

ನೋಡಿಲ್ಲಿ ತಿರುಚ್ಚಿಯ ಜಂಬೂಕೇಶ್ವರ ದೇವಾಲಯ ದ್ವಾರ
ಕಲೆಯ ನೆಲೆಯಾಗಿ ನಿಂತಿಹ ಆ ವಿಸ್ತಾರ ಪಂಚಪ್ರಾಕಾರ
ಇಲ್ಲಿರುವ ಮೂರ್ತಿ ಜಲಲಿಂಗ ಸಾಕಾರ ಜಂಭೂಕೇಶ್ವರ
ಆಕಾರ, ಸಾಕಾರವೇನೇ ಇರಲಿ ಇಲ್ಲಿರುವುದು ಭವ್ಯಕರ
ಸಂಸ್ಕೃತಿಯ ಶಿಲ್ಪಿಯ ಕೈಚಳಕದ ಶಿಲ್ಪಕಲೆಯ ಸಾರ !
ಮತ್ತೊಮ್ಮೆ ನೋಡ ಬಾ ಶುಚೀಂದ್ರುಂನ ಗೋಪುರ
ಭವ್ಯವಾಗಿ ನಿಂತಿಹುದು 134 ಅಡಿ ಎತ್ತರ
ದೇವಾಲಯದ ತುಂಬೆಲ್ಲ ಕಲೆಯ ಆಗರ
ಕಲ್ಲುಕಂಭದೊಳು ಸಂಗೀತ ಕೇಳಿ ನೀ ಪಡು ಆಶ್ಚರ್ಯ.
ಶಂಖುವಿನ ಪುಡಿಯಿಂದ ನಿರ್ಮಿಸಿರುವ ಭವ್ಯ ಬಸವೇಶ್ವರ
ಭಾರತದ ಶಿಲ್ಪಕಲೆಗೆ ಸಾಕ್ಷಿಯಾಗಿದೆ ಈ ಊರ !
ಇನ್ನುಳಿದ ಮಧುರೆ ತಂಜಾವೂರ್ ಚಿದಂಬರ
ಚೆನ್ನಾದ ಪಳನಿ ಗುರುವಾಯೂರ ರಾಮೇಶ್ವರ
ತ್ರಿವೇಂದ್ರುಮ್, ಕುಂಭಕೋಣಮ್ ತಿರುಚಂದೂರ
ಇಲ್ಲೆಲ್ಲಾ ಇದೆ ಶಿಲ್ಪಕಲೆಯ ಸಾರ. ಆದರೆ
ಎಲ್ಲೆಲ್ಲೂ ಹೇರಿದೆ ಮೂರ್ತಿಗೆ ಆಭರಣ ಭಾರ
ಆದರೂ ಗರ್ಭಗುಡಿಯ ಹೊರಗಿದೆ ಚಿತ್ರಕಲಾ ಸೌಂದರ್ಯ

ಹಾಗೂ ಕೆಲವೆಡೆ ಇವೆ ಸುವರ್ಣಕಲಶ ಗೋಪುರ.
ಕೈಬೀಸಿ ಕರೆಯುವುದು ಕನ್ಯಾಕುಮಾರಿ
ನಿಂತಿಹಳಿಲ್ಲಿ ಶಿವಂಗೂಲಿದ ಯೋಗಿಣಿ ಕುವರಿ.
ಧೀಮಂತ ಮೂರ್ತಿ ವಿವೇಕಾನಂದ ಸ್ಮಾರಕ
ಆಗಿದೆ ಅದಕೆ ವೆಚ್ಚ 1 ಕೋಟಿ 4 ಲಕ್ಷ
ಅದರ ಸುತ್ತಲೂ ಭೋರ್ಗರೆವ ನೀರೇ ನೀರು
ಅಲ್ಲಿಗೆ ಹೋಗಲಿಕೆ ದೋಣಿಯ ತೇರು !

ಮಹಾತ್ಮ ಗಾಂಧೀ ಮಂಟಪ, ವಿವೇಕಾನಂಧ ಕೇಂದ್ರ,
ಇದು ಈಗ ಬೆಳೆಯುತ್ತಿರುವ ಬಿದಿಗೆಯ ಚಂದ್ರ
ಎಲ್ಲರ ಮನಸೆಳೆಯುವುದು ತ್ರಿವಳಿ ಸಮುದ್ರ
ಹಿಂದೂಸಾಗರ, ಬಂಗಾಳಕೊಲ್ಲಿ ಅರಬಿಸಮುದ್ರ
ನೋಡಬನ್ನಿ ರಿಲ್ಲಿ ಜಗದಾಧಾರ ಉದಿಸುವ ಪ್ರಭಾಕರ.
ಇಲ್ಲಿಂದ ನೀ ನಡೆ ಕೊಡೈಕನಾಲ್ ಗಿರಿಧಾಮಕ್ಕೆ ನೇರ
ನಿನಗಲ್ಲಿ ಕುಳಿರ್ಗಾಳಿಯ ಎಡಬಿಡದ ಚಾಮರ
ಆದರೆ ಬಹಳಷ್ಟು ಬೇಕಿಲ್ಲಿ ಹೊಡೆಯಲು ಛಾದರ
ಬಂದನದೋ ದಿನಕರ ಹೊರಡು ನೋಡಲು ಪರಿಸರ

ಪ್ರಕೃತಿ ಮಾತೆಯ ಮಗುವಾಗಿ ಸವಿ ಆ ಸೌಂದರ್ಯ
ಅಲ್ಲಿರುವ ಸರೋವರ, ತುಂಬಿರುವ ಬೆಳ್ದಾವರೆ
ಬಗೆಬಗೆಯ ಪುಷ್ಪಗಳು ಮಾರುತನಿಂ ತೊನೆದಾಡುವ ತೆರೆ
ಭೋರ್ಗರೆಯುವ ಸಿಲ್ವರ್ ಕ್ಯಾಸ್ಕೇಡ್ ಜಲಪಾತದ ನೀರು
ತಲೆ ತಿರುಗಿಸುವ ರುದ್ರಸುಂದರ ಕಣಿವೆ ಭಯಂಕರ
ಕೊಡೈಕನಾಲ್ ದಕ್ಷಿಣ ಭಾರತದ ಪ್ರಸಿದ್ಧ ಗಿರಿಧಾಮ
ನೀಡುವ ಅನುಭವ ಸುಖಕರ ಸುಂದರ ಅನುಪಮ
ಮುಂದೆ ಬಂದೆವು ಆಂಧ್ರಕ್ಕೆ, ಸುಪ್ರಸಿದ್ಧ ತಿರುಮಲಾದ್ರಿ
ಬೆಟ್ಟದ ಮೇಲಿದೆ ತಿರುಪತಿ. ಅಯ್ಯಯ್ಯೋ
ನಮಗಾಗುವುದಲ್ಲಿ ಬಹುತರದ ಫಜೀತಿ !
ಅದೇನು ಅಲ್ಲಿಯ ರೀತಿ ನೀತಿ ಮೂರ್ಖಖ್ಯಾತಿ
ಖಾಲಿ ತಲೆಯವರ ಕೂದಲು ಕೊಡುವಂಥ ಸರತಿ
ಎಲ್ಲೆಲ್ಲೂ ಬೋಳು ತಲೆಗಳೇ ತಿಮ್ಮಪ್ಪನಿಗೆ ಪ್ರೀತಿ
ಅವನಿಗೆ ಮಾತ್ರ ವಜ್ರ ಕಿರೀಟ ಇದು ವಿಚಿತ್ರ ರೀತಿ
ತಿಮ್ಮಪ್ಪ ಶ್ರೀಮಂತ, ಧನವ ನೀಡುವವನೆಂದು ಪ್ರತೀತಿ

ಅಂತೆಯೇ ಕಾಳಸಂತೆಯು ಜನಕ್ಕೆ ಅತ್ಯಂತ ಪ್ರೀತಿ !
ಅಯ್ಯಪ್ಪಾ ಎಲ್ಲೆಲ್ಲೂ ಜನರ ಪಿತಿ-ಪಿತಿ
ನಿಲ್ಲಬೇಕಿಲ್ಲಿ ಧರ್ಮದರ್ಶನಕ್ಕೆ 4 ಗಂಟೆ ಸರತಿ
ಅರ್ಚಕರಿಗೆ ಲಂಚಕೊಟ್ಟರೆ ಬಲು ಬೇಗ ಕಾಣುತಿ
ಒಳಹೋಗಿ ನೋಡಿದರೆ ಬರೀ ಕರಿಯಮೂರ್ತಿ
ವ್ಯಾಪಾರ ಮನೋಭಾವ ಆಧ್ಯಾತ್ಮ ಖಾಲಿಪೂರ್ತಿ
ಹೊಲಸು ಹೊಲಸಾದ ಪರಿಸರ ಮನಸ್ಸಿಗೆ ನಿಃಶಕ್ತಿ
ಸಾಕು ಸಾಕಾಗುವುದಿಲ್ಲಿ ಇದ್ದರೆ ಕೊಂಚವಾದರೂ ಮತಿ.
ಬುದ್ಧಿಜೀವಿಗೆ ಬೇಸರವನೀವ ತಿರುಪತಿಯನುಳಿದು,
ಹೇ ಪ್ರವಾಸಿಗ, ಭಾರತದ ಪ್ರತಿ ಕಲ್ಲು ಮಾತನಾಡುತ್ತದೆ
ಕತೆ ಹೇಳುತ್ತದೆ, ಮನವ ಮುದಗೊಳಿಸುತ್ತದೆ
ಹೆಮ್ಮೆ ಅಭಿಮಾನಿಗಳ ಉಕ್ಕಿಸುತ್ತದೆ, ಬಾಳ ಕಲಿಸುತ್ತದೆ
ನೋಡು, ಜೀವನವೇ ಒಂದು ಸತತ ಪ್ರವಾಸ
ನಾವು-ನೀವೆಲ್ಲರೂ ಶಿವಪಥದ ಪಥಿಕರು
ಪ್ರವಾಸದಲ್ಲಿ ಆಗುವುದು ತುಸು ಪ್ರಯಾಸ
ಆದರೇನು ನೋಡಸಿಗುವುದು ಬಹು ಸ್ವಾರಸ್ಯ
ಆಗುವುದು ಸಂದರ್ಶಕನ ಬುದ್ಧಿಯ ವಿಕಾಸ
ಕೊನೆಗೆ ಸಿಗುವುದು ಎಲ್ಲರೊಡನೆ ಹೇಳುವ ಸಂತಸ.

★

(೧೦ನೇ ಪುಟದಿಂದ)

ಸಾಮಾನ್ಯರ ಬದುಕು, ದೇಶದ ಜೀವನಾಡಿಯ ಚಲನೆ ತಿಳಿಯುವ ವಿದ್ಯೆಕೊಡಿಸಿ. ಹಣ ಖರ್ಚುಮಾಡಿ ಆದರ್ಶ ಮಗನನ್ನು ಪಡೆಯಿರಿ. ಬಡಬಗ್ಗರನ್ನು ಜನಪದವನ್ನು ಅನಾಗರಿಕರೆಂದು ತಿರಸ್ಕರಿಸುವವನನ್ನಲ್ಲ. ಈಗ ಹಿಂದುಗಳು ಜಾಗ್ರತರಾಗಿ ಅಧಿಕಧಿಕವಾಗಿ ರಸಿಡೆನ್ಷಿಯಲ್ ಶಾಲೆ ತೆಗೆಯುತ್ತಿದ್ದಾರೆ (ನಾವು ತೆರೆದಿದ್ದೇವೆ). ಅದಕ್ಕೆ ಮಕ್ಕಳನ್ನು ಸೇರಿಸಿರಿ. ಅವಕಾಶ ಸಿಗದಿದ್ದರೆ ನಿಮ್ಮೊಡನೆಯೇ ಬೆಳೆಸಿ. ಆತುರಮಾಡಿ ಕ್ರೈಸ್ತ ರೆಸಿಡೆನ್ಷಿಯಲ್ ಶಾಲೆಗೆ ಕಳಿಸಬೇಡಿರಿ. It is better to be uneducated than wrongly educated. ಏನೇನೋ ಕಲಿಯುವುದಕ್ಕಿಂತ ಏನೂ ಕಲಿಯದಿರುವುದು ವಾಸಿ. ರಾಷ್ಟ್ರದ ನಾಳಿನ ಪ್ರಜೆಗಳಾದ ನಿಮ್ಮ ಒಡಲಿನ ದೀಪಗಳು ನಿಮ್ಮ ಮನೆಯನ್ನು ಬೆಳಗುವಂತಾಗಲಿ, ರಾಷ್ಟ್ರದ ಗುಡಿಯಂ ಬೆಳಗುವ ನಂದಾದೀವಿಗಳಾಗಲಿ. ಅಂಥ ಕೊಡುಗೆ ಕೊಡುವ ಧರ್ಮವಂತರು ನೀವಾಗಿ, ತಾಯಿ ಭಾರತೀಯ ಪಾದಾರ್ಚನೆಯ ಸುಮವಾಗಿರಿ.

—ಜಗದ್ಗುರು ಮಾತೆ ಮಹಾದೇವಿ

ದಾಂಪತ್ಯ ಧರ್ಮ -5

ಕರ್ನಾಟಕದ ಗಾಂಧಿ, ರಾಷ್ಟ್ರಧರ್ಮ ದ್ರಷ್ಟಾರ ಶ್ರೀ ಹರ್ಡೇಕರ್ ಮಂಜಪ್ಪನವರ ವಿಚಾರಗಳು.

[ಒಂದು ದಿನ ಇಂಟರ ತರಗತಿಯಲ್ಲಿ ಪ್ರಯಾಣ ಮಾಡುವಾಗ ಮದುವೆಯ ಸಂಬಂಧವಾಗಿ ನಡೆದ ಸಂಭಾಷಣೆಯನ್ನು ಮುಂದುವರಿಸಿ ಪ್ರಶ್ನೋತ್ತರ ರೂಪದಲ್ಲಿ ಈ ಕೆಳಗೆ ವಿವರಿಸಿದ್ದಾಗಿದೆ]

ಪ್ರಶ್ನೆ : ಜನರು ಮದುವೆಯನ್ನು ಮುಂಚೆ ಎಂಟು ಹತ್ತು ದಿನ ಬಹು ಸಂಭ್ರಮದಿಂದ ಮಾಡುತ್ತಿದ್ದರು. ಕೆಲವು ಧನಿಕರಂತೂ ೨೦-೩೦ ಸಾವಿರ ರೂಪಾಯಿಗಳನ್ನು ಲಗ್ನದಲ್ಲಿ ದುಂದುಗಾರಿಕೆಗೆ ವೆಚ್ಚ ಮಾಡುತ್ತಿದ್ದರು. ಈಗ ಅವೆಲ್ಲಾ ನಿಂತು ಹೋಗಿವೆ.

ಈಗ ಒಂದೆರಡು ದಿನಗಳಲ್ಲಿಯೇ ಲಗ್ನವನ್ನು ಮುಗಿಸುತ್ತಾರೆ. ಕೆಲವರಂತೂ ಅರ್ಧತಾಸಿನಲ್ಲಿ ಒಂದೆರಡು ರೂಪಾಯಿವೆಚ್ಚದಲ್ಲಿ ಲಗ್ನವನ್ನು ಸಾಂಗಗೊಳಿಸುತ್ತಾರೆ. ಹೀಗೆ ಎಲ್ಲರೂ ಮಾಡುವುದು ಒಳ್ಳೆಯದಲ್ಲವೇ ?

ಉತ್ತರ : ಕಾಲಸ್ಥಿತಿಯು ಬೇರೆಯಾದಂತೆ ನಾವು ಕಾರ್ಯಮಾಡುವ ರೀತಿಯೂ ಬೇರೆಯಾಗಬೇಕಾದುದು ಅತ್ಯಗತ್ಯ. ಮುಂಚಿನಂತೆ ಮದುವೆಗೆ ಹಣವನ್ನೂ ಕಾಲವನ್ನೂ ಕಳೆಯುವುದು ಸರಿಯಲ್ಲ. ಆದರೆ ಲಗ್ನ ಸಂಸ್ಕಾರವು ಜನಾಂಗದಲ್ಲಿ ಯಾವ ಉದ್ದೇಶದಿಂದ ಏರ್ಪಟ್ಟಿತೋ ಅದನ್ನು ಮಾತ್ರ ನೆರವೇರಿಸಬೇಕು.

ಪ್ರಶ್ನೆ : ಲಗ್ನವು ಜನಾಂಗದಲ್ಲಿ ಎಂದಿನಿಂದ ಪ್ರಾರಂಭವಾಯಿತು ? ಮತ್ತು ಅದರ ಉದ್ದೇಶವೇನು ?

ಉತ್ತರ : ಜನರು ಮೊದಲು ಕಾಡುಸ್ಥಿತಿಯಲ್ಲಿದ್ದಾಗ ಲಗ್ನಸಂಸ್ಕಾರವೇ ಇರಲಿಲ್ಲ. ಬೇರೆ ಪ್ರಾಣಿಗಳಂತೆ ಸ್ತ್ರೀ ಪುರುಷರು ಇಚ್ಛಾಭೋಗಿಗಳಾಗಿದ್ದರು. ಮುಂದೆ ಸುಧಾರಿಸುತ್ತಾ ಬಂದಂತೆ ಸ್ತ್ರೀ-ಪುರುಷರ ಸಂಬಂಧದಲ್ಲಿ ನಿಯಮಗಳನ್ನು ಮಾಡಿಕೊಳ್ಳುತ್ತಾ ಬಂದರು.

ಪಾಂಡುರಾಯನು ಕುಂತಿಗೆ ಹೀಗೆ ಹೇಳಿದನೆಂದು ಮಹಾಭಾರತದ ಆದಿಪರ್ವ ೧೨೨ನೆಯ ಅಧ್ಯಾಯದಲ್ಲಿ ಬರೆದಿದೆ.

"ಉದ್ದಾಲಕನೆಂಬ ಋಷಿಗೆ ಶ್ವೇತಕೇತು ಎಂಬ ಒಬ್ಬ ಮಗನಿದ್ದನು. ಒಂದು ದಿನ ಆತನ ತಾಯಿಯನ್ನು ಕರೆದುಕೊಂಡು ಹೋಗಲು ಮಗನು ಬಹು ಸಿಟ್ಟಾದನು.

ಆಗ ಆ ಋಷಿಯು ಹೀಗೆ ಹೇಳಿದನು. "ಮಗನೇ, ನೀನು ಹೀಗೆ ಕೋಪಿಸಬೇಡ. ಪಶುಗಳಂತೆ ಮನುಷ್ಯರು ಕೂಡ ಆಯಾಯ ವರ್ಣದವರಲ್ಲಿ ಯಥೇಚ್ಛವಾಗಿ ಸಂಪರ್ಕ ಮಾಡುತ್ತಾರೆ. ಇದು ಸನಾತನ ಧರ್ಮ." ತಂದೆಯ ಈ ಮಾತು ಮಗನಿಗೆ ಯುಕ್ತ ತೋರಲಿಲ್ಲ. ಆದುದರಿಂದ ಆತನು ಲಗ್ನ ಸಂಸ್ಕಾರವನ್ನು ಪ್ರಾರಂಭಿಸಿದನು

ಜನರು ಲಗ್ನಸಂಸ್ಕಾರವಿಲ್ಲದೆ ಬೇರೆ ಪ್ರಾಣಿಗಳಂತೆ ತಮ್ಮ ಕಾಮವಾಸನೆಯನ್ನು ಒಂದು ಕಾಲದಲ್ಲಿ ತೃಪ್ತಿಗೊಳ್ಳುತ್ತಿದ್ದರೆಂದು ಮೇಲಿನ ಸಂಗತಿಯಿಂದ ಗೊತ್ತಾಗುವುದಿಲ್ಲವೆ ?

ಬೇರೆ ಬೇರೆ ಜನಾಂಗಗಳು ಸಾವಿರಾರು ವರುಷಗಳ ಅನುಭವದ ಮೇಲಿಂದ ಲಗ್ನದ ರೀತಿ ನೀತಿಗಳನ್ನು ಸುಧಾರಿಸಿಕೊಳ್ಳುತ್ತಾ ಬಂದವು. ಈಗಲೂ ಕೂಡ ಅಸಂಖ್ಯ ಸಮಾಜಗಳ ಲಗ್ನಪದ್ಧತಿಗಳು ಅಸಂಖ್ಯವಾಗಿವೆ. ಒಂದು ಸಮಾಜದ ಲಗ್ನ ಪದ್ಧತಿಯು ಅದರ ಉದ್ದೇಶವನ್ನೂ ಆ ಸಮಾಜದ ಸಭ್ಯತೆಯನ್ನೂ ತಿಳಿದುಕೊಳ್ಳಲು ಒಂದು ಒರೆಗಲ್ಲೆಂದು ಹೇಳಬಹುದು. ಏಕೆಂದರೆ, ಸಮಾಜವೆಂಬ ಗಿಡ ಉಂಟಾಗುವುದು ದಂಪತಿಗಳ ಬೀಜದಿಂದಲ್ಲವೆ ?

ಅನೇಕ ಸಮಾಜಗಳ ಲಗ್ನಪದ್ಧತಿಗಳೇನೋ ಅನೇಕವಾಗಿದ್ದರೂ ಅವುಗಳ ಉದ್ದೇಶಗಳಲ್ಲಿ ಮನುಷ್ಯನ ಕಾಮವಾಸನೆಯನ್ನು ಕ್ರಮಗೊಳಿಸುವುದು. ಸಂತಾನದ ಅಭಿವೃದ್ಧಿಗೊಳಿಸುವುದು ಮತ್ತು ಸಂಸಾರ ಯಾತ್ರೆಯನ್ನು ಸ್ತ್ರೀ ಪುರುಷರು ಪರಸ್ಪರ ಸಹಾಯ ಸಹಕಾರಗಳಿಂದ ಸಾಗಿಸಲು ನೆರವಾಗುವುದು, ಎಂಬ ಮೂರು ವಿಧಗಳೇ ಮುಖ್ಯವಾದವುಗಳು.

ಈ ಉದ್ದೇಶಗಳನ್ನು ನೆರವೇರಿಸಿಕೊಳ್ಳಲು ಬೇರೆ ಬೇರೆ ಜನಾಂಗಗಳು ತಮ್ಮ ತಮ್ಮ ಅನುಭವದ ಮೇಲಿಂದ ಬೇರೆ ಬೇರೆ ರೀತಿ-ನೀತಿಗಳನ್ನು ಗೊತ್ತುಪಡಿಸಿಕೊಳುತ್ತಾ ಬಂದವು.

ಪ್ರಶ್ನೆ : ಎಲ್ಲರೂ ಲಗ್ನವನ್ನು ಒಂದೇ ರೀತಿಯಲ್ಲಿ ಮಾಡುವುದು ಮತ್ತು ಎಲ್ಲ ದಂಪತಿಗಳು ಒಂದೇ ವಿಧವಾದ ನೀತಿ ನಿಯಮಗಳನ್ನು ಅನುಸರಿಸುವುದು ಒಳ್ಳೆಯದಲ್ಲವೆ ?

ಉತ್ತರ : ಅದು ಶಕ್ಯವಿಲ್ಲ. ಮತ್ತು ಹಿತಕರವೂ ಅಲ್ಲ. ಏಕೆಂದರೆ, ಎಲ್ಲ ಜನಾಂಗಗಳ ಮತ್ತು ಸಮಾಜಗಳ ಸಂಸ್ಕೃತಿ, ಶೀಲಾಚಾರ, ಶಿಕ್ಷಣ ಐಹಿಕ ಮತ್ತು ಪಾರಮಾರ್ಥಿಕ ಸುಖಶಾಂತಿಗಳ ಕಲ್ಪನೆ ಮೊದಲಾದುವುಗಳೆಲ್ಲಾ ಒಂದೇ ರೀತಿಯಾಗಿರುವುದಿಲ್ಲ ಎಷ್ಟೋ ಪರಸ್ಪರ ವಿರುದ್ಧವಾಗಿಯೇ ಇವೆ. ಎಂದಮೇಲೆ ಎಲ್ಲ ಸಮಾಜಗಳ ದಂಪತಿಗಳ ಸಂಸಾರ ಯಾತ್ರೆ ಒಂದೇ ವಿಧವಾದ ಲಗ್ನ ಪದ್ಧತಿಯಿಂದ ಮತ್ತು ಒಂದೇ ವಿಧವಾದ ನೀತಿ-ನಿಬಂಧನೆಗಳಿಂದ ಹೇಗೆ ತಾನೆ ಸುಖಕರವಾಗಿ ಸಾಗಬಹುದು ?

ಲಗ್ನವೆಂದರೆ ಅದೇನು, ಸೈನಿಕರು ಹೇಗೆ ಒಂದೇ ಶಿಸ್ತಿನ ಕವಾಯಿತು ಮಾಡುತ್ತಾರೆಯೋ ಹಾಗ ವಧೂವರರು ಮಾಡುವ ಒಂದು ವಿಧವಾದ ಕವಾಯಿತು ಎಂದು ಹೇಳಬಹುದೆ ? ಲಗ್ನಪದ್ಧತಿಯಲ್ಲಿ ಏಕರೂಪತೆಯನ್ನು ಮಾಡಿದರೆ ಅದು ಹೇಗೆ ಹಿತಕರವಾದೀತು ? ಎಲ್ಲ ದಂಪತಿಗಳಿಗೂ ಒಂದೇ ವಿಧವಾದ ನೀತಿ ನಿಯಮಗಳನ್ನು ಗೊತ್ತುಪಡಿಸುವುದು ಹೇಗೆ ಶಕ್ಯ ?

ಒಂದು ಸಮಾಜದ ವಧುವಿಗೆ ಲಗ್ನದಲ್ಲಿ ರಾಟೆ ಮತ್ತು ಬೀಸುವ ಕಲ್ಲುಗಳನ್ನು ಕೊಡುತ್ತಾರೆ. ಇನ್ನೊಂದು ಸಮಾಜದ ಕನ್ಯೆಯ ಕೈಯಲ್ಲಿ ಮದುವೆಯ ಕಾಲಕ್ಕೆ ಕಡೆಗೋಲು ಮತ್ತು ಕುರುವೆಗಳನ್ನು ಕೊಡುತ್ತಾರೆ. ಒಂದು ಸಮಾಜದ ವರನಿಗೆ ವಿವಾಹದ ಕಾಲಕ್ಕೆ ಖಡ್ಗವನ್ನು ಕೊಡುತ್ತಾರೆ. ಬೇರೊಂದು ಸಮಾಜದಲ್ಲಿ ಮಧು ಮಗನಿಗೆ ಕೈಯಲ್ಲಿ ಬಿಲ್ಲನ್ನು ಕೊಡುತ್ತಾರೆ. ಈ ಪ್ರಕಾರ ಬೇರೆ ಬೇರೆ ಸಮಾಜಗಳಲ್ಲಿ ನಡೆಯುವ ಲಗ್ನದ ಕಾಲಕ್ಕೆ ವಧೂವರರಿಗೆ ಮಾಡುವ ಸಂಸ್ಕಾರಗಳ ಮೇಲಿಂದ ಆಯಾಯ ಸಮಾಜಗಳ ಧ್ಯೇಯ ಮತ್ತು ಜೀವನೋಪಾಯಗಳ ರೀತಿ ನೀತಿಗಳು ಭಿನ್ನ-ಭಿನ್ನವಾಗಿವೆಯೆಂದೇ ಸ್ಪಷ್ಟವಾಗುವುದಿಲ್ಲವೆ ?

ಒಂದು ಕಾಲಕ್ಕೆ ಸಮಾಜದಲ್ಲಿ ಒಬ್ಬ ಸ್ತ್ರೀಯನ್ನು ಅನೇಕ ಪುರುಷರು ಲಗ್ನವಾಗುತ್ತಿದ್ದರು. ಮತ್ತು ಸಂತಾನದ ಅಭಿವೃದ್ಧಿಗೆ ಸತಿಯು ತನ್ನ ಪತಿಯ ಇಷ್ಟದಂತೆ ಪರಪುರುಷನ ಸಂಪರ್ಕಹೊಂದಿ ಮಕ್ಕಳನ್ನು ಪಡೆಯುತ್ತಿದ್ದಳು. ಆ ಕಾಲಕ್ಕೆ ಆಯಾಯ ಸಮಾಜಗಳಲ್ಲಿ ಅಂಥ ಸ್ತ್ರೀಯರು ಪತಿವ್ರತಾ ಶಿರೋಮಣಿಯರೆಂದೇ ಜನರು ತಿಳಿಯುತ್ತಿದ್ದರು. ಆದರೆ ಈಗ ಆ ನಡತೆಗಳು ವ್ಯಭಿಚಾರವೆಂದೇ ಎಣಿಸಲ್ಪಡುವುದಿಲ್ಲವೇ ?

ಸ್ತ್ರೀ ಪುರುಷರ ಸಂಖ್ಯೆಯು ಸಮಾನವಾಗಿರಬೇಕೆಂದೋ ಅಥವಾ ಸ್ತ್ರೀಯರ ಸ್ವಾತಂತ್ರ್ಯಕ್ಕೆ ಪ್ರತಿಬಂಧವನ್ನು ಮಾಡಬೇಕೆಂದೋ ಗಂಡನು ಮರಣ ಹೊಂದಿದೊಡನೆ ಹೆಂಡತಿಯೂ ಆತನ ಜೊತೆಯಲ್ಲಿಯೇ ಅಗ್ನಿಗೆ ಆಹುತಿಯಾಗುತ್ತಿದ್ದ ರೂಢಿಯು ನಮ್ಮ ದೇಶದ ಅನೇಕ ಸಮಾಜಗಳಲ್ಲಿ ಇರಲಿಲ್ಲವೆ ?

ಒಂದು ಜನಾಂಗಕ್ಕೆ ಜನಸಂಖ್ಯೆಯು ಹೆಚ್ಚಾಗಬೇಕಾಗಿದ್ದಾಗ ಹೆಣ್ಣು ಮಕ್ಕಳಿಗೆ ಎಂಟು ಮಕ್ಕಳ ತಾಯಿಯಾಗಿರೆಂದು, ಗುರುಹಿರಿಯರು ಆಶೀರ್ವದಿಸುತ್ತಿದ್ದರು. ಆಮೇಲೆ ಅದೇ ಜನಾಂಗದಲ್ಲಿ ಜನಸಂಖ್ಯೆ ಹೆಚ್ಚಾದಾಗ ದಂಪತಿಗಳಿಗೆ ನೀವು ಮನೋನಿಗ್ರಹದಿಂದ ಸಂತಾನವನ್ನು ಕ್ರಮಗೊಳಿಸಿರೆಂದು ದೊಡ್ಡವರು ಆಜ್ಞಾಪಿಸುತ್ತಾರೆ. ಎಂದಮೇಲೆ ಎಲ್ಲ ಜನರ ಲಗ್ನಪದ್ಧತಿಗಳೂ ಎಲ್ಲ ದಂಪತಿಗಳ ರೀತಿ ನೀತಿಗಳೂ ಎಲ್ಲಾ ಕಾಲಗಳಲ್ಲಿ ಸಮಾನವಾಗಿಯೇ ಇರುವುದು ಹೇಗೆ ಶಕ್ಯ? ಅವು ಎಲ್ಲ ಸತಿಪತಿಗಳ ಬಾಳುವೆಯನ್ನು ಹೇಗೆ ಹಸನಾಗಿ ಮಾಡಲು ಸಹಾಯವಾಗುವುವು ?

ಪ್ರಶ್ನೆ : ಹಾಗಾದರೆ ಎಲ್ಲ ದಂಪತಿಗಳಿಗೂ ಅನ್ವಯಿಸುವ ನಿಯಮ ನೀತಿಗಳೇನೂ ಇಲ್ಲವೇ ?

ಉತ್ತರ : ಇದ್ದೇ ಇವೆ. ದಂಪತಿಗಳು ಆಚರಿಸಬೇಕಾಗಿರುವ ರೀತಿ ನೀತಿಗಳಲ್ಲಿ ಕೆಲವು ಸಾಮಾನ್ಯವಾದವುಗಳು ಮತ್ತು ಕೆಲವು ವಿಶಿಷ್ಟವಾದವುಗಳು ಇವೆ. ಅವುಗಳಲ್ಲಿ ಸಾಮಾನ್ಯವಾದವುಗಳನ್ನು ಎಲ್ಲರೂ ಅನುಸರಿಸಲೇಬೇಕು.

ಪ್ರಶ್ನೆ : ಸಾಮಾನ್ಯವಾದ ನೀತಿ ನಿಯಮಗಳು ಯಾವುವು ?

ಉತ್ತರ : ದಂಪತಿಗಳು ಮೊದಲು ತಮ್ಮ ಕುಟುಂಬದ ಸಂಬಂಧವಾಗಿರತಕ್ಕ ಕೆಲಸಗಳನ್ನು ಸಮರ್ಪಕವಾಗಿ ಮಾಡಬೇಕು. ಅನಂತರ ತಮ್ಮ ಸಮಾಜ ಮತ್ತು ರಾಷ್ಟ್ರಗಳ ವಿಷಯಕವಾಗಿ ಆಯಾಯ ಕಾಲಕ್ಕೆ ಮಾಡತಕ್ಕ ಕಾರ್ಯಗಳನ್ನು ನಿರ್ವಹಿಸಬೇಕು.

ತಮ್ಮ ರಾಷ್ಟ್ರದ ಉನ್ನತಿಯಲ್ಲಿಯೇ ತಮ್ಮ ಸಮಾಜದ ಅಭಿವೃದ್ಧಿಯಿದೆಯೆಂದೂ ತಮ್ಮ ಸಮಾಜದ ಏಳಿಗೆಯಲ್ಲಿಯೇ ತಮ್ಮ ಕುಟುಂಬದ ಹಿತವಿದೆಯೆಂದೂ ಮತ್ತು ತಮ್ಮ ಕುಟುಂಬದ ಕ್ಷೇಮದಲ್ಲಿಯೇ ತಮ್ಮ ಸುಖವಿದೆಯೆಂದೂ ದಂಪತಿಗಳು ತಿಳಿದುಕೊಳ್ಳಬೇಕು.

ಹೀಗೆ ಸಮಷ್ಟಿಜೀವನದಲ್ಲಿ ವ್ಯಷ್ಟಿ ಜೀವನವು ಎಂದರೆ, ಸಾಮೂಹಿಕ ಹಿತದಲ್ಲಿ ತಮ್ಮ ಹಿತವು ಅಡಕವಾಗಿದೆಯೆಂಬುದನ್ನು ಮೊದಲು ತಿಳಿದುಕೊಂಡರೇನೇ ಆ ದಂಪತಿಗಳ ಜೀವನ ಯಾತ್ರೆಯು ಸುಖಕರವಾಗಿ ಸಾಗಲು ಸಹಾಯಕವಾಗುವಂತಹ ಕೃತಿಗಳು ಅವರಿಂದ ಸಂಭವಿಸುವುವು.

ಅನ್ಯರ ಸುಖದುಃಖಗಳಲ್ಲಿ ತಾವು ಭಾಗಿಗಳಾಗಿರಬೇಕಾಗುತ್ತದೆಂಬುದನ್ನೇ ದಂಪತಿಗಳು ಮೊದಲು ಕಲಿಯಬೇಕಾದ ನೈತಿಕ ಪಾಠವು. ಲಗ್ನದಲ್ಲಿ ವಧೂವರರು ಕಂಕಣಕಟ್ಟಿಕೊಳ್ಳುವುದೆಂದರೆ ಪರಸ್ಪರರು ಸುಖದುಃಖಗಳಲ್ಲಿ ಭಾಗಿಗಳಾಗಲು ಧೃಡಪ್ರತಿಜ್ಞೆ ಮಾಡಿದ್ದೇವೆಂಬುದರ ಕುರುಹು ಪತಿಯು ತನ್ನ ವ್ಯಕ್ತಿತ್ವವನ್ನು ಸತಿಗೂ, ಸತಿಯು ತನ್ನ ವ್ಯಕ್ತಿತ್ವವನ್ನು ಪತಿಗೂ ಧಾರೆಎರೆದು ಇಬ್ಬರೂ ತಮ್ಮ ಮನ ಬುದ್ಧಿ ಮತ್ತು ಭಾವನೆಗಳನ್ನು ಏಕ ರೂಪಗೊಳಿಸುವುದೇ ಲಗ್ನವು.

ಹಾಗಾದಾಗಲೇ ಸತಿಪತಿಗಳ ದೇಹಗಳು ಬೇರೆಬೇರೆಯಾಗಿದ್ದರೂ ಅವೆರಡೂ ಬಿಂಬ ಪ್ರತಿಬಿಂಬಗಳಂತೆ ಪರಸ್ಪರಾವಲಂಬಿಯಾಗಿ ಬಾಳುವುವು.

ದಂಪತಿಗಳಲ್ಲಿ ಉಂಟಾಗುವ ಈ ಆತ್ಮೀಯ ಭಾವನೆ ವಿಕಾಸವಾಗುತ್ತ ಕುಟುಂಬ, ಸಮಾಜ, ರಾಷ್ಟ್ರ, ಮಾನವ ವರ್ಗ ಮತ್ತು ಪ್ರಾಣಿಕೋಟಿಗಳವರೆಗೂ ಹೋಗಬೇಕು. ಇದೇ ದಂಪತಿಗಳಲ್ಲಿ ಮೊದಲು ಅಳವಡಬೇಕಾದ ನೀತಿಯು. ಅದರಿಂದಲೇ ಅನೇಕ ನೀತಿ ನಿಯಮಗಳು ಉಂಟಾಗುವುವು ಈ ಆತ್ಮೀಯ

ಭಾವವೇ ಸತಿಪತಿಗಳ ಜೀವಾಳವು. ಇದು ದಂಪತಿಗಳಲ್ಲಿ ಯಾವ ಪ್ರಮಾಣದಿಂದ ಉಂಟಾಗಿ ವಿಕಾಸವಾಗುತ್ತಾ ಹೋಗುತ್ತದೆಯೋ ಆ ಪ್ರಮಾಣದಂತೆ ಅವರ ಬಾಳುವೆಯು ಸುಖಕರವಾಗುತ್ತದೆ.

ಪ್ರಶ್ನೆ : ಇದೇನೋ ಒಂದು ಸಿದ್ಧಾಂತವಾದ ತತ್ವವಾಯಿತು. ಆದರೆ ದಂಪತಿಗಳ ಜೀವನವು ಸುಖಕರವಾಗಬೇಕಾಗಿದ್ದರೆ ಅವರ ಪರಸ್ಪರ ಆಚರಣೆಗಳು ಹೇಗಿರಬೇಕೆಂಬುದನ್ನು ಸ್ವಲ್ಪ ತಿಳಿಸುವಿರಾ ?

ಉತ್ತರ : ಮೊದಲು ವಧೂವರರು ಒಳ್ಳೆಯವರಾಗಿದ್ದರಲ್ಲವೇ ಮುಂದೆ ಅವರ ದಾಂಪತ್ಯ ಜೀವನವು ಸುಖಕರವಾಗಿ ಪರಿಣಮಿಸುವುದು ? ಬೇವಿನ ಬೀಜವನ್ನು ಬಿತ್ತಿ ಮಾವಿನ ಫಲವನ್ನು ಬಯಸಿದರೆ ಅದು ದೊರೆಯುವುದೇ ? ಒಳ್ಳೆಯ ಬೆಳೆ ಬರಬೇಕಾಗಿದ್ದರೆ ಬೀಜ ಮತ್ತು ಭೂಮಿಗಳು ಒಳ್ಳೆಯವುಗಳಾಗಿಯೂ ಇರಬೇಕಾದುದು ಅಗತ್ಯವಲ್ಲವೇ ? ಅದೇ ಪ್ರಕಾರ ಸತಿಪತಿಗಳ ಬಾಳುವೆ ಹಿತಕರವಾಗಬೇಕಾಗಿದ್ದರೆ ವಧೂವರರು ಸಮಾನವಾದ ಒಳ್ಳೆಯ ಗುಣ ಸ್ವಭಾವಾದಿಗಳಿಂದ ಕೂಡಿದವರಾಗಿರಬೇಕು.

ಲಗ್ನವೆಂಬುದು ಪ್ರೌಢರಾದ ಯುವತಿ–ಯುವಕರ ಆಕರ್ಷಣೆಯಿಂದ ಸಂಭವಿಸತಕ್ಕ ಪ್ರೇಮದ ಅವಿಚ್ಛಿನ್ನವಾದ ಘಟನೆಯೆಂದೇ ನಾವು ತಿಳಿಯಬೇಕು. ನಾವು ಅಂಥ ದಂಪತಿಗಳ ಸಂಬಂಧವಾಗಿಯೇ ಈಗ ಪ್ರಸ್ತಾಪಿಸುತ್ತಿದ್ದೇವೆ. ತಾಯಿ-ತಂದೆಗಳ ಇಷ್ಟದಿಂದಲೋ ಅಥವಾ ಬಂಧು-ಬಾಂಧವರ ಒತ್ತಾಯದಿಂದಲೋ ಯಾವುದೋ ಒಂದು ಹೆಣ್ಣನ್ನು ಯಾವುದೋ ಒಂದು ಗಂಡಿಗೆ ಆ ಇಬ್ಬರ ಒಪ್ಪಿಗೆ ಇಲ್ಲದೆ ಮದುವೆ ಮಾಡಿಕೊಟ್ಟಂಥ ದಂಪತಿಗಳ ಸಂಬಂಧವಾಗಿ ನಾವು ಈಗ ಮಾತಾಡುತ್ತಾ ಇಲ್ಲವೆಂಬುದನ್ನು ಲಕ್ಷಿಸಬೇಕು.

ಎಂದಮೇಲೆ, ಲಗ್ನವಾಗುವ ಪ್ರೌಢ ತರುಣ-ತರುಣಿಯರು ಸಮಾನವಾದ ಸಂಸ್ಕೃತಿ, ಶೀಲ ಗುಣ, ಸ್ವಭಾವ, ರೂಪ, ಲಕ್ಷಣ ಮತ್ತು ಶಿಕ್ಷಣ ಮೊದಲಾದವುಗಳನ್ನು ನೋಡಿಯೇ ವರಿಸಬೇಕು. ಹಾಗಾದರೆ ಅವರ ಮುಂದಿನ ಸಂಸಾರ ಯಾತ್ರೆಯು ಸುಖಕರವಾಗಿ ಸಾಗಲು ಬಹು ಸಹಾಯಕವಾಗುವುದು. ಇವುಗಳಲ್ಲಿ ಎಷ್ಟು ಸಮಾನವಾಗಿರುತ್ತವೆಯೋ ಅಷ್ಟು ಅನುಕೂಲ, ಎಷ್ಟು ವಿಷಮವಾಗಿರುತ್ತವೆಯೋ ಅಷ್ಟು ಪ್ರತಿಕೂಲವೆಂಬುದನ್ನು ಹೇಳಬೇಕಾಗಿಲ್ಲವಷ್ಟೆ ?

ಹೆಣ್ಣು ಕಡಿಮೆ, ಗಂಡು ಹೆಚ್ಚು. ಎಂಬ ಬಹುಜನರ ತಪ್ಪು ತಿಳುವಳಿಕೆಯೇ ದಾಂಪತ್ಯ ಜೀವನದಲ್ಲಿಯ ಅನೇಕ ದುಃಖಗಳಿಗೆ ಕಾರಣವಾಗಿವೆ. ಶ್ರೀ ಸಿದ್ಧರಾಮ ಶಿವಯೋಗಿಗಳು ೧೨ನೆಯ ಶತಮಾನದಲ್ಲಿ ಹೇಳಿರುವ ಹೆಣ್ಣಿನ ಘನತೆಯನ್ನು ಈ ಇಪ್ಪತ್ತನೆಯ ಶತಮಾನದಲ್ಲಿ ಕೂಡ ಅಸಂಖ್ಯರು ಅರಿತಿರದಿದ್ದದ್ದು ವಿಷಾದಕರವು.

"ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು. ತಾ ಮಾಡಿದ ಹೆಣ್ಣು ತೊಡೆಯನೇರಿತ್ತು. ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು. ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು. ಅದು ಕಾರಣ ಹೆಣ್ಣು ಹೆಣ್ಣಲ್ಲ. ಹೆಣ್ಣು ರಾಕ್ಷಸಿಯಲ್ಲ. ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ."

ಶಿವನ ತಲೆಯ ಮೇಲೆ ಗಂಗೆ, ತೊಡೆಯ ಮೇಲೆ ಪಾರ್ವತಿ, ಬ್ರಹ್ಮನ ನಾಲಿಗೆಯ ಮೇಲೆ ಸರಸ್ವತಿ ಮತ್ತು ವಿಷ್ಣುವಿನ ಎದೆಯ ಮೇಲೆ ಲಕ್ಷ್ಮಿ ಎಂದು ಕುಳಿತಿರುವ ಹೆಣ್ಣು ಹೆಣ್ಣಲ್ಲವೆಂದೂ, ರಾಕ್ಷಸಿಯಲ್ಲವೆಂದೂ, ಪ್ರತ್ಯಕ್ಷ ದೇವರೆಂದೂ ಹೇಳಿರುವುದರ ಗುಟ್ಟನ್ನು ತಿಳಿದುಕೊಂಡು ನಡೆಯಬೇಕು.

ಈ ವಿಶ್ವದಲ್ಲಿ ಎಲ್ಲ ಉತ್ಪತ್ತಿ, ಸ್ಥಿತಿ ಮತ್ತು ಲಯಗಳೂ ಪ್ರಕೃತಿ ಮತ್ತು ಚೈತನ್ಯಗಳ ಕೂಡುವಿಕೆಯಿಂದ ಸಂಭವಿಸುತ್ತವೆಂಬುದನ್ನೇ ತಿಳಿಸಲು ಹೀಗೆ ಬ್ರಹ್ಮ ವಿಷ್ಣು ಮತ್ತು ಶಿವ ಇವರ ದಾಂಪತ್ಯವನ್ನು ರೂಪಕವಾಗಿ ವರ್ಣಿಸಿದ್ದಾರೆ ಎಂದ ಮೇಲೆ ದಾಂಪತ್ಯ ಜೀವನವು ಸುಖಕರವಾಗಬೇಕಾದರೆ ಸತಿಯನ್ನು ಪತಿಯು ಕೀಳಾಗಿ ತಿಳಿಯಬಾರದಷ್ಟೆ ?

ಹೆಂಡತಿಯು ಗಂಡನನ್ನು ದೇವನೆಂದು ತಿಳಿದು ಆತನ ಸೇವೆ ಮಾಡಬೇಕು. ಆತನನ್ನು ಜೋಪಾನ ಮಾಡುವಲ್ಲಿ ತಾಯಿಯಂತೆ ವಾತ್ಸಲ್ಯವುಳ್ಳವಳಾಗಿರಬೇಕು. ಆತನಿಗೆ ಸಲಹೆ ಕೊಡುವಲ್ಲಿ ಮಂತ್ರಿಯಂತಿರಬೇಕು. ಆತನು ತಪ್ಪುದಾರಿಯಲ್ಲಿ ಹೋಗುತ್ತಿದ್ದಾನೆಂದು ತೋರಿದರೆ ತಾನು ಆತನ ಕೇವಲ ಸೇವಕಳೆಂದೇ ಸುಮ್ಮನೆ ಇರದೇ ವಿನಯದಿಂದ ಆತನಿಗೆ ಸಲಹೆ-ಸೂಚನೆಗಳನ್ನು ಮಾಡಬೇಕು.

ಹಿಂದಕ್ಕೆ ಆಯ್ದಕ್ಕಿ ಮಾರಯ್ಯನವರೆಂಬ ಶಿವಶರಣರು ಧರ್ಮ ಮಾರ್ಗವನ್ನು ಬಿಟ್ಟು ಹೋಗುತ್ತಾರೆಂದು ತಿಳಿದೊಡನೆ ಅವರ ಧರ್ಮಪತ್ನಿಯಾದ ಲಕ್ಕಮ್ಮನವರು ಎಚ್ಚರಿಸುವಾಗ,

"ಕಾಯಕ್ಕೆ ಸತಿಪತಿ ಎಂಬ ನಾಮವಲ್ಲದೆ ಅರುವಿಂಗೆ ಬೇರೊಂದೊಡಲುಂಟೇ? ನೀವು ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೇ ?"

ಎಂದು ಹೇಳಿ ನನ್ನ ಅಂಗನೂ ನಿಮ್ಮದೇ ಆಗಿರುವುದರಿಂದ ನನ್ನಲ್ಲಿಯ ಅರಿವು ಕೂಡ ನಿಮ್ಮದೇ ಸರಿಯೆಂದು ಕೈಂಕರ್ಯವನ್ನು ವ್ಯಕ್ತಗೊಳಿಸಿದ್ದಾರೆ. ಸತಿಯು ತಾನು ಪತಿವ್ರತೆಯಾಗಿರುವುದು ತನ್ನ ಪವಿತ್ರವಾದ ಪ್ರಥಮ ಧರ್ಮವೆಂದು ತಿಳಿಯಬೇಕು. ಅತ್ತೆಮಾವಂದಿರನ್ನು ತಾಯಿತಂದೆಗಳಂತೆ ತಿಳಿದು ಅವರ ಸೇವೆ ಮಾಡಬೇಕು. ಗುರುಹಿರಿಯರನ್ನೂ, ಬಂಧುಬಾಂಧವರನ್ನೂ, ಅತಿಥಿ ಅಭ್ಯಾಗತರನ್ನೂ ಗೌರವಿಸಿ ಅವರ ಉಪಚಾರವನ್ನು ಮಾಡಬೇಕು.

ಗಂಡನು ಹೆಂಡತಿಯನ್ನು ದೇವಿಯೆಂದು ತಿಳಿದು ಆದರಿಸಬೇಕು. ಪತಿಯೂ ಸತಿವ್ರತನಾಗಿರುವುದು ತನ್ನ ಪ್ರಥಮ ಧರ್ಮವೆಂದೇ ತಿಳಿಯಬೇಕು. ಮೋಳಿಗೆ

ಮಾರಯ್ಯನವರೆಂಬ ಶರಣರಿಗೆ ಅವರ ಧರ್ಮಪತ್ನಿಯವರಾಗಿದ್ದ ಮಹಾದೇವಿಯವರು ಶ್ರೇಷ್ಠವಾದ ಧರ್ಮತತ್ವವನ್ನು ತಿಳಿಸಲು ಆಗ ಮಾರಯ್ಯನವರು ತಮ್ಮ ಸತಿಯನ್ನು ಕುರಿತು ಹೀಗೆ ಹೇಳಿದರು,

"ಸತ್ವಗೆಟ್ಟಲ್ಲಿ ಕಾಷ್ಠವನೂರಿ ನಡೆಯಬೇಕು. ಮಹತ್ವವಿದ್ದಲ್ಲಿ ನಿಶ್ಚಯವ ಹೇಳಲಾಗಿ ಮಹಾಪ್ರಸಾದವೆಂದು ಕೈಕೊಳ್ಳಬೇಕು. ನನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ ಎನ್ನ ಸುಖದುಃಖ ನಿನ್ನ ಸುಖದುಃಖ ಅನ್ಯವಿಲ್ಲ. ಇದಕ್ಕೆ ಭಿನ್ನ ಭೇದವೇನು ಹೇಳಾ, ನಿಕಳಂಕ ಮಲ್ಲಿಕಾರ್ಜುನ."

ದೇಹ ಶಕ್ತಿಯು ಕಡಿಮೆಯಾದ ಮೇಲೆ ಕೋಲು ಊರಿ ನಡೆಯಬೇಕಾಗುವುದಿಲ್ಲವೇ ಅದೇ ಪ್ರಕಾರ ಪತಿಗೆ ಸತಿಯು ಶಕ್ತಿಯಾಗಿರುವ ಕಾರಣ ಅವಳು ಹೇಳುವ ಧರ್ಮತತ್ವವನ್ನು ಮಹಾ ಪ್ರಸಾದವೆಂದೇ ಅಂಗೀಕರಿಸಬೇಕೆಂದು ಮಾರಯ್ಯನವರು ಹೇಳಿರುವುದನ್ನು ನೋಡಿದರೆ ಗಂಡನು ಹೆಂಡತಿಗೆ ಎಷ್ಟು ಮನ್ನಣೆ ಕೊಡಬೇಕೆಂಬುದು ಗೊತ್ತಾಗುವುದಿಲ್ಲವೇ ?

ಶಿವಶರಣರು ಸ್ತ್ರೀಯರನ್ನು ಕೀಳೆಂದು ತಿಳಿಯದೆ ಅವರಿಗೆ ಪುರುಷರಂತೆಯೇ ಧಾರ್ಮಿಕ ವಿಷಯದಲ್ಲಿಯೂ ಸ್ವಾತಂತ್ರ್ಯವನ್ನು ಕೊಟ್ಟದ್ದರಿಂದಲೇ ಹೀಗೆ ಸತಿಯು ಪತಿಗೆ ಸನ್ಮಾರ್ಗವನ್ನು ತೋರಿಸಲು ಸಮರ್ಥಳಾಗಿ ದಾಂಪತ್ಯ ಜೀವನವು ಪ್ರಭಾವಯುಕ್ತವಾಗಲು ಸಹಾಯಕವಾದಳು.

ಲಿಂಗವಂತರು ತಮ್ಮ ಮಗಳನ್ನು ಮದುವೆ ಮಾಡಿ ಕೊಡುವಾಗ ಅವಳಿಗೆ ಮಜ್ಜನಸಾಲಿ, ಹಸ್ತಪಾವುಡ, ಲಿಂಗವಸ್ತ್ರ, ತೀರ್ಥಬಟ್ಟಲು, ಎಡೆಬಟ್ಟಲು, ಅಡ್ಡಣಗಿ ಮೊದಲಾದವುಗಳನ್ನು ಕೊಡುತ್ತಿದ್ದಾರೆ. ಇದು ಅವರಲ್ಲಿಯ ಹೆಣ್ಣು ಮಕ್ಕಳು ಕೂಡ ತಮ್ಮ ಲಿಂಗಪೂಜೆ ಮೊದಲಾದ ಧಾರ್ಮಿಕ ಆಚರಣೆಗಳನ್ನು ಆಚರಿಸಿ ಪಾರಮಾರ್ಥಿಕ ಸುಖಶಾಂತಿಗಳನ್ನು ಹೊಂದಬೇಕೆಂಬ ಉದ್ದೇಶವನ್ನೇ ತೋರಿಸುತ್ತದಲ್ಲವೇ ? ಇವೇ ಒಂದೊಂದು ಸಮಾಜದಲ್ಲಿರುವ ದಂಪತಿಗಳ ವಿಶಿಷ್ಟವಾದ ರೀತಿನೀತಿಗಳು.

ಪ್ರಶ್ನೆ : ಶಿವಶರಣರು ಸ್ತ್ರೀಯರಿಗೆ ಪುರುಷರಂತೆ ಸ್ವಾತಂತ್ರ್ಯವನ್ನು ಕೊಟ್ಟಿದ್ದು ಬಹು ಒಳ್ಳೆಯದು. ಈಗ ಸುಧಾರಿಸಿದ ಸಮಾಜದವರೆಲ್ಲರೂ ಸ್ತ್ರೀ ಸ್ವಾತಂತ್ರ್ಯವನ್ನು ಮಾನ್ಯ ಮಾಡಿ ಆಚರಣೆಯಲ್ಲಿ ತರುತ್ತಿದ್ದಾರೆ. ಆದ ಕಾರಣ ದಾಂಪತ್ಯ ಜೀವನದ ವಿಚಾರವಾಗಿ ಶಿವಶರಣರೇನಾದರೂ ಹೇಳಿದ್ದರೆ ತಿಳಿಸುವಿರಾ?

ಉತ್ತರ : ಶಿವಶರಣರು ದಾಂಪತ್ಯ ಜೀವನವನ್ನು ಬಹು ಗೌರವಿಸಿ ಅದಕ್ಕೆ ಬಹು ಮಹತ್ವವನ್ನು ಕೊಟ್ಟಿದ್ದಾರೆ. ಈ ಎರಡು ಮೂರು ವಚನಗಳ ಮೇಲಿಂದ ಅವರ ವಿಚಾರಗಳು ಹೇಗಿದ್ದವೆಂಬುದು ಗೊತ್ತಾಗುವುದು. "ಗಂಡ

ಶಿವಲಿಂಗದೇವರ ಭಕ್ತ. ಹೆಂಡತಿ ಕೊಂಬುದು ಸುರೆ ಮಾಂಸ. ಭಾಂಡ ಭಾಜನ ಶುದ್ಧ ಇಲ್ಲದವರ ಭಕ್ತಿ ಹೆಂಡದ ಮಡಕೆಯ ಹೊರಗೆ ತೊಳೆದಂತೆ ಕೂಡಲ ಸಂಗಮದೇವಾ !"

ಎಂದರೆ ಗಂಡಹೆಂಡಿರು ಒಂದೇ ವಿಧವಾದ ಶೀಲಾಚಾರಗಳುಳ್ಳವರಾಗಿರಬೇಕು. ಹಾಗಿಲ್ಲದಿದ್ದರೆ ನೋಡುವುದಕ್ಕೇನೋ ಗಂಡಹೆಂಡಿರು ; ಆದರೆ ಅವರಲ್ಲಿ ಸಾಮರಸ್ಯ ಸುಖವೇ ಇರುವುದಿಲ್ಲವೆಂದು ಮಹಾನುಭಾವ ಬಸವಣ್ಣನವರು ಹೇಳಿದ್ದಾರೆ.

"ಸತಿ ಪತಿಗಳಿಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ. ಸತಿಪತಿಗಳೊಂದಾಗದವರ ಭಕ್ತಿ ಅಮೃತದೊಳು ವಿಷ ಬೆರಸಿದಂತೆ ಕಾಣಾ ರಾಮನಾಥಾ."

ಎಂದರೆ ಸತಿಪತಿಗಳಿಬ್ಬರ ಭಾವನೆಗಳೂ ಒಂದೇ ವಿಧವಾಗಿರಬೇಕು. ದಯೆ ಮೊದಲಾದ ಒಳ್ಳೆಯ ಗುಣ ಸ್ವಭಾವಗಳು ಒಬ್ಬರಲ್ಲಿ, ಇನ್ನೊಬ್ಬರಲ್ಲಿ ಪರಪೀಡೆ ಮೊದಲಾದ ದುಷ್ಟವೃತ್ತಿಗಳು ಇದ್ದರೆ ದಾಂಪತ್ಯ ಜೀವನದ ಸುಖವೆಂಬ ಹಾಲಿನಲ್ಲಿ ಬೇವನ್ನು ಹಾಕಿದಂತೆಯೇ ಸರಿಯೆಂದು ಶರಣ ದೇವರ ದಾಸಿಮಯ್ಯನವರು ಹೇಳಿದ್ದಾರೆ.

"ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ, ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ಸಂಗನ ಬಸವಣ್ಣಾ."

ಎಂದರೆ ಒಂದು ವಸ್ತುವನ್ನು ನೋಡುವಾಗ ಹೇಗೆ ನಾವು ಎರಡು ದೃಷ್ಟಿಗಳನ್ನು ಕೂಡಿಸುತ್ತೇವೆಯೋ ಹಾಗೆಯೇ, ದಂಪತಿಗಳು ಯಾವ ಕಾರ್ಯವನ್ನು ಮಾಡುವಾಗಲೂ ಒಂದೇ ದೃಷ್ಟಿಯಿಂದ ಮಾಡಿದರೆ ಆ ಕಾರ್ಯವು ಜಯಪ್ರದವಾಗಿ ದೇವರಿಗೂ ಒಪ್ಪಿಗೆಯಾಗುತ್ತದೆಂದು ಶ್ರೀ ಪ್ರಭುದೇವರು ಹೇಳಿದ್ದಾರೆ.

ಮುಖ್ಯವಾಗಿ ದಂಪತಿಗಳು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ತಮ್ಮ ಮನ, ಬುದ್ಧಿ ಮತ್ತು ಭಾವಗಳಿಂದ ೬೩ ಸಂಖ್ಯೆಯಂತೆ ಸಾಧಿಸಬೇಕೆಂಬುದೇ ಲಗ್ನದಲ್ಲಿ ವಧೂವರರಿಗೆ ಎಲ್ಲರೂ ಏಕಕಂಠದಿಂದ ಘೋಷಿಸಿ ಮಾಡುವ ಸದುಪದೇಶವು.

ನೀವು ಜಗತ್ತಿನಲ್ಲಿಯೇ ಅತಿ ಶ್ರೇಷ್ಠ ಮನುಷ್ಯರೆಂಬ ಮಾತನ್ನು ಸತ್ಯವೆಂದು ತಿಳಿಯಿರಿ. ಆದರೆ ನಿಮ್ಮಲ್ಲಿ ಒಂದೇ ದುರ್ಗುಣವಿದೆ. ಅದೆಂದರೆ ನಿಮ್ಮಲ್ಲಿರುವ ಮಹಾಗುಣಗಳನ್ನು ನೀವು ಅಡಗಿಸಿಡುತ್ತೀರಿ, ಅವನ್ನು ಪ್ರಕಾಶಕ್ಕೆ ಬರಲು ಬಿಡುವುದಿಲ್ಲ.

—ಎಮರ್ಸನ್

ಕವಿಯಾಗಿ ಬಸವಣ್ಣನವರು-೩

ಡಾ|| ಸಿ. ಪಿ. ಕೃಷ್ಣಕುಮಾರ್

ಭಕ್ತಿಯ ಬಾಹ್ಯಾಚರಣೆ ಸುಲಭ. ಆದರೆ ನಿಜವಾದ ಅಂತರಂಗದ ಭಕ್ತಿ ಹಲವಾರು ಮೌಲ್ಯಗಳನ್ನು ಅಪೇಕ್ಷಿಸುವುದರಿಂದ ಕಠಕಷ್ಟ. ಶ್ರದ್ಧೆ, ನಿಷ್ಠೆ, ತಾಳ್ಮೆ, ಆತ್ಮ ಪರೀಕ್ಷೆ, ತ್ಯಾಗ, ಸಂಯಮ ಮುಂತಾದ ಎಷ್ಟೋ ಗುಣಗಳನ್ನು ಬೆಳೆಸಿಕೊಂಡಾಗಲೇ ಭಕ್ತಿಯ ಸಾರ್ಥಕ್ಯ. "ಮಾತಿನ ಮಾತಿನಲ್ಲಪ್ಪುದೇ ಭಕ್ತಿ ? ಮಾಡಿ ತನು ಸವೆಯದನ್ನಕ್ಕ ? ಮನ ಸವೆಯದನ್ನಕ್ಕ, ಧನ ಸವೆಯದನ್ನಕ್ಕ ?" ಅದು ಎಲ್ಲರಿಗೂ ಸಾಧ್ಯವಿಲ್ಲ. ಮೊದಮೊದಲು ಭಕ್ತಿ ಹೇಗೆ ಆಪ್ಯಾಯನವಾಗಿದ್ದು ಬರಬರುತ್ತ ತ್ರಾಸದಾಯಕವಾಗುತ್ತದೆಂಬುದನ್ನು ಬಸವಣ್ಣನವರು ಸೊಗಸಾದ ಹೋಲಿಕೆಯೊಂದರ ಮೂಲಕ ಹೇಳುತ್ತಾರೆ :

> ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು !
> ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕಠಕಠಿನವಾಯಿತ್ತು !
> ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು ;
> ಕಡೆಯಲ್ಲಿ ಜಂಗಮ ಭಕ್ತಿ ಕಠಿಣವಾಯಿತ್ತು !

ಮಾಗಿಯ ಪ್ರಾತಃಕಾಲದ ಬಿಸಿಲು ಎಷ್ಟು ಹಿತಕರ! ಎಲ್ಲರೂ ಚಳಿ ಕಾಯಿಸಿದ್ದೂ ಕಾಯಿಸಿದ್ದೆ ! ಆದರೆ ಸೂರ್ಯ ಮೇಲೇರುತ್ತ ಹೋದಂತೆ ಅದರ ಪ್ರಖರತೆ ಅರಿವಾಗುತ್ತದೆ ; ತಲೆನೋವು ಕಾಣಿಸಿಕೊಳ್ಳುತ್ತದೆ. ಈ ರೂಪಕದಲ್ಲಿ ಎಂತಹ ಸ್ವೋಪಜ್ಞತೆಯಿದೆ ! ಭಕ್ತಿಯ ಈ ಉಗ್ರಸ್ವರೂಪ ಮತ್ತೊಂದು ವಚನದಲ್ಲಿ ಎಣೆಯಿಲ್ಲದಂತೆ ಉಕ್ತವಾಗಿದೆ :

> ಭಕ್ತಿಯೆಂಬುದ ಮಾಡಬಾರದು,
> ಗರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು !
> ಘಟಸರ್ಪನಲ್ಲಿ ಕೈದುಡುಕಿದರೆ ಹಿಡಿಯದೆ ಮಾಬುದೇ ?

ಅಸಿಧಾರಾವ್ರತ ಎಂಬುದನ್ನು ನಾವೆಲ್ಲ ಕೇಳಿದ್ದೇವೆ. ಆದರೆ ಬಸವಣ್ಣನವರು ಇಲ್ಲಿ ಹೇಳುವ ಕ್ರಕಚವ್ರತ ಅದಕ್ಕಿಂತ ಮಹಾ ಭಯಂಕರ. ಕತ್ತಿಯಾದರೆ ಒಂದೇ ಏಟಿಗೆ ಕತ್ತರಿಸಿಬಿಡುತ್ತದೆ ; ಈ ಗರಗಸವಾದರೊ ತನ್ನ ನಾರಕದಂತಗಳಿಂದ ಹೋಗುತ್ತ ಬರುತ್ತ ಕೊಯ್ಯುತ್ತದೆ. ಇದರಂಥ ರೌರವಶಿಕ್ಷೆ ಬೇರೊಂದಿಲ್ಲ. ಇದನ್ನು ಸೈರಿಸಿಕೊಳ್ಳಬಲ್ಲವರಿಗೆ ಮಾತ್ರ ಭಕ್ತಿ ; ಉಳಿದವರು ಅದರ ತಂಟೆಗೆ ಹೋಗಬಾರದು. ಅಲ್ಲದೆ, ಭಕ್ತಿಯೆಂಬುದೆಂದು ದಿವ್ಯ. ನಿರ್ದೋಷಿಗಳು ಮಾತ್ರ ಅದರಲ್ಲಿ ಉತ್ತೀರ್ಣರಾಗುತ್ತಾರೆ ; ಕಲುಷಿತರಿಗೆ ಅದು ಮಾರಕವಾಗುತ್ತದೆ.

ಮೊದಮೊದಲು ಭಕ್ತಿಯನ್ನು ಭರದಿಂದ ಆಚರಿಸಿ, ಕಡೆಗೆ ಉತ್ಸಾಹಶೂನ್ಯರಾಗುವವರನ್ನು ಬಸವಣ್ಣನವರು ಈ ವಚನದಲ್ಲಿ ವಿನೋದಾತ್ಮಕವಾಗಿ ವಿಡಂಬನ ಮಾಡಿದ್ದಾರೆ :

ಬರ ಬರ ಭಕ್ತಿಯುರೆಯಾಯಿತ್ತು ಕಾಣಿರಣ್ಣಾ ;
ಮೊದಲ ದಿನ ಹಣೆಮುಟ್ಟಿ, ಮರುದಿನ ಕೈಮುಟ್ಟಿ,
ಮೂರೆಂಬ ದಿನಕೆ ತೂಕಡಿಕೆ ಕಾಣಿರಣ್ಣಾ !

ಅಪ್ಪಟವಾದ ಭಕ್ತಿನಿಷ್ಠೆಗಳಿಲ್ಲದ ಜನರನ್ನು ಬಸವಣ್ಣನವರು ಅನೇಕ ವಚನಗಳಲ್ಲಿ ಟೀಕಿಸಿದ್ದಾರೆ. ಲಿಂಗದ ಮೇಲೆ ಭಕ್ತನಿಗೆ ನಿಷ್ಠೆಯಿಲ್ಲದಿದ್ದರೆ, ಅದಕ್ಕೂ ಇವನ ಮೇಲೆ ಪ್ರೀತಿಯಿಲ್ಲ. ಈ ಪರಸ್ಪರ ನಿರಾಸಕ್ತಿಯನ್ನು ಈ ವಚನ ತುಂಬ ಸೊಗಸಾಗಿ ಚಿತ್ರಿಸುತ್ತದೆ :

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದರೇನೋ ಶಿವಶಿವಾ ಹೋದರೇನೋ !
ಕೂಡಲ ಸಂಗಮದೇವ, ಕೇಳಯ್ಯ—
ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ !

ಇಲ್ಲಿ ಎರಡು ಬೇರೆ ಬೇರೆ ಚಿತ್ರಗಳಿವೆ—ಒಂದು ಲೌಕಿಕ, ಒಂದು ಅಧ್ಯಾತ್ಮಿಕ. ಹೆಣ್ಣಿನಲ್ಲಿ ಪತಿನಿಷ್ಠೆ, ಭಕ್ತನಲ್ಲಿ ಲಿಂಗನಿಷ್ಠೆ ಅತ್ಯವಶ್ಯ ಗುಣಗಳು. ಆಯಾ ಕ್ಷೇತ್ರದಲ್ಲಿ ನಿಷ್ಠೆ ಇರಲೇಬೇಕು. ಬಸವಣ್ಣನವರು ಒಂದನ್ನು ಹೇಳುವ ಭರದಲ್ಲಿ ಮತ್ತೊಂದನ್ನು ಮರೆತಿಲ್ಲ. ಎರಡಕ್ಕೂ ಸಮಾನ ಪ್ರಾಶಸ್ತ್ಯ. ಆದರೆ ಹಾಗೆ ಪತಿನಿಷ್ಠೆ, ಲಿಂಗನಿಷ್ಠೆ ಇಲ್ಲದಿದ್ದರೆ ? "ಊಡದ ಆವಿಂಗೆ ಉಣ್ಣದ ಕರು ಬಿಟ್ಟಂತೆ" ಆಗುತ್ತದೆ ಪರಿಸ್ಥಿತಿ. ತಾಯಿ ಮಕ್ಕಳಿಗೆ ಪರಸ್ಪರ ಹೊಂದಾಣಿಕೆ ಇಲ್ಲದಿರುವಾಗ ಯಾರೇನು ಮಾಡಲಾದೀತು ? ಅಂತೆಯೆ ಗಂಡ-ಹೆಂಡಿರ, ಭಗವಂತ-ಭಕ್ತರ ಪರಸ್ಪರ ವಿರಸ ; ಇದು ಮಹಾ ದುರದೃಷ್ಟಕರ. ವಾಸ್ತವವಾಗಿ ಇವರದು ಪ್ರೀತಿಮೂಲವಾದ ಆತ್ಮೀಯ ಸಂಬಂಧ – ಹಸು ಕರುಗಳ ಸಂಬಂಧದಂತೆ. ಇದು ಕದಗೆಟ್ಟಾಗ ಯಾರಾದರೊಬ್ಬರು ಮುಂದುವರಿದು ಸರಿಪಡಿಸಿಕೊಳ್ಳಬೇಕು. ಈ ದೃಷ್ಟಿಯಿಂದ ಹೆಂಡತಿಯ, ಭಕ್ತನ ಹೊಣೆ ಮಹತ್ವದ್ದು. ಅವರಿಗೇ ನಿಷ್ಠೆಯಿಲ್ಲದಿದ್ದರೆ ಹೇಳುವುದೇನಿದೆ ? ಅಂತಹ ಹೆಂಡತಿ, ಅಂತಹ ಭಕ್ತ "ಇದ್ದರೇನೋ ಶಿವ ಶಿವಾ ಹೋದರೇನೋ !" (ಈ ಮಾತಿನಲ್ಲಿ ತಿರಸ್ಕಾರ ಚೆನ್ನಾಗಿ ಧ್ವನಿತವಾಗುತ್ತದೆ). ಪ್ರೇಮ ಮೂಲವಾಗಿದ್ದೂ ವಿರಸಕ್ಕೆ ತುತ್ತಾಗುವ ಯಾವುದೇ ಬಗೆಯ ಸಂಬಂಧಕ್ಕೆ ಈ ಊಡದ ಆವು, ಉಣ್ಣದ ಕರುವಿನ ರೂಪಕ ಒಪ್ಪುತ್ತದೆ.

ಹೃದಯದಲ್ಲಿ ಭಕ್ತಿಯಿಲ್ಲದೆ ಹೊರಗೆ ಯಾಂತ್ರಿಕವಾಗಿ ಮಾಡುವ ಪೂಜೆ ಪುರಸ್ಕಾರಗಳು ಹೇಗೆ ವ್ಯರ್ಥವೆಂಬುದನ್ನು ಕೆಳಗಿನ ರೂಪಕಗಳು ಮನಂಬುಗವಂತೆ ಮಾಡುತ್ತವೆ.

ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ :
ಆ ಪೂಜೆಯುಂ, ಆ ಮಾಟವು
ಚಿತ್ರದ ರೂಹು ಕಾಣಿರಣ್ಣ ! ಚಿತ್ರದ ಕಬ್ಬು ಕಾಣಿರಣ್ಣ !
ಅಪ್ಪಿದರೆ ಸುಖವಿಲ್ಲ, ಮೆಲಿದರೆ ಸವಿಯಿಲ್ಲ !

ಕಲಾವಿದ ಜಾಣನಾಗಿದ್ದರೆ ಚಿತ್ರಗಳನ್ನು ಸಜೀವವೆನ್ನಿಸುವಂತೆ ಬರೆಯಬಲ್ಲ ; ಚಿತ್ರದ ವಸ್ತು ನೈಜವೇನೊ ಎಂಬ ಭ್ರಮೆ ಹುಟ್ಟಿಸಬಲ್ಲ. ಚಿತ್ರಸ್ಥಳಾದ ಹೆಣ್ಣು ಯಥಾವತ್ತಾಗಿ, ಮೋಹಕವಾಗಿ ಕಂಡುಬರಬಹುದು ; ಚಿತ್ರದ ಕಬ್ಬು ವಾಸ್ತವವೆನಿಸಬಹುದು. ಆದರೆ ಆ ಕಾಮಿನಿ, ಆ ಕಬ್ಬು ಬರಿಯ ತೋರಿಕೆಯ ಕೃತಕ ಆಕೃತಿಗಳು ; ಅವುಗಳಲ್ಲಿ ಪ್ರಾಣವಿಲ್ಲ, ರಸವಿಲ್ಲ, ರುಚಿಯಿಲ್ಲ. ಮೇಲುನೋಟಕ್ಕೆ ಅವು ಚಿತ್ರವಲ್ಲ, ಸತ್ಯ ಎಂದೇ ತೋರಬಹುದು. ಅನುಭವಿಸಬಯಸಿದಾಗ ಗೊತ್ತಾಗುತ್ತದೆ. ಅವು ಬರಿಯ ನಿರ್ಜೀವಛಾಯೆಗಳೆಂದು. ಭಕ್ತಿವಿರಹಿತವಾದ ಪೂಜೆ, ಮಾಟಗಳು ಹಾಗೆ. ಅವುಗಳ ಆಡಂಬರವನ್ನು ನೋಡಿದವರಿಗೆ ಅಲ್ಲಿ ನಿಜವಾದ ಭಕ್ತಿ, ನಿಷ್ಠೆ ಉಂಟೆಂದೇ ಭ್ರಾಂತಿಯಾಗಬಹುದು. ಹತ್ತಿರ ಬಂದು ಪರೀಕ್ಷಿಸಿದರೆ ತಿಳಿಯುತ್ತದೆ ಆ ಪೂಜೆಯ ಪೊಳ್ಳುತನ. ಭಗವಂತನಿಗೂ ಈ ತೆರನಾದ ಭಕ್ತಿ ಅನುಭವಗಮ್ಯವಾಗುವುದಿಲ್ಲ—ಚಿತ್ರದ ರೂಹಿನಂತೆ, ಕಬ್ಬಿನಂತೆ !

ಈ ಡಾಂಬಿಕ ಭಕ್ತರು ಒಂದು ವರ್ಗ. ಇವರು ಎಷ್ಟೋವಾಸಿ ! ಸ್ವತಃ ತಾವೇ ಪೂಜೆ ಮಾಡುತ್ತಾರೆ. ಇನ್ನೊಂದು ವರ್ಗದವರಿದ್ದಾರೆ. ಅವರು ಬೇರೆಯವರ ಕೈಯಲ್ಲಿ ಪೂಜೆಮಾಡಿಸಿ ಕೃತಕೃತ್ಯರಾಗುತ್ತಾರೆ. ಅಂತಹವರ ಮೇಲೆ ಬಸವಣ್ಣನವರೆಸೆದಿರುವ ವಾಗ್ಬಾಣ ಆ ಡೊಂಕಿಗೆ ನಿಜವಾಗಿ ರಾಮಬಾಣ :

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೊಬ್ಬರ ಕೈಯಲಿ ಮಾಡಿಸಬಹುದೇ ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವನು ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲಿ ಮಾಡಿಸಬಹುದೇ ?

ರತಿ, ಭೋಜನಗಳು ಪ್ರತಿಯೊಬ್ಬರ ಅನಿವಾರ್ಯ ಕರ್ತವ್ಯಗಳು ; ವ್ಯಕ್ತಿ ಸ್ವತಃ ಮಾಡಿದಾಗ ಮಾತ್ರವೆ ದೇಹ ಮನಸ್ಸುಗಳಗೆ ಸಂತೋಷಕೊಡತಕ್ಕವು. ಲಿಂಗಪೂಜೆಯೂ ಹಾಗೆಯೇ. ರತಿಯಂತೆ, ಊಟದಂತೆ ಅದು ಅವಶ್ಯ ಕರ್ಮ ; ಕೈಯಾರೆ ನಡೆಸಿದಾಗ ಮಾತ್ರ ಆತ್ಮಸಂತೃಪ್ತಿಕಾರಕ. ಈ ಕರ್ತವ್ಯಗಳನ್ನು ಪರರ ಕೈಯಿಂದ ಮಾಡಿಸುವುದು ಎಂತಹ ಹಾಸ್ಯಾಸ್ಪದ ಅವಿವೇಕ ? ಅದರಿಂದ ತನಗಾದ ಲಾಭವಾದರೂ ಏನು ? ಅತ್ಯಂತ ಮರ್ಮಸ್ಪರ್ಶಿಯಾಗಿದೆ ಬಸವಣ್ಣನವರ ಟೀಕೆ.

ರತಿಕ್ರಿಯೆಯ ದೃಷ್ಟಾಂತವನ್ನು ಅವರಿಲ್ಲಿ ಎಷ್ಟು ಧೈರ್ಯದಿಂದ ನೀಡಿದ್ದಾರೆ! ಅವರ ದರ್ಶನದ ಔನತ್ಯದಿಂದ ಬಂದದ್ದು ಈ ಧೈರ್ಯ. ರತಿರೂಪಕ ಅವರಿಗೆ ಆಕ್ಷೇಪಣೀಯವಾಗಿ ತೋರಲಿಲ್ಲ. ಏಕೆ ತೋರಬೇಕು ? ಕವಿಪ್ರತಿಭೆ ಯಾವ ವಸ್ತುವನ್ನು ಬೇಕಾದರೂ ಉದ್ಧರಿಸಿ ರೂಪಕ ಅಥವಾ ಪ್ರತಿಮೆಯನ್ನಾಗಿ ಮಾಡಿಕೊಳ್ಳಬಲ್ಲುದು. ಆಗ ಆ ವಸ್ತು ತನ್ನ ಹೀನಾರ್ಥನ್ನು ಕಳೆದುಕೊಂಡು ಕಾವ್ಯಪರಸ್ಥವಾಗಿ ಗೌರವಾಸ್ಪದವೆ ಆಗುತ್ತದೆ. ಇಲ್ಲಿ ರತಿಕ್ರಿಡೆ ತನ್ನ ಅಸಭ್ಯತೆಯನ್ನು ನೀಗಿಕೊಂಡು ಪವಿತ್ರ ಕರ್ತವ್ಯವೊಂದಕ್ಕೆ ಪ್ರತೀಕವಾಗಿ ಬಂದಿಲ್ಲವೇ? ಉಚ್ಚ-ನೀಚ, ಶೀಲ-ಅಶ್ಲೀಲ ಎಂಬುದೆಲ್ಲ ಒಂದು ವಸ್ತುವನ್ನು ನೋಡುವ ದೃಷ್ಟಿಯಲ್ಲಿದೆ. ಬಳಸಿಕೊಳ್ಳುವ ರೀತಿಯಲ್ಲಿದೆ. ಬಸವ, ಕುಮಾರವ್ಯಾಸರಂಥ ಕವಿಗಳಿಗೆ ಯಾವ ಸಂಗತಿಯೂ ಹೊರಗಲ್ಲ. ಆ ಸಾಹಸಿಗಳು ಕಾಲದ ದೃಷ್ಟಿಯಿಂದ ಮಾತ್ರ ಪ್ರಾಚೀನರು ; ಆದರೆ ಕವಿತೆಯ ದೃಷ್ಟಿಯಿಂದ ಅರ್ವಾಚೀನರು ; ನಮ್ಮ ಆಧುನಿಕ ಕಾವ್ಯಕ್ಕಿಂತ ಎಷ್ಟೋ ಹೆಜ್ಜೆ ಮುಂದೆ ಹೋದವರು ಕೂಡ.

ಸಂಸ್ಕಾರವಿಲ್ಲದವನಿಗೆ ದೀಕ್ಷೆಕೊಟ್ಟರೆ ಅದು ಭಕ್ತಿಗೆ ಪ್ರೇರಕವಾಗುವುದಿಲ್ಲವೆಂಬುದನ್ನು ಈ ಕುಂಬಳಕಾಯಿ ರೂಪಕ ತಿಳಿಸುತ್ತದೆ :

> ಕುಂಬಳಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ
> ಕೊಳೆವುದಲ್ಲದೆ ಅದು ಬಲು ಹಾಗಬಲ್ಲುದೆ ?

ಯಾವುದಾದರೂ ಗಟ್ಟಿ ಪದಾರ್ಥಕ್ಕೆ ಕಬ್ಬಿಣದ ಕಟ್ಟು ಹಾಕಿದರೆ ಅದು ಮತ್ತೂ ಸುರಕ್ಷಿತವಾಗಿರುತ್ತದೆ. ಆದರೆ ಕೊಳೆತು ಹೋಗುವುದೆ ಧರ್ಮವಾಗಿರುವ ಕುಂಬಳಕಾಯಿಗೆ ಕಟ್ಟುಕೊಟ್ಟರೆ ಅದು ಇನ್ನೂ ಬೇಗ ಕೊಳೆಯುತ್ತದೆ. ಕಟ್ಟು ಕೂಡ ನಾರುತ್ತದೆ. ಅಳಿಮನದವರಿಗೆ ಕೊಡುವ ದೀಕ್ಷೆ ಹಾಗೆ ನಿರರ್ಥಕ (ಉದ್ಧೃತ ಪಂಕ್ತಿಗಳಲ್ಲಿ ಬಂದಿರುವ ಕಕಾರಾವರ್ತನೆಯನ್ನು ಲಕ್ಷಿಸಿ)

ಕಪಟಭಕ್ತಿ ವಿನಯಗಳನ್ನು ಬಸವಣ್ಣನವರು ಈ ವಚನದಲ್ಲಿ ಅತಿಮಾರ್ಮಿಕವಾಗಿ ವಿಡಂಬನ ಮಾಡುತ್ತಾರೆ.

> ಏತ ತಲೆವಾಗಿದರೇನು ಗುರುಭಕ್ತನಾಗಬಲ್ಲುದೆ ?
> ಇಕ್ಕುಳ ಕೈ ಮುಗಿದರೇನು ಭೃತ್ಯಾಚಾರಿಯಾಗಬಲ್ಲುದೆ ?
> ಗಿಳಿಯೋದಿದರೇನು ಲಿಂಗದೇವಿಯಾಗಬಲ್ಲುದೆ ?

ಕಾರ್ಯನಿರತನಾಗಿರುವಾಗ ಇಕ್ಕಳ ಕೈ ಮುಗಿಯುವಂತೆ, ಏತತಲೆವಾಗುವಂತೆ ಕಾಣುತ್ತವೆ. ಇವು ಯಥಾರ್ಥ ಚಿತ್ರಗಳು ; ಕವಿಯ ಸೂಕ್ಷ್ಮ ನಿರೀಕ್ಷಣ ಶಕ್ತಿಗೆ ಸಾಕ್ಷಿ. ಆ ಇಕ್ಕುಳ ಏತಗಳ ಭಕ್ತಿ ಯಾಂತ್ರಿಕ, ಹೃದಯಜನ್ಯವಾದುದಲ್ಲ ; ಅವಕ್ಕೆ ಹೃದಯವೇ ಇಲ್ಲ. ಅನೇಕರು ಮಾಡುವ ನಮಸ್ಕಾರ ಇಂಥದು. ಮೇಲು ನೋಟಕ್ಕೆ ಈ ವಚನದಿಂದ ಹೊರಡುವ ಅರ್ಥ ಇಷ್ಟೆ, ಆದರೆ ಚಿಂತನದಿಂದ ಇದರ

ಸ್ವಾರಸ್ಯ ಇನ್ನೂ ಆಳವಾಗುತ್ತದೆ. ಇಕ್ಕುಳ ಕೈ ಮುಗಿಯುವುದು ಯಾವಾಗ ? ಏನನ್ನಾದರೂ ಹಿಡಿದುಕೊಳ್ಳಬೇಕಾದಾಗ, ಏತ ತಲೆವಾಗುವುದು ಯಾವಾಗ? ನೀರು ಮೊಗೆದುಕೊಳ್ಳಬೇಕಾದಾಗ. ಆ ವಿನಯದ ಹಿಂದೆ ಸ್ವಾರ್ಥವಿದೆ. ಲೋಕದಲ್ಲಿ ಅನೇಕರ ವರ್ತನೆ ಹೀಗೆ. ಅವರು ಕೈ ಮುಗಿದು ತಲೆವಾಗಿದರೆ, ಏನೋ ಗ್ರಹಚಾರ ಬಂತೆಂದೇ ಅರ್ಥ ; ಕೊಕ್ಕೆ ಹಾಕಿ ಏನನ್ನೊ ಲಪಟಾಯಿಸಲೆಂದೆ ಬಂದಿರುತ್ತಾರೆ ಈ ಧೂರ್ತವಿನಯದ ಆಷಾಢಭೂತಿಗಳು. ನಿರ್ಜೀವವಾದ ಇಕ್ಕುಳ, ಏತಗಳನ್ನು ಇಷ್ಟು ಯಶಸ್ವಿಯಾದ ರೂಪಕಗಳನ್ನಾಗಿ ಮಾಡಿಕೊಂಡ ಬಸವಣ್ಣನವರ ಜಾಣ್ಮೆ ಅನ್ಯಾದೃಶ್ಯವೇ ಸರಿ. ಇನ್ನು ಗಿಳಿ. ಅದು ಕಲಿತುದನ್ನು ಶ್ರದ್ಧೆಯಿಂದ ಒಪ್ಪಿಸಬಲ್ಲ ಪಕ್ಷಿ ; ಅದರ ಸ್ಮೃತಿಶಕ್ತಿ, ಜಿಹ್ವಾಪಟುತ್ವಗಳು ಪ್ರಶಂಸನೀಯ. ಸದಾ ' ರಾಮ, ರಾಮ ' ಎಂದೇ ಅದು ಜಪಿಸುತ್ತಿರಬಲ್ಲುದು ; ಸಕಲಶಾಸ್ತ್ರಗಳನ್ನು ಕಲಿತು ವರದಿ ಮಾಡಬಲ್ಲುದು. ಆದರೆ ಆ ಮಂತ್ರ, ಶಾಸ್ತ್ರಗಳೆಲ್ಲ ಬರಿಯ ಬಾಯಿಪಾಠ ; ಹೃದಯಾನುಭವ ಗಿಳಿಗಿಲ್ಲ. ಎಷ್ಟೋ ಮಂದಿ ಈ ಹಕ್ಕಿಯಂತೆ. ಅವರ ನಾಲಗೆ ಏನೆಲ್ಲವನ್ನೂ ಪಠಿಸಬಲ್ಲದು, ಆದರೆ ಹೃದಯ ಮಾತ್ರ ಶೂನ್ಯ. ಶೂನ್ಯವೂ ಅಲ್ಲ, ಬೇರೇನನ್ನೊ ಲೆಕ್ಕ ಹಾಕುತ್ತಿರುತ್ತದೆ.

ಸ್ವತಂತ್ರವಾದ ವ್ಯಕ್ತಿತ್ವವೇ ಇಲ್ಲದೆ ಕಂಡ ಕಂಡವರನ್ನೆಲ್ಲ ಅನುಸರಿಸುವ, ಅನುಕರಿಸುವ ಚಂಚಲರನ್ನು ಈ ವಚನದಲ್ಲಿ ಖಂಡಿಸಲಾಗಿದೆ :

> ಹುತ್ತವ ಕಂಡಲ್ಲಿ ಹಾವಾಗಿ,
> ನೀರ ಕಂಡಲ್ಲಿ ಹೊಳೆಯಾದವನ ಮೆಚ್ಚುವನೆ ?

ಯಾರಲ್ಲಿ ಹೇಗೆ ನಡೆದುಕೊಂಡು ಲಾಭ ಪಡೆಯಬೇಕೆಂಬ ವಿದ್ಯೆ ಕೆಲವರಿಗೆ ಚೆನ್ನಾಗಿ ಗೊತ್ತು. ಅವರು ಹುತ್ತವನ್ನು ಕಂಡಲ್ಲಿ ಹಾವಾಗಿಬಿಡುತ್ತಾರೆ. " ಹಾವಿನ ಡೊಂಕು ಹುತ್ತಕ್ಕೆ ಸಸಿನ " ಎಂಬುದನ್ನವರು ಬಲ್ಲರು. ಎಂದಮಾತ್ರಕ್ಕೆ ಹುತ್ತದ ಮೇಲೆ ಅವರಿಗೆ ಮೋಹವಿದೆಯೆಂದೇನೂ ಅರ್ಥವಲ್ಲ. ಅದೊಂದು ಆಶ್ರಯಸ್ಥಾನ ; ಹಾವಾಗಿ ಮಾತ್ರ ಅಲ್ಲಿ ಬದುಕುವುದು ಸಾಧ್ಯ. ಆದ್ದರಿಂದಲೆ ಅವರು ಅದಕ್ಕೆ ತಕ್ಕಂತೆ ಹೊಂದಿಕೊಂಡು ತಮ್ಮ ಕೆಲಸ ಸಾಧಿಸಿಕೊಳ್ಳುತ್ತಾರೆ. ಇನ್ನೊಂದು ಬಗೆಯ ಜನ ಇವರಿಗಿಂತ ಮುಂದುವರಿದರಿದ್ದಾರೆ. ಅವರು ನೀರನ್ನು ಕಂಡಾಗ ನೀರೇ ಆಗಿ ಬೆರೆತುಕೊಳ್ಳುತ್ತಾರೆ. ಹುತ್ತ-ಹಾವುಗಳ ರೂಪಕ ಸಾಲೋಕ್ಯ - ಸಾಮೀಪ್ಯಗಳನ್ನು ಮಾತ್ರ ಧ್ವನಿಸಿದರೆ ನೀರು ಹೊಳೆಗಳ ರೂಪಕ ಮುಂದಿನ ಅವಸ್ಥೆಯಾದ ಸಾರೂಪ್ಯವನ್ನೆ ಧ್ವನಿಸುತ್ತದೆ. ಈ ದ್ವಿತೀಯ ವರ್ಗದ ಜನ ತಾವು ಆಶ್ರಯಿಸಬಯಸುವವರನ್ನು ಸಂಪೂರ್ಣವಾಗಿ ಅನುಕರಿಸಿ, ಅವರಂತೆಯೋ ಆಗಿಬಿಡುತ್ತಾರೆ. ವ್ಯತ್ಯಾಸವೆ ಗೊತ್ತಾಗಬಾರದು. ಹಾಗಾದಾಗ ಅವರ ಕೃಪಾಕಟಾಕ್ಷ ಇವರ ಮೇಲೆ ಬಿದ್ದೇ ಬೀಳುತ್ತದೆ. ತಮ್ಮ ಮೇಲಿನವರ ಅನುಗ್ರಹಲಾಭಕ್ಕಾಗಿ ಅವರಂತೆಯೋ ವೇಷ

ಧರಿಸುವ ಎಷ್ಟೋ ಮಂದಿಯನ್ನು ಇಂದಿಗೂ ಕಾಣಬಹುದಲ್ಲ! ಅವರು ಟೋಪಿ ಹಾಕಿದರೆ ಇವರೂ ಟೋಪಿ, ಅವರು ವಿಭೂತಿ ಧರಿಸಿದರೆ ಇವರೂ ವಿಭೂತಿ, ಅವರಂತೆ ಇವರದೂ ಸೂಟು ಅಥವಾ ಕಚ್ಚೆ; ಅವರ ಆದರ್ಶ (?) ಗಳು ಇವರಿಗೆ —ಹೀಗೆ ತಾದಾತ್ಮ್ಯ ಸಿದ್ಧಿಸುತ್ತದೆ; ತಮ್ಮದೇ ಆದ ಒಂದು ಮನೋಧರ್ಮ, ಧ್ಯೇಯ ಇಲ್ಲದ ಇಂತಹ ಬಾಲಬಡಕರ ಬಗೆಗೆ ಜಿಗುಪ್ಸಿತರಾದ ಬಸವಣ್ಣನವರು ಇನ್ನೊಂದು ಕಡೆ "ಅವರವರ ಕಂಡರೆ ಅವರವರಂತೆ; ಸೂಳೆಗೆ ಹುಟ್ಟಿದವರ ತೋರದಿರಯ್ಯ!" ಎಂದಿದ್ದಾರೆ. ಸೂಳೆಗೆ ಏಕನಿಷ್ಠೆ ಇಲ್ಲ; ಇನ್ನು ಅವಳಲ್ಲಿ ಹುಟ್ಟಿದವರಿಗೆ ಹೇಗೆ ಬಂದೀತು ಆ ಗುಣ? ಇದಕ್ಕಿಂತ ಹರಿತವಾಗಿ ಕಟಕಿಯಾಡುವುದು ಶಕ್ಯವಿಲ್ಲ.

ಅರಿಷಡ್ವರ್ಗಗಳು ಹೇಗೆ ಆತ್ಮಘಾತಕವೆಂಬುದನ್ನು ಈ ರೂಪಕ ಅನನ್ಯವಾಗಿ ಉಪದೇಶಿಸುತ್ತದೆ:

ತನುವಿನ ಕೋಪ ತನ್ನ ಹಿರಿಯತನದ ಕೇಡು;
ಮನದ ಕೋಪ ತನ್ನ ಅರಿವಿನ ಕೇಡು.
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವ!

ನಮ್ಮ ಮನೆಯ ಬೆಂಕಿ ನೆರೆಮನೆಯನ್ನು ಮಾತ್ರ ಸುಡಲಿ ಎಂದರೆ ಹೇಗಾದೀತು? ಅದು ನಮ್ಮ ಮನೆಯನ್ನು ಬೂದಿ ಮಾಡಿದ ಬಳಿಕವೆ ಉಳಿದ ಮನೆಗಳಿಗೆ ಹಬ್ಬುತ್ತದೆ. ಕಾಮಕ್ರೋಧಾದಿಗಳು ಹಾಗೆಯೆ. ಅನ್ಯರಿಗೆ ಅವು ಉಪದ್ರವ ಮಾಡಲಿ ಬಿಡಲಿ, ನಮಗಂತೂ ಹಾನಿಕರ; ನಮ್ಮ ಪಾಶವೀಪ್ರವೃತ್ತಿಗಳಿಗೆ ನಾವೇ ಮೊದಲ ಆಹುತಿ. ನಮ್ಮ ಹಿತಕ್ಕಾಗಿಯಾದರೂ ಅವನ್ನು ದಮನ ಮಾಡಬೇಕು. ಲೋಕ ಸುಖವಾಗಿರುವುದು ಬೇಡ, ನಾವು ಸುಖವಾಗಿದ್ದರೆ ಸಾಕು ಎನ್ನುವವರಿಗೆ ಕೂಡ ನಾಟುವಂತಿದೆ ಬಸವಣ್ಣನವರ ಈ ಬೋಧೆ. ಏಕೆಂದರೆ ಇಲ್ಲಿ ಕಾಂತಾಸಂಮಿತವಿದೆ. ಬರಿಯ ನೀತಿ ಶಾಸ್ತ್ರದಿಂದ ಇಂತಹ ಪರಿಣಾಮವಾಗದು.

(ಸಶೇಷ)

ತೀರ ಮೃದುವೂ ಆಗಿರಬಾರದು, ತೀರಾ ಕ್ರೂರನೂ ಆಗಿರಬಾರದು. ಏಕೆಂದರೆ ಮೃದುವಾದುದನ್ನು ಮೃದುವಿನಿಂದಲೂ, ಕಠೋರವಾದುದನ್ನು ಕಠೋರದಿಂದಲೂ ನಾಶಮಾಡುತ್ತಾರೆ.

—ಸುಭಾಷಿತ

ಕನ್ಯಾಕುಮಾರಿ–ಸ್ಫೂರ್ತಿಕೇಂದ್ರ

—ಜಗದ್ಗುರು ಮಾತೆ ಮಹಾದೇವಿ

ಕನ್ಯಾಕುಮಾರಿ ಸ್ಫೂರ್ತಿಕೇಂದ್ರ, ಅನೇಕ ವಿಧದಲ್ಲಿ. ಜೂನ್ 10 ರಿಂದ 26 ರ ವರೆಗೆ ಹಮ್ಮಿಕೊಂಡ ಪ್ರವಾಸದಲ್ಲಿ ನಮ್ಮ ಪ್ರಮುಖ ಗುರಿ ಕನ್ಯಾಕುಮಾರಿಯಾಗಿತ್ತು. ಅದರ ಸಂದರ್ಶನ ಬಹುದಿನಗಳ ಕನಸು. ಕಾರ್ಯಭಾರ, ಹಣದ ಅನಾನುಕೂಲತೆ, ನಾವಷ್ಟೇ ಹೋಗದೆ ಆಶ್ರಮದ ಸಾಧಕರೆಲ್ಲರನ್ನು, ಆಶ್ರಮದ ಭಕ್ತರನ್ನೂ ಕರೆದೊಯ್ಯಬೇಕೆಂಬ ಅಭೀಪ್ಸೆ–ಈ ಎಲ್ಲ ಕಾರಣಗಳಿಂದ ನಾಲ್ಕಾರು ವರ್ಷಗಳ ಸಂಕಲ್ಪ ಈಡೇರಿರಲಿಲ್ಲ. ಹೇಗಿದ್ದರೂ ಕನ್ಯಾಕುಮಾರಿಯವರೆಗೆ ಹೋಗುತ್ತೇವೆ, ಅಕ್ಕಪಕ್ಕದ ಸನಿಹದ ಊರುಗಳನ್ನೂ ಸಂದರ್ಶಿಸುವ ಆಕಾಂಕ್ಷೆ ಹೊತ್ತೆವು. ವಿವರವಾದ ಪ್ರವಾಸದ ಬಗ್ಗೆ ಸೋದರಿ ಉಮಾದೇವಿಯ ಲೇಖನ ಇರುವುದರಿಂದ, ನಾನು ಕನ್ಯಾಕುಮಾರಿಯ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸುವೆನಿಲ್ಲಿ.

ಕನ್ಯಾಕುಮಾರಿ, ಆಂಗ್ಲರಿಂದ ವಿಕೃತವಾಗಿ ಕರೆಯಲ್ಪಟ್ಟ ಕೇಪ್ ಕಮೋರಿನ್. ಭಾರತಮಾತೆಯ ಪಾದ. ಭಾರತದ ಮುಕುಟವಾದ ಗೌರಿಶಂಕರ, ಪಾದವಾದ ಕನ್ಯಾಕುಮಾರಿ, ಈ ಎರಡು ಅಂಗಗಳ ಮಧ್ಯೆ ಶೋಭಿಸುತ್ತಿದೆ ಹಿಂದೂಸ್ಥಾನವೆಂದು ಹೆಸರಾದ ನಾಡು. ತಲೆ ಎತ್ತಿ ನೋಡಿ, ಉತ್ತುಂಗ ಶೃಂಗವನ್ನು ವೀಕ್ಷಿಸಿ ಕುಬ್ಜತೆಯನ್ನು ಹರಿಯುವಂತೆ ಗೌರಿಶಂಕರವು ಪ್ರೇರೇಪಿಸಿದರೆ, ಕಣ್ಣುಗಳನ್ನಗಲಿಸಿ ದಿಟ್ಟಿಸಿ ಸಂಕೋಚತೆಯನ್ನು ತೊರೆದು ಹೃದಯ ವೈಶಾಲ್ಯವನ್ನು ಪಡೆವಂತೆ ಮಾಡುವುದು ಕನ್ಯಾಕುಮಾರಿ.

ಕನ್ಯಾಕುಮಾರಿ ಪೌರಾಣಿಕವಾಗಿ, ಅಧ್ಯಾತ್ಮಿಕವಾಗಿ, ಭೌಗೋಲಿಕವಾಗಿ, ಐತಿಹಾಸಿಕವಾಗಿ ವೈಶಿಷ್ಟ್ಯಪೂರ್ಣ. ಭಾರತದ ಪಾದದಂತೆ ಇರುವ ಕನ್ಯಾಕುಮಾರಿ ಮೂರು ಸಮುದ್ರಗಳ ಸಂಗಮ. ಇಂಥ ದೃಶ್ಯ ಇಡೀ ಪೃಥ್ವಿಯಲ್ಲೇ ಅಸಾಧಾರಣ. ಪೂರ್ವದ ಬಂಗಾಲ ಭೂಪ, ಪಶ್ಚಿಮದ ಅರಬಿಯ ರಾಜ. ಉಭಯತರೂ ದಕ್ಷಿಣದ ಹಿಂದೂಮಹಾಸಾಗರದ ಚಕ್ರವರ್ತಿಗೆ ಶರಣಾಗಿ ಕಪ್ಪಕಾಣಿಕೆ ಸಲ್ಲಿಸುವ ದೃಶ್ಯ ಅವರ್ಣನೀಯ. ಹಲವು ಸಂಸ್ಕೃತಿ, ಧರ್ಮ, ಮತ ಪಂಥಗಳ ಸಂಗಮವಾಗಿ ಭಾರತ ಇರುವಂತೆ, ಹಲವು ಬಣ್ಣದ ನೀರು, ಬಣ್ಣಬಣ್ಣದ ಮರಳುಗಳ ಸಂಗಮ ಕನ್ಯಾಕುಮಾರಿ ಭೂಶಿರ.

ಇದಕ್ಕೆ ಪೌರಾಣಿಕ ಹಿನ್ನೆಲೆ ಇದೆ. ಪಾರ್ವತಿಯ ಅಂಶವಾದ, ಅವತಾರವಾದ ಕನ್ಯಾಕುಮಾರಿ, ಓರ್ವ ರಾಜಕುಮಾರಿ ತನ್ನ ಆರಾಧ್ಯ ದೈವ ಶಿವನಿಗಾಗಿ

ತಪಸ್ಸು ಮಾಡಿದ ತಾಣ. ಸ್ವಾಮಿ ವಿವೇಕಾನಂದ ಶಿಲಾಸ್ಮಾರಕದ ಮುಂಭಾಗದ ಒಂದು ಕಲ್ಲಿನ ಮೇಲೆ ಪಾದವಿದೆ, ಕಲ್ಲಿನಲ್ಲಿ ಕೆತ್ತಲ್ಪಟ್ಟುದು. ಅದು ಕನ್ಯಾಕುಮಾರಿ ಕೈಲಾಸದಿಂದಿಳಿದು ಮೊದಲು ಭೂಸ್ಪರ್ಶ ಮಾಡಿದ ಜಾಗವಂತೆ. ಈ ಪೌರಾಣಿಕ ಕಥೆಯ ಹಿಂದಿರುವ ತತ್ತ್ವವನ್ನು ಹೀಗೆ ಊಹಿಸಬಹುದು. ಕನ್ಯಾಕುಮಾರಿಯೆಂಬ ರಾಜಕನ್ಯೆಯು ಆ ಸಮುದ್ರದ ಮಧ್ಯದಲ್ಲಿರುವ ಬೆಟ್ಟದ ಮೇಲೆ ತಪಸ್ಸಿಗೆ ಕುಳಿತಿರಬಹುದು. ಶಿವನನ್ನು ಕುರಿತು ತಪಸ್ಸು ಮಾಡಿ ಒಲಿಸಿಕೊಂಡಿರುವ ಕಾರಣ, ಆಕೆಯನ್ನು ಪಾರ್ವತಿಯ ಅಂಶವೆನ್ನುವುದು ತೀರಾ ಸ್ವಾಭಾವಿಕ. ಅಕ್ಕಮಹಾದೇವಿ, ಕನ್ನಿಕಾಪರಮೇಶ್ವರಿ ಮುಂತಾದವರ ಕಥೆಯು ಇದೇ ರೀತಿ ಬರುವುದಷ್ಟೆ. ಅಂತೂ ಒಂದು ವೈಶಿಷ್ಟ್ಯ ಗಮನಿಸಬೇಕು. ಹಿಮಾಲಯ, ಅಂದರೆ ತಾಯಿ ಭಾರತಿಯ ಶಿರೋಭಾಗ ಶಿವನನ್ನು ಕುರಿತು ತಪಸ್ಸುಗೈದ ಉಮೆಯ ಪಾದಗಳಿಂದ ಪವಿತ್ರವಾಗಿದ್ದರೆ, ಚರಣಕಮಲವಾದ ಕನ್ಯಾಕುಮಾರಿ ಕನ್ಯೆಯ ತಪಸ್ಸಿನಿಂದ ಪವಿತ್ರಗೊಂಡಿದೆ. ಶಿವಸಂಸ್ಕೃತಿ ಈ ರೀತಿ ಅಖಂಡಭಾರತವನ್ನು ಬೆಸೆದಂತೆ ಭಾಸವಾಗುತ್ತದೆ.

ಕನ್ಯಾಕುಮಾರಿಯ ವಿಗ್ರಹ, ಭಾವಚಿತ್ರಗಳು ತುಂಬಾ ಸುಂದರ. ಎಳೆಯ ಸೂರ್ಯನಂತಹ ಮುಖ. ಅದರ ಮೇಲೆ ಮಡುಗಟ್ಟಿದ ಮುಗ್ಧತೆ, ಕಣ್ಣುಗಳಲ್ಲಿ ಹರಿಯುವ ಸಾತ್ವಿಕತೆಯ ಮಹಾಪೂರ. ಅದೇ ಆಗ ಅರಳಿದ ಗುಲಾಬಿಯಂತಹ ಎಳೆತನ ಶ್ರೀಗಂಧದ ಲೇಪನವನ್ನು ಮುಖಕ್ಕೆ ಮಾಡಿದಾಗ ವಿಗ್ರಹಕ್ಕೆ ಇನ್ನೂ ಮೆರಗು. ಜೊತೆಗೆ ಕೃತಕವಾಗಿ ಮೂಢಭಕ್ತರ, ದೇವಸ್ಥಾನ ಸಮಿತಿಯವರ ತೃಪ್ತಿಗಾಗಿ ಹೇರಿರುವ ವಜ್ರಾಭರಣಗಳ ಕಾಂತಿ. ದೇವಾಲಯ ಅತ್ಯಂತ ಪ್ರಶಾಂತ. ದೇವಾಲಯಂದ ಹೊರಗೆ ಬಂದರೆ ಮೂರು ಸಮುದ್ರಗಳ ಸಂಗಮ. ಅವುಗಳ ಸಮ್ಮಿಲನ, ಚಿನ್ನಾಟ ಅತ್ಯಂತ ಸುಂದರ. ಸಂಜೆಯ ವೇಳೆ ಸಾಕಷ್ಟು ಸಮಯ ಕಳೆದೆವು. ಅಂದು ರಾತ್ರಿ 9-30 ಕ್ಕೆ ಪೂಜೆ-ಪ್ರಸಾದ ಮುಗಿಸಿದೆವು. ಯಾಕೋ ಸಮುದ್ರದ ಬಳಿ ಹೋಗಬೇಕೆನಿಸುತ್ತಿತ್ತು. ಒಬ್ಬಿಬ್ಬರು ಭಕ್ತರನ್ನು ಕರೆದುಕೊಂಡು ಹೋದೆವು. ಆಗ ತಾನೇ ಚಂದ್ರ ಕೆಂಪು ಮೊಗದೊಡನೆ ಏರತೊಡಗಿದ. ಹುಣ್ಣಿಮೆಯಾಗಿ ಎರಡು ದಿನಗಳಾಗಿದ್ದವು. ಕೆಂಬಣ್ಣದ ಚಂದ್ರ ಹೊಂಬಣ್ಣ ತಾಳುತ್ತಾ, ಅದನ್ನೂ ಕಳೆದುಕೊಂಡು ಶುಭ್ರನಾಗತೊಡಗಿದ. ಚಂದ್ರನ ಬಣ್ಣ ಬದಲಾದಂತೆ ಅವನ ಪ್ರತಿಬಿಂಬ ಬಿದ್ದ ಅಲೆಗಳ ಬಣ್ಣವೂ ಬದಲಾಗುತ್ತಿತ್ತು. ಕೆಂಬಣ್ಣದ ಅಲೆಗಳು ಅದರಲ್ಲಿ ಕುಣದಾಡುವ ಚಂದ್ರ ಸ್ವರ್ಗರಮಣೀಯ ದೃಶ್ಯ. ಯಾವುದೋ ಒಂದು ಸ್ವರ್ಗೀಯಭಾಗ್ಯ ಈ ದೃಶ್ಯ ದರ್ಶನ ಎನ್ನಿಸಿತು. ತಕ್ಷಣವೇ ಓರ್ವರನ್ನು ಕಳಿಸಿ ದೆವು ವಸತಿಮಾಡಿದ್ದ ಸ್ಥಾನಕ್ಕೆ, ಎಲ್ಲರನ್ನೂ ಕರೆತರಲು. ಇದನ್ನೆಲ್ಲಾದರೂ ಕಳೆದುಕೊಂಡಾರು ಎಂಬ ಕಾತುರ ನನಗಿತ್ತು. ಅವರೆಲ್ಲ ಬರುವವೇಳೆಗೆ ಚಂದ್ರ ಶುಭ್ರ

ನಾಗಿದ್ದ. ಆ ಬೆಳಕಿನಲ್ಲಿ ದಂಡೆಗೆ ಅಪ್ಪಳಿಸುವ ನೊರೆಯಾದ ಅಲೆಗಳು ಬೆಳ್ಳಿಯೇ ಕರಗಿ ಬರುವಂತೆ ಕಾಣುತ್ತಿತ್ತು. "ಕಾದಂಬರಿ" ಕಾವ್ಯದಲ್ಲಿ ನಾಗವರ್ಮ ವರ್ಣಿಸುವಂತೆ, ಶಿವನು ಕನ್ಯಾಕುಮಾರಿಯನ್ನು ನೋಡಿ ನಕ್ಕಿರಬೇಕು ; ಆ ಶುಭ್ರದಂತ ಪಂಕ್ತಿಗಳು ಕಾಂತಿಯನ್ನು ಹೊರಸೂಸಿರಬೇಕು. ಆ ಮಂದಹಾಸ, ದಂತಕಾಂತಿಗಳು ಕರಗಿ ನೀರಾಗಿ ಬರುತ್ತಿರಬೇಕು !! ಮಾತುಗಳಿಗತೀತವಾದ ಮೌನವೇ ಹೆಚ್ಚು ಅರ್ಥಪೂರ್ಣವಾಗಿತ್ತು. ಸಮುದ್ರ ಮಧ್ಯದಲ್ಲಿ ಅಲ್ಲಲ್ಲಿ ಹೆಬ್ಬಂಡೆಗಳಿಗೆ ಅಲೆತಾಗಿ ಚಿಮ್ಮಿ, ಆ ಶಿಲಾತಪಸ್ವಿಗಳಿಗೆ ಅಭಿಷೇಕ ಮಾಡಿರುವ ದೃಶ್ಯ ವಿಲಕ್ಷಣ! ಬರುವಾಗ ನೀರಾಗಿ ಬಂದ ಅಲೆ, ಬಡಿದು ಹಾಲಾಗಿ ಚೆಲ್ಲುವ ಪರಿ ರಮಣೀಯ ! ಚಂದ್ರನ ಬೆಳಕು ವಿಸ್ತಾರವಾದಂತೆ ಸಮುದ್ರಗಳ ರೂಪ ಬದಲಾಗುತ್ತಿತ್ತು. ನನ್ನ ತಲೆಯಲ್ಲಿ ಹಲವಾರು ಭಾವನೆ ಮಿಂಚಿನಂತೆ ಸಂಚರಿಸುತ್ತಿದ್ದವು.

1. ಈ ಭೂಸ್ವರ್ಗವನ್ನು ಮೀರಿಸುವ ಇನ್ನೊಂದು ಸ್ವರ್ಗವಿರಲು ಸಾಧ್ಯವೆ?

2. ಸೃಷ್ಟಿಯ ಕಣಕಣದಲ್ಲಿ ನದಿ - ನದಿಗಳಲ್ಲಿ, ಹಳ್ಳ - ಕೊಳ್ಳಗಳಲ್ಲಿ, ಹೂವು-ಹಸಿರಿನಲ್ಲಿ ಆ ಶಿವನ ಲೀಲೆ, ಅವನ ನೃತ್ಯ, ಅವನ ನಾದ, ಅವನ ಇರುಹು, ಅವನ ಅರುಹು, ಅವನ ಕುರುಹು ಸ್ಫುಟವಾಗಿ ತೋರಿಬರುತ್ತಿದೆ. ಇಂಥ ಸೃಷ್ಟಿ ಜಡ, ಕರ್ತನಿಲ್ಲದ್ದು. ಆಕಸ್ಮಿಕಗಳ ಸಂತೆ ಎನ್ನಲಾದೀತೆ ? ಅವನ ಜಾಣ್ಮೆ, ಪ್ರತಿಭೆ, ಅದ್ಭುತ. ನಾಸ್ತಿಕನನ್ನು ಆಸ್ತಿಕನ ಮಾಡಲು ಯಾವ ವಾದ, ತರ್ಕಗಳೂ ಬೇಡ, ಕರ್ತಾರನ ಕೃತಿಯಾದ ಜಗತ್ತೇ ಸಾಕು !

3. ಸಮುದ್ರ ಅನಂತತೆಯ ಪ್ರತೀಕ. ಒಂದರ ಬೆನ್ನ ಹತ್ತಿ ಇನ್ನೊಂದು ಬರುವ ಅಲೆಗಳ ನಿರಂತರ ಚಟುವಟಿಕೆಯ ಸಂಗಮ. ದೇವನ ಅನಂತ ಲೀಲೆಗಳ ಸಾಕ್ಷಿ. ಪರಮಾತ್ಮನ ಅವಿಶ್ರಾಂತ ದುಡಿಮೆಯ ಪ್ರತಿಫಲ. ಮನಸ್ಸಿನ ಸಂಕುಚಿತತೆಯ ಕಟ್ಟು ಹರಿದು. ವಿಶಾಲಗೊಳಿಸುವ ವ್ಯಾಪಕ ಒಡಲು, ಈ ಕಡಲು.

4. ನಮ್ಮ ಋಷಿಮುನಿಗಳು, ಅನುಭಾವಿಗಳು ಸೃಷ್ಟಿಯನ್ನು ಅಲ್ಲಗಳೆದವರೇ ? ಈ ರೂಪರಾಶಿಯ ಕಡೆಗಣಿಸಿ ಕಣ್ಮುಚ್ಚಿ ಕುಳಿತವರೇ ! ಇಲ್ಲ ; ಅವರು ರಸಋಷಿ. ಹೆಣ್ಣು ಗಂಡುಗಳಲ್ಲಿ ಕಾಮದ ಹೊಗೆಯೊಡನೆ ಹೊತ್ತಿ ಉರಿಯುವ ಸೌಂದರ್ಯವನ್ನು ಕಡೆಗಣಿಸಿದವರೇ ವಿನಾ, ಶಿವಲೀಲೆಯ ರಸಬುಗ್ಗೆಯಾಗಿರುವ, ಸತ್ಯ-ಸುಂದರ-ಶಿವದ ಜೀವಂತ ದೇಗುಲವಾಗಿರುವ ಸೃಷ್ಟಿಯ ಶುದ್ಧ ಸೌಂದರ್ಯವನ್ನು ಅಲ್ಲಗಳೆದವರಲ್ಲ. ಇಲ್ಲವಾದರೆ ಇಂತಿಂಥ ಸುಂದರ ತಾಣಗಳನ್ನು ಆರಿಸಿಕೊಳ್ಳುತ್ತಿದ್ದರೆ?

ಉತ್ಸಾಹದ ಮಹಾಪೂರ ಹರಿದು, "ಸೃಷ್ಟಿಯ ದೇವ ದೇಗುಲದೊಳಗೆ" ಎಂಬ ಕವನ ಹಾಡಿದೆ. ಪುಣ್ಯಕ್ಕೆ, ನಮ್ಮೊಡನೆ ಬಂದ ಬಹುಪಾಲು ಪ್ರವಾಸಿಕರು ನಿಸರ್ಗಪ್ರೇಮಿಗಳು, ವಿಚಾರವಾದಿಗಳು. ಕರ್ತಲೆಯ ದೇವಾಲಯಗಳಲ್ಲಿರುವ

ಕಪ್ಪುಗೊಂಬೆಗಳನ್ನು ನೋಡುವುದಕ್ಕಿಂತ ಸೃಷ್ಟಿಯ ಅರುಹಿನ ಮನೆಯಲ್ಲಿರುವ ಜೀವಂತ ದೇವನನ್ನು ನೋಡಲಾಸಕ್ತರಾದವರು. ಗದಗುಟ್ಟಿಸುವ ಗಾಳಿ, ಹೊತ್ತು ತರುವ ತುಂತುರು ಹನಿಗಳ ಮಧ್ಯದಲ್ಲೂ ಹನ್ನೆರಡು ಗಂಟೆಯವರೆಗೆ ಈ ಅನುಪಮ ದೃಶ್ಯನೋಡುತ್ತ ನಿಂತಿದ್ದರು. ಈ ' ಶಿಕ್ಷೆ ' ಬೇಡವಾದವರು ಕೋಣೆಯ ದೀಪ ವಾರಿಸಿ, ರಗ್ಗುಗಳ ಒಳಗೆ ಹುದುಗಿಕೊಂಡು, ಕನಸಿನಲ್ಲಿ ಸ್ವರ್ಗಸುಖ ಕಾಣುತ್ತಿರಬೇಕು.

ಇಡೀ ರಾತ್ರಿಯನ್ನು ಹಾಗೇ ಕಳೆಯಬೇಕು ; ಸಮುದ್ರದ ಅಲೆಗಳನ್ನು ನೋಡುತ್ತಾ ಮೈ ಮರೆಯಬೇಕು, ಆದರಂಥದೆ ವಿಸ್ತಾರ ಹೃದಯಕ್ಕೆ ಒದಗಬೇಕು ಎಂಬ ಅಭೀಪ್ಸೆ. ಆದರೆ ನಮ್ಮ ಉತ್ಸಾಹಕ್ಕೆ ಕೊಡಲಿಪೆಟ್ಟು, ಸಿಟ್ಟಿಗೆದ್ದು ಕಪ್ಪು ಮುಖ ಹಾಕಿಕೊಂಡು ಬಯ್ಯಲು ಬಂದ ಕಾರ್ಮುಗಿಲುಗಳಿಂದ. ಆಟದಲ್ಲೇ ಮೈಮರೆತು ಊಟ, ನಿದ್ರೆಮಾಡದ ತುಂಟ ಮಗುವಿಗೆ ಬೆತ್ತದ ಏಟುಬೀಳುವಂತೆ, ಮೇಘರಾಜ ರಪರಪ ಹನಿಗಳನ್ನು ಚೆಲ್ಲಿ ಹೊಡೆಯತೊಡಗಿದ. ಸುಂದರವಾದ ಮಗುವನ್ನು ಯಾರಾದರೂ ದಿಟ್ಟಿಸಿ ನೋಡುತ್ತಿದ್ದರೆ, ಗಮನಿಸಿದ ತಾಯಿ ತನ್ನ ಕಂದನಿಗೆ ದೃಷ್ಟಿಯಾದೀತೆಂದು ಬರ್ರನೆ ಸೆರಗಿನಲ್ಲಿ ಮುಚ್ಚಿ ಕರೆದೊಯ್ಯುವಂತೆ, ಚಂದ್ರ - ಅಂಬುಧಿಗಳಿಗೂ ದೃಷ್ಟಿತಾಗೀತು ನಮ್ಮ ನಿಟ್ಟಿಸುವಿಕೆಯಿಂದ ಎಂಬ ಭಯ ಆತಂಕಗಳಿಂದ ಮೇಘರಾಜ ಮಳೆಯ ಸೆರಗನ್ನು ಶರಧಿಯ ಮೇಲೆ ಹೊದಿಸಿದಾಗ ಅನಿವಾರ್ಯವಾಗಿ ನಾವು ಮರಳಿದೆವು. ನಮ್ಮ ವಸತಿಗೃಹಕ್ಕೆ.

ರಸಗವಳ, ಕಣ್ಣು ಮನಗಳಿಗೆ, ಸದ್ಯ ಅಜೀರ್ಣವಾಗದ್ದೊಂದೇ ಪುಣ್ಯ. ಸಂಜೆ ಹೊಂಬಣ್ಣದ ಸೂರ್ಯನೊಡನೆ! ಸಮುದ್ರ ಚೆಲ್ಲಾಟವಾಡಿದ ದೃಶ್ಯ ; ರಾತ್ರಿ ಧವಳ ಶುಭ್ರ ಚಂದ್ರನೊಡನೆ ಸರಸ. ಮರುದಿನ ನಸುಕಿನಲ್ಲಿ ಸುಂದರ ಸೂರ್ಯೋದಯ. ಕನ್ಯಾಕುಮಾರಿಯದೇವಾಲಯದ ಪೂರ್ವದ್ವಾರದ ಮುಂಭಾಗದಲ್ಲಿ ನಿಲ್ಲಬೇಕು. ಆ ಕ್ಷೇತ್ರಕ್ಕೆ ಎಷ್ಟು ಜನ ಬಂದಿದ್ದಾರೆ ಎಂಬ ಅಂಕೆಸಂಖ್ಯೆ ತೆಗೆಯಲು ಬೇರೆಲ್ಲೂ ಹೋಗಬೇಕಿಲ್ಲ, ಇಲ್ಲಿಗೆ ಬಂದರೆ ಸಾಕು. (ಹತ್ತು ಪರ್ಸೆಂಟ್ ಸೋಮಾರಿಗಳನ್ನು ಸೇರಿಸೋಣ. ಲೆಖ್ಖ ಸರಿಯಾಗುತ್ತೆ. ಏಕೆಂದರೆ, ನನಗೇ ಒಂದು ಅನುಭವವಾಯಿತು, ಸೂರ್ಯೋದಯ ನೋಡಿ ವಾಪಸ್ಸು ಬರುತ್ತಿದ್ದೆವು. ಓರ್ವರು ಅದೇ ಆಗ ತಮ್ಮ ಹೊದ್ದಿಕೆ ತೆಗೆದು ಮುಖವನ್ನು ಹೊರಚಾಚಿದರು. ' ಇದೇಕೆ, ನೀವು ಬರಲಿಲ್ಲವೆ?' ಎಂದೆ. 'ಅಯ್ಯೋ, ನಮ್ಮೂರಾಗೆ ದಿನಾ ಸೂರ್ಯಹುಟ್ಟಲ್ವೇ, ಮುಳುಗಲ್ವೇ. ಅದನ್ನೋಡೋಕೆ ನಸುಕಿನ ಛಳಿಯಲ್ಲಿ ಎದ್ದು ಏಕೆ ಓಡಬೇಕು ?!' ಆದ್ದರಿಂದ ಇಂಥವರ ಲೆಖ್ಖ Extra ಓಡಿಯೋಣ)

ಎಲ್ಲರೂ ಸೂರ್ಯೋದಯ ನೋಡಲು ನೆರೆಯುತ್ತಾರೆ. ಇಂದು ಏನಾಗುತ್ತೋ ? ಎಂಬ ಕಾತುರ. ಮೋಡ ಅಡ್ಡಬಂದರೆ ಏನು ಗತಿ ? ಎಂಬ ಅತಂಕ.

ತಮ್ಮ ಇರವು ವ್ಯರ್ಥವಾದೀತು ಎಂಬ ಭಯ. ಚಕ್ರವರ್ತಿ ಸೂರ್ಯನ ಬರವನ್ನು ಸಾರಲು, ಓಕುಳಿಯನ್ನೆತ್ತಿ ಸ್ವಾಗತಿಸಲು ಉಷೆಯ ಆಗಮನ, ಸೂರ್ಯನ ಪರಿಚಾರಕನಾದ ಕೆಂಪುಬಣ್ಣ ಮೋಡಗಳಿಗೆಲ್ಲ ರಂಗನ್ನು ಎರಚುವಾಗ, ಒಳ್ಳೇ ಠೀವಿಯಿಂದ ಗಾಂಭೀರ್ಯದಿಂದ ಎಲ್ಲರೂ ನವವರನಂತೆ ತನ್ನನ್ನೇ ನೋಡುತ್ತಿರುವುದರಿಂದ ನಾಚಿ ಕೆಂಪೇರಿ ಹೊರಬರುವನು. ಭವ್ಯವಾದ ಬಾಗಿಲಪರದೆಯನ್ನು ಸರಿಸಿ ಹೊರಬರುವ ರಾಜಕುಮಾರನಂತೆ, ಸಮುದ್ರ - ನೀಲಿನಭಗಳ ಸಂಗಮದಿಂದ ಇಷ್ಟಿಷ್ಟೇ ಮೇಲೇರುವನು. ವಿವಿಧಆಕಾರಗಳನ್ನು ತಾಳುತ್ತ ಮೇಲೇರುವ ರವಿರಾಜನನ್ನು ಅಡ್ಡಹಾಕಲು ಯಾವ ಮೋಡವೂ ಅಡ್ಡಬರದುದು ನಮ್ಮ ಪುಣ್ಯ. ಓಕುಳಿಯ ನೀರನ್ನು ಎತ್ತಿ ಸ್ವಾಗತಿಸಿ, ಆ ಓಕುಳಿಯನ್ನು ಸಮುದ್ರದೊಳಗೆ ಚೆಲ್ಲಿ, ಅದನ್ನೆಲ್ಲ ಕೆಂಪಾಗಿ ಮಾಡಿ ಉಷಾರಾಣಿ ಪರಾರಿಯಾದಳು. ಚಕ್ರವರ್ತಿ ಸೂರ್ಯ ಪೂರ್ವ ದಿಗಂತದಲ್ಲಿ ಆಸೀನನಾಗುತ್ತಿದ್ದಂತೆಯೇ ಮೋಡಗಳೆಲ್ಲ ಬಂಗಾರದ ಮೆರುಗನ್ನು ಪಡೆದವು. ಇದ್ದಕ್ಕಿದ್ದಂತೆಯೇ ಸೈರನ್ ಮೊಳಗಿತು. ಅದು ಶ್ರೀ ವಿವೇಕಾನಂದ ಸ್ಮಾರಕವೆಡೆಯಿಂದ ಬಂದಿತು. ಅದೇ ಕ್ಷಣಕ್ಕೆ ಕಾವಿಯ ಧ್ವಜ ಬಾಲಸೂರ್ಯನ ಹೊಂಗಿರಣಗಳ ಕಾಂತಿಯಲ್ಲಿ ಬೆಳಗಿ, ಸಮುದ್ರಗರ್ಭದ ಮೇಲೆ ಹಾಯ್ದು ಬಂದ ತಂಗಾಳಿಯಲ್ಲಿ ಹಾರಾಡಿತು. ನನ್ನ ಮೈಮನ ಪುಳಕಗೊಂಡವು ; ಕಣ್ಣು ಆನಂದ ಭಾಷ್ಪದಿಂದ ಸಜಲವಾದವು.

ಎಂದು ? ಭಾರತದ ಜ್ಞಾನಸೂರ್ಯ ಅಖಂಡ ವಿಶ್ವವನ್ನು ಬೆಳಗುವದೆಂದು? ಹಿಂದೂ ಸಮಾನತೆಯ ಧ್ವಜ ತಲೆಯೆತ್ತಿ, ಅಸಾಧಾರಣ ಹೆಮ್ಮೆಯಿಂದ, ಜನರ ತ್ಯಾಗ - ಸೇವೆಗಳ ಕಂಭವನ್ನೇರಿ ಹಾರುವದೆಂದು ; ಬಸವವಾಣಿಯ ಕಹಳೆ ವಿಶ್ವದಾದ್ಯಂತ ಮೊಳಗುವದೆಂದು ?!

ಅದೊಂದು ಸುವರ್ಣಕ್ಷಣ. ಇಂಥವು ಆಗಾಗ ಸಿಗವು ಸಿಕ್ಕಾಗ ಕಳೆದುಕೊಂಡು ನಂತರ ಮರುಗುವುದು ಮೂರ್ಖತನ.

ಕನ್ಯಾಕುಮಾರಿ ದೇವಾಲಯದ ಪೂರ್ವದ್ವಾರ ಬಂಧಿತವಾಗಿದೆ. ಕಾರಣವು ಇವೆಯಂತೆ. ದ್ವಾರ ತೆರೆದಿಡಲ್ಪಟ್ಟಿರುತ್ತಿತ್ತಂತೆ. ರಾತ್ರಿಯ ವೇಳೆ ಹಚ್ಚಿಟ್ಟ ನಂದಾದೀವಿಗಳ ಬೆಳಕಿನಲ್ಲಿ ಬೈತಲೆ ಬೊಟ್ಟಿನ ಅಪೂರ್ವ ವಜ್ರ ಹೊಳೆಯುತ್ತಿತ್ತಂತೆ. ಆಗ ದೂರಕ್ಕೆ ಹೊಳೆಯುವ ವಜ್ರವನ್ನು ಕತ್ತಲಲ್ಲಿ ದೀಪಸ್ತಂಭವೆಂದು ಭಾವಿಸಿ ನಾವಿಕರು ನೇರವಾಗಿ ಹಡಗನ್ನು ನಡೆಸುತ್ತಿದ್ದರಂತೆ, ಬೃಹದಾಕಾರದ ಶಿಲೆಗೆ ಬಡಿದು ಹಡಗು ಮುಳುಗುತ್ತಿದ್ದವಂತೆ. ಓರ್ವ ಬ್ರಿಟಿಷ್ ಪ್ರಮುಖನು ಹೀಗೆ ಅವಘಡಕ್ಕೆ ಈಡಾದಾಗ ಪೂರ್ವದ್ವಾರ ಮುಚ್ಚಿರಿಸಲು ರಾಜಾಜ್ಞೆ ಬಂದುದೇ ಅಲ್ಲದೆ, ಆ ಅಮೂಲ್ಯ ರತ್ನವನ್ನು ಬ್ರಿಟಿಷ್ ಬೊಕ್ಕಸಕ್ಕೆ ಸೇರಿಸಿದರಂತೆ. ಆ ಅಮೂಲ್ಯ ವಜ್ರ ಇಲ್ಲವಾಗಿದ್ದರೂ ಈಗಲೂ ಇರುವ ಹಲವಾರು ವಜ್ರಗಳು

ಅಪೂರ್ವಕಾಂತಿಯಿಂದ ಮಿರುಗುತ್ತವೆ. ಆಗ ಬಹುಶಃ ಸುಪ್ರಭಾತದ ಸೂರ್ಯನ ಕಿರಣಗಳು ನೇರವಾಗಿ ಕನ್ಯಾಕುಮಾರಿಯ ದಿವ್ಯಮೊಗದ ಮೇಲೆ ಪಸರಿಸಿ ಸಂದರ್ಶಕರಿಗೆ ಉಭಯ ಸೂರ್ಯರ ದರ್ಶನವಾಗುತ್ತಿತ್ತೇನೋ ನಮಗಾಭಾಗ್ಯ ಇಲ್ಲ.

ಪೌರಾಣಿಕವಾಗಿ ಕನ್ಯಾಕುಮಾರಿಯ ಪಾದಸ್ಪರ್ಶದಿಂದ, ಭೌಗೋಲಿಕವಾಗಿ ಮೂರು ಸಮುದ್ರಗಳ ಸಂಗಮವಾಗಿ, ಪ್ರಸಿದ್ಧವಾಗಿರುವ ಕನ್ಯಾಕುಮಾರಿಯು ಈಗ ಇನ್ನೊಂದು ವಿಶೇಷ ಆಕರ್ಷಣೆಯ ಕೇಂದ್ರವಾಗಿದೆ. ಅದುವೇ ಸ್ವಾಮಿ ವಿವೇಕಾನಂದ ಶಿಲಾಸ್ಮಾರಕ. ಸ್ವಾಮಿ ವಿವೇಕಾನಂದರು ಅನೇಕ ಚೇತನಗಳಿಗೆ ಸ್ಫೂರ್ತಿಯಾಗಿದ್ದರೆ, ಅವರ ಸ್ಮಾರಕವೂ ಒಂದು ಸ್ಫೂರ್ತಿ ಕೇಂದ್ರವಾಗಿದೆ. ಬರಿದಾದ ಬೋಳು ಬಂಡೆ ಸುಂದರವಾದ ಆಲಯ, ಭವ್ಯವಾದ ಮೂರ್ತಿಯನ್ನು ಹೊತ್ತು ನಿಂತಿದೆ. ಅಖಂಡ ಭಾರತ ಸಂಚಾರಗೈದ ಸ್ವಾಮೀಜಿ ಕನ್ಯಾಕುಮಾರಿಯ ಆ ಶಿಲಾದ್ವೀಪದವರೆಗೆ ಈಜಿಕೊಂಡು ಹೋಗಿ, ಅದರ ನೆತ್ತಿಯ ಮೇಲೆ ಕುಳಿತು ಧ್ಯಾನೋನ್ಮುಖರಾದರು. ಬರಿದೇ ಗತವೈಭವವನ್ನು ಹೊಗಳಿಕೊಳ್ಳುತ್ತ, ಯಾವುದೇ ರೀತಿಯಲ್ಲಿ ವಿಧರ್ಮೀಯರ ಆಘಾತಗಳನ್ನೆದುರಿಸದೆ ಮಾನಸಿಕ ಕ್ಲೈಬ್ಯಕ್ಕೀಡಾದ ಹಿಂದು ಜನರಲ್ಲಿ ಆತ್ಮಾಭಿಮಾನವನ್ನು ಜಾಗೃತಿಸುವುದು, ಸೇವೆಗೆ ಸನ್ನದ್ಧರನ್ನಾಗಿ ಮಾಡುವುದು ಹೇಗೆಂಬುದು ವಿವೇಕಾನಂದರ ಚಿಂತನೆಯ ಕೇಂದ್ರವಾಗಿತ್ತು.

ಆ ವಿಶೇಷ ಜಾಗದಲ್ಲಿ ಕುಳಿತಾಗ, ಹಬ್ಬಿ ಹಸರಿಸುವ ಜಲಮಂಡಲ, ವ್ಯೋಮ ಮಂಡಲಗಳನ್ನು ನೋಡಿದಾಗ ಅದಮ್ಯ ಉತ್ಸಾಹ ಉಕ್ಕಿ ಬಂದು ರಾಷ್ಟ್ರಮಾತೆಯ ರಕ್ಷಣೆಗಾಗಿ ಕಂಕಣ ತೊಟ್ಟರು ಸ್ವಾಮೀಜಿ; ಪ್ರತಿಜ್ಞೆಗೈದು ಹೊರಟೇಬಿಟ್ಟರು. ಆ ನೆಲ ಈಗ ಇನ್ನೂ ಹೆಚ್ಚಿನ ಸ್ಫೂರ್ತಿ ಕೊಡಬಲ್ಲುದು. ಅಂಥಲ್ಲಿ ಸ್ಮಾರಕವನ್ನು ರಚಿಸಿರುವುದು ಸ್ತುತ್ಯಾರ್ಹ ಮಾತ್ರವಲ್ಲ ಎಂಟೆದೆಯ ಸಾಹಸ. ಹಿಂದುಸ್ಥಾನದಲ್ಲಿ ಅಲ್ಪಸಂಖ್ಯಾಕರು, ನಿರಾಶ್ರಿತರೂ ಆಗಿರುವ ಹಿಂದುಗಳ ಓರ್ವ ಮಹಾತ್ಮನ ಪ್ರತಿಮೆಯನ್ನು ನಿಲ್ಲಗೊಡಬಾರದೆಂಬುದು ಕ್ರಿಸ್ತೀಯರ ಛಲ. ಅಲ್ಲಿ ಮೇರಿಯ ಪ್ರತಿಮೆ ನಿಲ್ಲಿಸುವ ಪ್ರಯತ್ನ ; ನಿಲ್ಲಿಸಿಯೂ ಆಗಿತ್ತು. ಮೇರಿಗೂ-ಆ ನೆಲಕ್ಕೂ ಯಾವುದೇ ಬಾದರಾಯಣ ಸಂಬಂಧವಿರದ ಆ ಆಯಕಟ್ಟಿನ ಪ್ರದೇಶದಲ್ಲಿ, ಕನ್ಯಾಕುಮಾರಿ ಮಾತೆಯ ಎದುರಿಗೆ ಯಾವುದೇ ಸಾಂಕೇತಿಕ ಅರ್ಥವಿಲ್ಲದೆ ಮೇರಿಯ ಪ್ರತಿಮೆ ನಿಲ್ಲಿಸುವುದೇಕೆ ? ಈ ದೌರ್ಜನ್ಯ, ದುರಭಿಮಾನ ಹಿಂದು ಕಾರ್ಯಕರ್ತರ ಆತ್ಮಾಭಿಮಾನಕ್ಕೆ ಧಕ್ಕೆಯನ್ನುಂಟುಮಾಡಿತು. ಕೆಲವರು ಪಣ ತೊಟ್ಟರು, ಪ್ರಾಣ ಮುಡಿಪಾಗಿಟ್ಟರು. ದೋಣಿಯನ್ನು ನಡೆಸಲು ಅಂಬಿಗರು ಒಪ್ಪದಾಗ ತಾವೇ ನಡೆಸಿ ಕೊಂಡು ಹೋಗಿ ಸಾಮಾನು ಒಯ್ದು ಕೆಲಸ ಆರಂಭಿಸಿದರು. ಆದರೆ ಬೆಳಗಿನಿಂದ ಸಂಜೆಯವರೆಗೆ ಮಾಡಿದ ಕೆಲಸವೆಲ್ಲ ರಾತ್ರಿ ಕಳೆದು ಬೆಳಗಾಗುವುದರೊಡನೆ ನೆಲಸಮ, ಬಿಡದ ಛಲ. ಅಂತೂ ತಮಿಳುನಾಡು ಸರ್ಕಾರದ ಒಪ್ಪಿಗೆ ಪಡೆದುಬಿಟ್ಟರು

ಸ್ಮಾರಕ ನಿರ್ಮಾಣಕ್ಕೆ. ಅದರ ಪಕ್ಕದಲ್ಲಿರುವ ಇನ್ನೊಂದು ಬಂಡೆಯ ಮೇಲೆ ತಿರುವಳ್ಳುವರು ಸ್ಮಾರಕ ಮಾಡಲು ಅಡ್ಡಿ ಬರಬಾರದೆಂಬ ಕರಾರಿನ ಮೇಲೆ ಸರ್ಕಾರ ಒಪ್ಪಿಗೆ ನೀಡಿತಂತೆ. ನೂರು ವಿಟು ಬಿದ್ದು ಮೂರ್ತಿಯಾಗುವಂತೆ ಅನೇಕ ಕಾರ್ಯಕರ್ತರ ತ್ಯಾಗ, ಶ್ರಮ, ಸೇವೆಗಳ ಪ್ರತಿಫಲ ಈ ಸ್ಮಾರಕ. ಅಂತೂ ಸ್ಮಾರಕ ನಿರ್ಮಾಣಗಳಿಗೆ ಹೆಸರಾದ ತಮಿಳುನಾಡಿನ ಸರ್ಕಾರ ಇನ್ನೊಂದು ವಿಶ್ವವಿಖ್ಯಾತ ಸ್ಮಾರಕ ಪಡೆಯಿತು.

ಒಂದೊಂದು ರೂಪಾಯಿ ಕೊಟ್ಟು ಫೆರ್ರಿಯಲ್ಲಿ ಕುಳಿತರೆ ಸ್ಮಾರಕಕ್ಕೆ ಕರೆದೊಯ್ಯುವರು. ಕನ್ಯಾಕುಮಾರಿಯ ಪಾದವಿರುವ ತಾಣ ಶ್ರೀಪಾದ ಶಿಲ್ಪಂ ಸ್ಮಾರಕ ಎದುರಿಗಿದೆ. ಶ್ರೀ ವಿವೇಕಾನಂದರ ಮಂದಿರದ ಹೊರಭಾಗ ಉತ್ತಮ ಗ್ರಾನೈಟ್ ಕಲ್ಲುಗಳಿಂದ ನಿರ್ಮಾಣವಾಗಿದೆ. ಒಳಭಾಗವೆಲ್ಲ ಕಪ್ಪು ಪಾಲಿಶ್ ಮಾಡಿದ ಕಲ್ಲುಗಳಿಂದ ಆಗಿದ್ದು, ಫಳಫಳನೆ ಮಿರುಗುತ್ತದೆ. ಸಂರಕ್ಷಣೆ, ಉಸ್ತುವಾರಿ ಚೆನ್ನಾಗಿವೆ. ವಿವೇಕಾನಂದ ಕೇಂದ್ರದ ಒಂದು ನಾವೆ, ತಮಿಳುನಾಡು ಸರ್ಕಾರ ಈ ಸಂಸ್ಥೆಗೆ ಕೊಡುಗೆಯಾಗಿ ಕೊಟ್ಟ ಇನ್ನೊಂದು ನಾವೆ ಪ್ರಮುಖ ಆದಾಯಸಾಧನ. ಹೋಗಿಬರಲು ತೆಗೆದುಕೊಳ್ಳುವ ಒಂದು ರೂಪಾಯಿಯ ಆದಾಯದ ಮೇಲೆ ಸಂರಕ್ಷಣೆಯ ಕೆಲಸವಿದೆ. ಸ್ವಯಂ ಸ್ಫೂರ್ತಿಯ ಕಾಣಿಕೆ ಎಷ್ಟಾದರೂ ಕೊಡಬಹುದು. ವಿವೇಕಾನಂದ ಮಂದಿರದ ಹಿಂಬದಿಯ ತಗ್ಗಿನಲ್ಲಿ ಪ್ರಶಾಂತವಾದೊಂದು ಧ್ಯಾನಮಂದಿರ, ಗ್ರಂಥ ಮಳಿಗೆ. ಮಂದಿರದ ಸುತ್ತಲೂ ವಿಸ್ತಾರವಾದ ಆವರಣ, ಸಂಪೂರ್ಣವಾಗಿ ಕಬ್ಬಿಣದ ಸುಳಿಯ ಬೇಲಿ. ಅಲ್ಲಲ್ಲೇ ನಿಂತು ಮೌನವಾಗಿ ನೋಡಬೇಕು. ಒಂದರ ಹಿಂದೊಂದು ಸ್ಪರ್ಧಾತ್ಮಕವಾಗಿ ಧಾವಿಸಿ ಮುಟ್ಟಾಟವಾಡುವ ಅಲೆಗಳು. ಅಲ್ಲಲ್ಲೇ ಇರುವ ಬಂಡೆಗಳಿಗೆ ವೇಗವಾಗಿ ಬಡಿದು ಹಾಲಿನ ಕಾರಂಜಿಯಂತೆ ಪುಟಿದು, ತುಂತುರು ತುಂತುರಾಗಿ ಸಿಡಿದು, ಬಂಡೆಗಳಿಗೆ ಹಾಲಿನ ಅಭಿಷೇಕ ಮಾಡಿದಂತೆ ಸಂಪೂರ್ಣ ತೊಳೆದು ಕೆಳಗೆ ಬೀಳುವ ನೀರು ತುಂಬಾ ರಮಣೀಯ. "ಸದಾಕಾಲ ಅಬ್ಬರಿಸುತ್ತ, ಅಲೆಗಳನ್ನೆಬ್ಬಿಸಿ ಆಟವಾಡುತ್ತಲೇ ಇರುವುದಲ್ಲ. ಈ ಸಮುದ್ರಕ್ಕೆ ಬೇಸರವಾಗದೆ ?" ಎನ್ನುವುದು. ದೂರದೂರ ಕಣ್ಣು ಹಾಕಿದಂತೆ ನಿಸ್ತರಂಗವಾಗಿ ತೋರುವ ಸಮುದ್ರ, ಅಲ್ಲಲ್ಲೇ ಪುಟ್ಟ ಬಟ್ಟಲು ಕಡ್ಡಿಗಳಂತೆ ತೋರುವ ಮೀನುಗಾರರ ದೋಣಿ ಮತ್ತು ಒಡಲ ರಕ್ಷಣೆಗಾಗಿ ದಿನನಿತ್ಯಲೂ ಭಯಂಕರ ಸಾಹಸವನ್ನಾಹ್ವಾನಿಸುವ ಮೀನುಗಾರರು. ಅನಂತ ಸಮುದ್ರದಲ್ಲಿ ಅವನೊಂದು ಚುಕ್ಕೆಯಾಗಿ ಕಾಣುವಂತೆ, ಬ್ರಹ್ಮಾಂಡದ ಮಹಾಸಮುದ್ರದಲ್ಲಿ ಅನೇಕ ಗ್ರಹೋಪಗ್ರಹ ಗೋಲಗಳೆಂಬ ಅಲೆಗಳ ಮಧ್ಯೆ ಜೀವಾತ್ಮರುಗಳೆಂಬ ಪಯಣಿಗರು ಅಷ್ಟೇ ಅಣುವಾಗಿ ತೋರುವರು. ಆಗ ಅಹಂಕಾರದಿಂದ ಬೀಗಿ ನಿಂತ ಜೀವ ಸಮುದ್ರದೆದುರು ನಿಂತಾಗ ಮುದುಡಿಕೊಳ್ಳುವುದು.

'ನಾನೆಷ್ಟರವ ? ಒಂದು ಅಣುಮಾತ್ರ, ನೀನೋ ಮಹಾವಿಭುವಾದ ದೇವ' ಎಂದು ತಲೆಬಾಗುವನು.

ಅತ್ಯಂತ ಗಾಂಭೀರ್ಯ, ಚಿಂತನ ಶೀಲತೆ, ಹಿಂದುಗಳ ಕ್ಲೈಬ್ಯಕ್ಕಾಗಿ ವ್ಯಥೆ–ಈ ಮೂರು ಭಾವಗಳ ಮಿಶ್ರಣವಾದ ಪ್ರತಿಮೆ ಸ್ಫೂರ್ತಿದಾಯಕಬಿಂಬ. ಸ್ವಾಮಿ ವಿವೇಕಾನಂದರ ಮಾರ್ದವತೆ ತುಂಬಿದ ಮುಖ, ತೇಜಸ್ಸು ಇಣುಕುವ ಕಣ್ಗಳ ಅನೇಕ ಫೋಟೋ ನೋಡಿದ ನನಗೆ ಯಾಕೋ ಆ ಪುತ್ಥಳಿಯಲ್ಲಿ ಅವರ ವ್ಯಕ್ತಿತ್ವ ಒಡೆದುಮೂಡಿಲ್ಲವೆನಿಸಿತು. ಚಿಂತೆ - ವ್ಯಾಕುಲತೆಯ ರೇಖೆಗಳು ಹೆಚ್ಚಾಗಿ ಕಂಡವು. ಕಲ್ಪಿಸಿದ ಭಾವನೆಗಳಿಗೆ ರೂಪಕೊಡಲು ಮನುಷ್ಯನ ಲೇಖನಿಗಾಗಲೀ, ಕುಂಚಕ್ಕಾಗಲೀ, ಉಳಿಗಾಗಲೀ ಸಾಮರ್ಥ್ಯವಿಲ್ಲ. ಇದು ಸ್ಥೂಲ, ಅದು ಸೂಕ್ಷ್ಮ. ಇದು ಸೀಮಿತ, ಅದು ನಿಸ್ಸೀಮ.

ಕನ್ಯಾಕುಮಾರಿಯ ಇನ್ನೊಂದು ಸಂದರ್ಶನ ತಾಣ 'ವಿವೇಕಾನಂದ ಕೇಂದ್ರ.' ಸ್ಮಾರಕ ನಿರ್ಮಾಣಕಾಲದಲ್ಲಿ ಅಖಿಲ ಭಾರತ ಮಟ್ಟದ ಸಮಿತಿ ಮಾಡಿದ್ದು, ಕಾರ್ಯಪೂರೈಕೆಯನಂತರ ಈ ವಿವೇಕಾನಂದ ಕೇಂದ್ರ ರೂಪುಗೊಂಡು ಕಾರ್ಯೋನ್ಮುಖವಾಗಿದೆ. ಅನೇಕ ತ್ಯಾಗಿಗಳು ನಿಷ್ಕಾಮತೆಯಿಂದ ಸೇವೆಗೈಯುತ್ತಿದ್ದಾರೆ. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗೆ ಸಂಬಂಧಿಸಿದ ಒಂದು ಮ್ಯೂಸಿಯಮ್ ಇದೆ. ಧ್ಯಾನ ಮಂದಿರ, ಲೈಬ್ರರಿ, ಉಪನ್ಯಾಸ ಮಂದಿರ. ಶಿಬಿರಾರ್ಥಿಗಳು-ಪ್ರವಾಸಿಕರು ಉಳಿದುಕೊಳ್ಳಲಿಕ್ಕೆ ಪ್ರವಾಸಿ ಮಂದಿರ ಎಲ್ಲವೂ ಅನುಕೂಲಕರವಾಗಿವೆ. ವಸ್ತುಸಂಗ್ರಹಾಲಯ ಸ್ವಾಮಿ ವಿವೇಕಾನಂದರ ಜೀವನವನ್ನು ಸಮರ್ಪಕವಾಗಿ ಚಿತ್ರಿಸುತ್ತದೆ. ಅಂತೂ ಚಾರಿತ್ರಿಕ ಸ್ಥಳಕ್ಕೆ ಆಧ್ಯಾತ್ಮಿಕ ಹಿನ್ನೆಲೆಯನ್ನು ಈ ಸಂಸ್ಥೆ ಒದಗಿಸುತ್ತದೆ. ನಾವು ಪ್ರವಾಸಗೈದ ಹಲವಾರು ಸ್ಥಳಗಳಲ್ಲಿ ಸದಾ ಹಸಿರಾಗಿರುವುದು ಕನ್ಯಾಕುಮಾರಿಯ ಸಂದರ್ಶನ. ನೆನಪಿಸಿಕೊಳ್ಳುತ್ತಲೇ ಮೂಡುವುದು ಸಮುದ್ರದ ಭವ್ಯಗಂಭೀರ ಚಿತ್ರ ಮನಃಪಟಲದ ಮೇಲೆ. ಸಹಸ್ರ ಸಹಸ್ರ ಅಲೆಗಳ ಅಟ್ಟಾಟ - ಮುಟ್ಟಾಟಗಳ ಚೆಲುವು ಮರಳಿ ಮೂಡುವುದು.

ಪರಮಾತ್ಮನೆಂಬ ಸತ್‌ಚಿತ್ ಆನಂದದ ವಾರಿಧಿಯ ಮೇಲೆ ತೇಲುವ ಅಲೆಗಳಂತೆ ನಾವು-ನೀವೆಲ್ಲರು! ಅಲೆ ಹುಟ್ಟುವುದು ಸಮುದ್ರದ ಆಶ್ರಯದಲ್ಲಿ, ಅಲೆಯುವುದೂ ಅಲ್ಲೇ, ಅಡಗುವುದೂ ಅದರ ಒಡಲಲ್ಲೇ! ಹಾಗೆ ಈ ಜೀವಾತ್ಮರುಗಳ ಮಾತೃಗರ್ಭವೇ ಆ ಶಿವವಾರಿಧಿ; ಅದುವೆ ಲೀಲಾಭೂಮಿಕೆ, ಅದುವೆ ಅಂತಿಮ ತಾಣ.

ನಿರ್ಭಯ, ಪ್ರಭುತ್ವಗಳಲ್ಲಿ ಸಿಂಹನಾಗು ; ಧೈರ್ಯ ಮತ್ತು ಉಪಯೋಗದಲ್ಲಿ ಒಂಟೆಯಾಗು ; ಅಚಾಂಚಲ್ಯ, ಸಹನೆ ಮತ್ತು ಮಾತೃಸಹಜ ದಾನಬುದ್ಧಿಯಲ್ಲಿ ಆಕಳಾಗು.

—ಶ್ರೀ ಅರವಿಂದರು.

ಸ್ಫುರಣ-ಕಿರಣ

ಸಂಗ್ರಹ : ಮಾತಾಜಿ

ಉಪ್ಪು ನೀರಿನ ಹತ್ತಿರ ಸಿಹಿನೀರು

ರಾಮೇಶ್ವರ ಸಂದರ್ಶನದ ಸಂದರ್ಭ. ಸುಪ್ರಭಾತದಲ್ಲಿ ಸಮುದ್ರದ ಬಳಿ ಹೋಗಿದ್ದೆವು. ಬಾಯಿಯಲ್ಲಿ ನೀರು ಹಾಕಿದರೆ ಉಪ್ಪೇಉಪ್ಪು. ಆದರೆ ಸಮುದ್ರದ ಪಕ್ಕದಲ್ಲಿಯೇ ತೀರ್ಥಕುಂಡಗಳು (ದೇವಾಲಯದ ಆವರಣದಲ್ಲಿ). ಅಲ್ಲಿಯೇ ಸಿಹಿನೀರು. ಉಪ್ಪುನೀರಲ್ಲಿ ಮಿಂದು ಒದ್ದೆಯನ್ನುಟ್ಟು ಮುಗ್ಧ ಭಕ್ತರು ದೇವಾಲಯಕ್ಕೆ ಬಂದು ತೀರ್ಥಗಳ ಸಿಹಿ ನೀರನ್ನೆರಸಿಕೊಂಡು ಸಮುದ್ರದ ಉಪ್ಪುತನವನ್ನು ತೊಳೆದುಕೊಂಡು ಹೋಗುತ್ತಿದ್ದರು. ಈ ದೈವೀ ಲೀಲೆಗೆ ತುಂಬಾ ಅಚ್ಚರಿ.

ಆಗ ಒಂದು ವಿಚಾರ ಸ್ಫುರಿಸಿತು, ಉಪ್ಪಿನ ಸಮುದ್ರದ ಬದಿಯಲ್ಲೇ ಸಿಹಿನೀರಿನ ಭಾವಿಗಳು. ಅಷ್ಟೇ ಅಲ್ಲ ಸಮುದ್ರ ಗರ್ಭದಲ್ಲಿ ಸಿಹಿನೀರಿನ ನದಿಗಳು (Submarine rivers) ಹರಿಯುತ್ತವೆ. ಮೇಲ್ಪದರದಲ್ಲಿ ಉಪ್ಪಿನ ರುಚಿಇದ್ದರೆ ಸಮುದ್ರ ಗರ್ಭದಲ್ಲಿ ಸಿಹಿ ನೀರಿನ ಸೆಲೆ. ಅದೇ ರೀತಿ ಕೆಲವರು ದುಷ್ಟರು. ದುರ್ವಿಚಾರಿಗಳು ಆದ ತಾಯಿ ತಂದೆಯರ ಹೊಟ್ಟೆಯಲ್ಲೇ ಸಾತ್ವಿಕರಾದ ಮಕ್ಕಳು ಹುಟ್ಟಬಹುದು. ಸಮುದ್ರದಡಿಯ ಸಿಹಿನೀರಿನ ನದಿಗಳಂತೆ. ನಾಲ್ಕಾರು ಭಿನ್ನಸ್ವಭಾವದ ಅಥವಾ ದುಷ್ಟಪ್ರವೃತ್ತಿಯ ಸಹೋದರರ ಮಧ್ಯದಲ್ಲೇ ಸಜ್ಜನ ಸಾತ್ವಿಕನಾದ ವ್ಯಕ್ತಿ ಸಮುದ್ರ ಪಕ್ಕದ ಸಿಹಿ ನೀರ ಭಾವಿಯಂತೆ ನಿರ್ಮಾಣವಾಗಬಹುದು.

ಬೋರ್ ವೆಲ್ ಪಂಪಿಂಗ್

ಕುಂಭಕೋಣಮ್ ದೇವಾಲಯಗಳನ್ನು ಸಂದರ್ಶಿಸುತ್ತ ಹೋಗುವಾಗ ಓರ್ವ ಹುಡುಗನು ಬೋರ್‌ವೆಲ್‌ನ ಪಂಪಿನ ಹಿಡಿ ಹಿಡಿದು ಜಗ್ಗುವುದು ಕಂಡಿತು. ಅವನು ಜಗ್ಗಿದಂತೆಲ್ಲ ನೀರು ಬರುತ್ತಿತ್ತು. ಬಿಟ್ಟರೆ ನಿಲ್ಲುತ್ತಿತ್ತು. ಆಗ ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು ಹೇಳಿದರು : "ಭೂಮಿಯ ಗರ್ಭದಲ್ಲಿ ನೀರು ಸೆಲೆಯ ರೂಪದಲ್ಲಿ ಹರಿಯುತ್ತಿದೆ. ಸರ್ಕಾರವು ಪಂಪನ್ನೂ ಹಾಕಿಕೊಟ್ಟಿದೆ. ಆದರೆ ಹಿಡಿಯನ್ನು ಜಗ್ಗಿ ಪಂಪ್ ಮಾಡದಿದ್ದರೆ ನೀರು ಬರುವುದೆ ? ಹಾಗೆ ಮನುಷ್ಯನಲ್ಲಿ ಪ್ರತಿಭೆ ಅನ್ನುವ ಸೆಲೆ ಹೃದಯಾಂತರ್ಗತವಾಗಿ ಹರಿಯುತ್ತದೆ. ಗುರುವು ಅದನ್ನು ಗುರುತಿಸಿ ಅದು ಪ್ರಕಟವಾಗಲು ಸಹಾಯಕನಾಗುತ್ತಾನೆ. ವಾಕ್ಕು, ಸಾಹಿತ್ಯ ಮುಂತಾದುವೇ ಆ ಸಾಧನಗಳು. ಆದರೆ ಶಿಷ್ಯನು ಪ್ರಯತ್ನಪೂರ್ವಕವಾಗಿ ಆ

ಪ್ರತಿಭೆಯನ್ನು ಸದುಪಯೋಗಮಾಡಿಕೊಳ್ಳದಿದ್ದರೆ ಪಂಪ್ ಮಾಡದಿದ್ದರೆ ನೀರು ಬರದಂತೆ ಅವನ ಪ್ರತಿಭೆ ಪ್ರಕಟವಾಗದು, ಲೋಕಕ್ಕೆ ಪ್ರಯೋಜನಕಾರಿಯಾಗದು. ಹಾಗೆ ವ್ಯಕ್ತಿತ್ವ ವಿಕಾಸಕ್ಕೆ ಪ್ರತಿಭೆ ಮತ್ತು ಪ್ರಯತ್ನ ಎರಡೂ ಬೇಕು.

" ಅಜ್ಞಾನಕ್ಕೆ ಹಾರ್ನ್ "

ಶಿವಾನುಭವ ಪ್ರವಾಸದಲ್ಲಿ ಬಸ್ಸಿನ ಕೆಲವು ಭಕ್ತರು ಸುತ್ತಮುತ್ತಲಿನ ಪ್ರಕೃತಿಯ ಸೊಬಗನ್ನು ನೋಡಿ ಆನಂದಿಸುತ್ತಿದ್ದರೆ, ಇನ್ನು ಕೆಲವರು ಹಾಯಾಗಿ ನಿದ್ರಿಸುತ್ತಿದ್ದರು. ಒಮ್ಮೆ ಓರ್ವ ದಾರಿಹೋಕ ಏನೋ ಚಿಂತನೆಯಲ್ಲಿ ಮೈಮರೆತು ರಸ್ತೆಯ ಮಧ್ಯಕ್ಕೆ ಬಂದು ಬಿಟ್ಟಿದ್ದ. ಬಸ್ಸಿನ ಚಾಲಕ ಜೋರಾಗಿ ಹಾರ್ನ್ ಹಾಕಿದಾಗ ಬೆಚ್ಚಿಬಿದ್ದವನಂತೆ ಎಚ್ಚರಗೊಂಡು ಪಕ್ಕಕ್ಕೆ ಸರಿದು ಎಡಕ್ಕೆ ಹೋದ. ಆದರೆ ಕೆಲವರು ಅದೇ ಮೈಮರೆತಿಯಿಂದ ಸ್ನಾಗಿದರೆ, ವೇಗವಾಗಿ ಸಾಗುವ ಬಸ್ಸಿಗೆ ಸಿಗದಿರರು. ಅದೇ ರೀತಿ ಸಾಧಕರು ತಮ್ಮ ಸಾಧನೆಯ ಪಥದಲ್ಲಿ ಸಾಗದೆ, ಇಂದ್ರಿಯಾಸಕ್ತಿಯ ಬಸ್ ಪಥಕ್ಕೆ ಬಂದಾಗ ಗುರುವು ವಿವೇಕದ ಬೋಧೆ ನೀಡಿ ಎಚ್ಚರಿಸಿ ಸಾಧನೆಯ ಮಾರ್ಗ ತೋರಿಸುತ್ತಾನೆ ಆದರೆ ಕೆಲವರು ಆ ಬೋಧೆಗೆ ಪ್ರತಿಕ್ರಿಯೆ ತೋರಿಸದೆ ತಮ್ಮದೇ ಆದ ಅಡ್ಡ ಮಾರ್ಗದಲ್ಲೇ ಹೋಗುತ್ತಿರುತ್ತಾರೆ. ಅಂಥ ಪ್ರಸಂಗದಲ್ಲಿ ಅವರು ಪತನಗೊಳ್ಳದೇ ಇರರು. ಅದೇರೀತಿ ಜೀವಾತ್ಮನು ತನ್ನ ಸುಖ ಲೋಲುಪ್ತಿಯಲ್ಲೇ ತೊಡಗಿ ಪರಮಾತ್ಮನ ಧ್ಯಾನಪಥವನ್ನು ಮರೆತಾಗ ದೇವನು ಕಷ್ಟಗಳು ಎಂಬ ಹಾರ್ನ್ ಹಾಕಿ, ಬಡಿದೆಚ್ಚರಿಸುತ್ತಾನೆ, ಹಾಗೂ ಸನ್ಮಾರ್ಗದೆಡೆಗೆ ಮಾರ್ಗದರ್ಶನ ಮಾಡುತ್ತಾನೆ. ಆದರೆ ಮತ್ತೂ ಅಂತರ್ವಾಣಿಯನ್ನು ಗಮನಿಸದೆ ತನ್ನದೇ ಮಾರ್ಗದಲ್ಲಿ ಹೋಗುವ ಜೀವಾತ್ಮನು ಉದಾತ್ತವಾದ ಜೀವನಕ್ಕೆ ಹೋಗದೆ ಪತನದ ಅವಗಡಕ್ಕೆ ಗುರಿಯಾಗುತ್ತಾನೆ.

—ಶುಭಾಮಣಿ, ಮೈಸೂರು.

ಚಂದಾದಾರರು ಪತ್ರ ವ್ಯವಹಾರದಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

ದೃಷ್ಟಾಂತ ಕಥೆ

ಪಾಪಿಯ ಧನ

ಒಂದೂರಿನಲ್ಲಿ ಓರ್ವ ದಾನಪ್ಪನೆಂಬ ಶ್ರೀಮಂತನಿದ್ದ. ಶ್ರೀಮಂತನಾಗಿದ್ದರೂ ಗುಣವಂತನಾಗಿರದ ಕಾರಣ ಕಡುಲೋಭಿಯಾಗಿದ್ದ. ಹಣಕ್ಕಾಗಿ ಅವನು ಬದುಕಿದ್ದನೇ ವಿನಾ ಹಣವು ಇರುವುದು ತನ್ನ ಸುಖಕ್ಕಾಗಿ, ತನ್ನ ಏಳಿಗೆಗಾಗಿ ಎಂಬುದನ್ನು ಅರಿತಿರಲಿಲ್ಲ. ಹೀಗಾಗಿ ಅರೆಹೊಟ್ಟೆಗೆ ಉಂಡು, ಹರುಕು ಬಟ್ಟೆಗಳನ್ನೇ ತೊಟ್ಟು ಹಣವನ್ನು ಕೂಡಿಡುತ್ತಿದ್ದ. ಗುಣವಿಲ್ಲದಿದ್ದರೆ ವ್ಯಕ್ತಿಯ ಬಳಿ ಇರುವ ಹಣವಾಗಲೀ, ವಿದ್ಯೆಯಾಗಲೀ, ಅಧಿಕಾರವಾಗಲೀ ಏನೂ ಉಪಯೋಗವಾಗದು. ಅದು ಬಚ್ಚಲ ಗುಂಡಿಯಲ್ಲಿರುವ ತಿಳಿನೀರಿನಂತೆ, ಕುಡಿಯಲಿಕ್ಕಾಗಲೀ ಪೂಜೆಗಾಗಲೀ ಉಪಯುಕ್ತವಾಗದು.

ಅದೇ ಊರಿನಲ್ಲಿ ಓರ್ವ ಬಡವನಿದ್ದ. ಅವನ ಹೆಸರು ಗುಣವಂತಪ್ಪ. ಅವನು ಬಡತನದ ಬದುಕಿನವನಾಗಿದ್ದರೂ ಊರಿಗೆಲ್ಲ ಬೇಕಾದವನಾಗಿದ್ದ. ದೀನರು, ಭಿಕ್ಷುಕರು, ನಿಸ್ಸಹಾಯಕರು ಬಂದಾಗ ಕೈಲಾದ ನೆರವು ನೀಡುತ್ತಿದ್ದ. ಗುಣವಂತಪ್ಪ ಬಡವನಾಗಿದ್ದರೂ ಎಲ್ಲರಿಂದ ಮೆಚ್ಚುಗೆ ಪಡೆಯುತ್ತಿದ್ದುದನ್ನು ನೋಡಿ ದಾನಪ್ಪನ ಹೊಟ್ಟೆಯಲ್ಲಿ ಕೆಂಡಸುರುವಿದಂತಾಗುತ್ತಿತ್ತು. ಯಾರಾದರೂ ಧನ ಸಹಾಯ ಕೇಳಲು ಬಂದು " ನೋಡಿ ಸಾಹುಕಾರರೇ ಅಂಥ ಗುಣವಂತಪ್ಪ ಅನಾಥಾಶ್ರಮಕ್ಕೆ ಹನ್ನೊಂದು ರೂಪಾಯಿ ಕೊಟ್ಟಿದ್ದಾನೆ. ನಿಮ್ಮಂಥ ಶ್ರೀಮಂತರು ಸಾವಿರಕೊಡಬೇಕು. ಅಂಥಾದ್ದು ತೀರಾ ಅವನಷ್ಟಾದರೂ ಕೊಡದಿದ್ದರೆ ಹೇಗೆ ? ನಿಮ್ಮ ಮನೆಯೇನು ಅವನ ಗುಡಿಸಿಲೇನು ? ನಿಮ್ಮ ಹೊಲಗಳ ಸಂಖ್ಯೆ ಏನು ? ಅವನ ಕೂಲಿಯ ಬದುಕೆಷ್ಟು ?" ಎಂದರೆ,

" ಹೋಗ್ರಯ್ಯಾ, ನಿಮಗೆ ಅವನ ರಹಸ್ಯ ಏನು ಗೊತ್ತು ? ನೀವು ಮನೆಯ ಗಾತ್ರ, ಹೊಲಗಳ ಸಂಖ್ಯೆ ಮೇಲೆ ಸಂಪತ್ತು ಅಳೀತಿರಿ. ನಮ್ಮ ಈ ಮನೆ ಯಾವುದೋ ಕಾಲದ್ದು. ಮಳೆ ಬರದಿದ್ದರೆ ಹೊಲ ಎಷ್ಟಿದ್ದರೇನು ? ಅವನು ಕೂಲಿ ಮಾಡೋದ್ರಿಂದ ದಿನಾ ತಪ್ಪದೇ ಹಣ ಬರುತ್ತೆ. ಅವರ ಅಪ್ಪನಿಂದ ಬಂದ ಆಸ್ತಿ ಬಹಳ ಇದೆ. ಅದನ್ನೆಲ್ಲ ಮುಚ್ಚಿಟ್ಟುಕೊಂಡು ಬಡವನಂತೆ ಸೋಗು

ಹಾಕುತ್ತಾನೆ...." ಹೀಗೆ ಹೇಳುತ್ತಲೇ ಯಾರಿಗೂ ಒಂದು ಪೈಸೆಯಷ್ಟೂ ನೆರವು ನೀಡದೆ ಸಾಗಹಾಕುತ್ತಿದ್ದ.

ಗುಣವಂತಪ್ಪನ ಬಳಿಯಲ್ಲಿ ಒಂದು ಸೀಮೆ ಹಸುವಿತ್ತು. ಅದು ದಿನಕ್ಕೆ ಇಪ್ಪತ್ತು ಲೀಟರಿನಷ್ಟು ಹಾಲುಕೊಡುತ್ತಿತ್ತು. ಅವನ ಮನೆಯ ಜೀವನೋಪಾಯದ ಮೂಲನಿಧಿಯಾಗಿತ್ತು. ಆದರೆ ಅದರ ಮೇಲೆ ದಾನಪ್ಪನ ಕಣ್ಣು ಬಿದ್ದಿತ್ತು. ಏನಾದರೂ ಮಾಡಿ ಆ ವಸ್ತುವನ್ನು ತನ್ನ ಮನೆಗೆ ಕೊಳ್ಳಬೇಕು ಎಂಬ ಆಸೆ. ಆ ವಿಷಯ ಪ್ರಸ್ತಾಪಿಸಿದಾಗ ಗುಣವಂತಪ್ಪ ಸುತರಾಂ ಒಪ್ಪಿರಲಿಲ್ಲ. ಅದಕ್ಕೆ ಕಾರಣ ಎರಡು. ಅದರಿಂದಲೇ ಜೀವನೋಪಾಯವಾಗುತ್ತಲಿದ್ದುದರಿಂದ ಅದನ್ನು ಮಾರಿದರೆ ಬದುಕು ಕಷ್ಟವಾಗುತ್ತಿತ್ತು. ಜಿಪುಣನಾದ ದಾನಪ್ಪ ಯೋಗ್ಯಬೆಲೆಯನ್ನು ಕೊಡುವ ಬಗ್ಗೆ ಸಂದೇಹವಿತ್ತು. ಮತ್ತು ಮಾತುಕೊಟ್ಟರೂ ಆ ಹಣ ಪೂರ್ತಿ ಮುಟ್ಟಿಸುವ ಬಗ್ಗೆ ಸಂಶಯವಿತ್ತು. ಹೀಗಾಗಿ ಗುಣವಂತಪ್ಪ ನಿರಾಕರಿಸಿದ. ಬಡವನಾದ ಅವನು ಶ್ರೀಮಂತನಾದ ತನ್ನ ಮಾತನ್ನು ನಿರಾಕರಿಸಿದ್ದು ದಾನಪ್ಪನನ್ನು ಸಿಟ್ಟಿಗೆಬ್ಬಿಸಿತು. ಸೇಡುತೀರಿಕೊಳ್ಳಲು ಸೂಕ್ತಸಮಯಕ್ಕಾಗಿ ಹೊಂಚುಹಾಕಿದ್ದ.

ಗುಣವಂತಪ್ಪನ ಮಗಳ ಮದುವೆ ಒದಗಿತು. ಹಸುವನ್ನು ಮಾರದೆ ಗತ್ಯಂತರವಿರಲಿಲ್ಲ. ಹಣಬೇಕಾಗಿದ್ದರಿಂದ ಹಸುವನ್ನು ಸಂತೆಗೆ ಕೊಂಡೊಯ್ಯಲು ನಿರ್ಧರಿಸಿದ. ಆದರೆ ದಾನಪ್ಪನಿಗೆ ಗೊತ್ತಾದರೆ ತನಗೇ ಕೊಡಲು ಒತ್ತಡ ತರಬಹುದೆಂದು ಊಹಿಸಿ, ನಸುಕಿನಲ್ಲಿಯೇ ಹಸುವನ್ನು ಹೊಡೆದುಕೊಂಡು ಸಂತೆಗೆ ಹೋದ. ಅಂದು ದವಸಧಾನ್ಯಗಳನ್ನು ಮಾರಲು ದಾನಪ್ಪನ ಮಗ ಶಿವಪ್ಪ ಸಂತೆಗೆ ಬಂದಿದ್ದ. ಗುಣವಂತಪ್ಪ ಹಸುವನ್ನು ಮಾರಲು ತಂದಿರುವುದನ್ನು ನೋಡಿ ತುಂಬಾ ಸಂತೋಷಪಟ್ಟ. ಆ ಹಸುವಿನ ಮೇಲೆ ಅಪ್ಪನಿಗೆ ತುಂಬಾ ಕಣ್ಣಿದೆ ಎಂದು ಅವನಿಗೆ ಗೊತ್ತಿತ್ತು ಅಂಥ ಹಸುವನ್ನು ಕೊಂಡೊಯ್ದರೆ ತುಂಬಾ ಸಂತೋಷಪಡುವನೆಂದು ಭಾವಿಸಿ, ಐದು ಸಾವಿರ ರೂಪಾಯಿ ಬೆಲೆಗೆ ಕೊಂಡುಕೊಂಡು ಸಂತೋಷದಿಂದ ಸಂಜೆ ಊರಿಗೆ ಹೋಗುವಾಗ ಒಬ್ಬುದ್ದರಾಯಿತೆಂದು ಕಟ್ಟಿಹಾಕಿಟ್ಟ ಒಂದೆಡೆ.

ಇತ್ತ ಊರಿನಲ್ಲಿ ಒಂದು ಪ್ರಸಂಗ ಜರುಗಿತು. ಊರ ಮುಖಂಡ ದಾನಪ್ಪನ ಬಳಿ ಬಂದು ಓರ್ವ ಫಿರ್ಯಾದು ಸಲ್ಲಿಸಿದ. ಕೊಬ್ಬಿದ ಹಸುವು ತನ್ನ ಬೆಳೆಯನ್ನೆಲ್ಲ ತಿಂದು ತಿಂದು ಹಾಳುಮಾಡಿರುವುದಾಗಿಯೂ, ಈ ಅನ್ಯಾಯಕ್ಕೆ ತಕ್ಕ ಪ್ರತಿಫಲ ತನಗೆ ಸಿಗಬೇಕೆಂದು ಗೋಳಾಡಿದ, ದಾನಪ್ಪ ಡಂಗುರ ಸಾರಿಸಿ ಅಪಸರದಿಂದ ಊರಿನ ಮುಖಂಡರನ್ನು ಒಂದೆಡೆ ಸಮಾವೇಶ ಮಾಡಿದ " ಗುಣವಂತಪ್ಪನ ಹಸು ಬೆಳೆಯನ್ನೆಲ್ಲ ನಾಶಮಾಡಿರುವ ಕಾರಣ ಅನ್ಯಾಯವಾಗಿರುವ ರೈತನಿಗೆ ಕನಿಷ್ಟ ಎರಡು ಸಾವಿರ ರೂಪಾಯಿಗಳ ದಂಡ ತೆರಬೇಕು " ಎಂದು ನಿರ್ಣಯ ಮಾಡಿಸಿದ. ಗುಣವಂತಪ್ಪನ ಮೇಲೆ ದ್ವೇಷವಿದ್ದ ಪಂಚಾಯತಿ ಸದಸ್ಯರು ಅನುಮೋದಿಸಿದರು. " ಈ

ಹಸುವಿನ ಮಾಲಿಕನು ಎರಡು ಸಾವಿರ ರೂಪಾಯಿಗಳ ದಂಡ ತೆರಬೇಕು " ಎಂಬ ನಿರ್ಣಯ ಆಯಿತು ಬಹುಮತದೊಡನೆ.

ದಾನಪ್ಪನಿಗೆ ಒಳಗೇ ಖುಷಿ. ಏಕೆಂದರೆ ಅಷ್ಟು ಹಣವಿಲ್ಲದ ಗುಣವಂತಪ್ಪ ಪೇಚಾಡುತ್ತ, ತನ್ನನ್ನೇ ಹಣಕೊಡಲು ಬೇಡುವನು. ಆಗ ಹಸುವನ್ನು ಒತ್ತೆ ಇಟ್ಟು ಹಣ ಒಯ್ಯಲು ಹೇಳಿದರೆ ಪೆಚ್ಚಾಗಿ ಹಸುವನ್ನು ಒತ್ತೆ ಇಡುವನು. ಎರಡೇ ಸಾವಿರ ರೂಪಾಯಿಗಳಿಗೆ ಹಸು ತನ್ನದಾಗುವುದು. ತನ್ನ ಬುದ್ಧಿವಂತಿಕೆಗೆ ತಾನೇ ಸಂತೋಷಿಸಿ, ದಂಡದ ಹಣ ತೆರುವ ತನಕ ಹಸುವನ್ನು ಒಯ್ಯಲಾಗದೆಂದು ಹಸುವನ್ನು ತನ್ನ ಮನೆಯ ಬಳಿ ಕಟ್ಟಿಸಿದ.

ಸಂತೆಯ ವಹಿವಾಟು ಮುಗಿಸಿಕೊಂಡು ದಾನಪ್ಪನ ಮಗ ಶಿವಪ್ಪ ಬರುತ್ತಿದ್ದಂತೆಯೇ ಮನೆಯಮುಂದಿದ್ದ ಹಸುವನ್ನುನೋಡಿ ಸಮಾಧಾನದ ಉಸಿರುಬಿಟ್ಟ. " ಅಪ್ಪಾ, ನನ್ನ ಜೀವ ತಲ್ಲಣಿಸಿತ್ತು ಹಸು ' ಎಲ್ಲಿ ಹೋಯ್ತೋ ' ಎಂದು. ಬೆಳಿಗ್ಗೆಯೇ ಇದನ್ನು ಖರೀದಿಸಿದೆ. ನಿಮಗೆ ಇದರ ಮೇಲೆ ತುಂಬಾ ಕಣ್ಣಿತ್ತೆಂದು ತಿಳಿದು ಐದುಸಾವಿರ ಕೊಟ್ಟು ಕೊಂಡುಕೊಂಡೆ. ನಂದಿನ್ನೂ ಸಂತೆಯಲ್ಲಿ ಕೆಲಸ ವಿದ್ದುದರಿಂದ ಒಂದೆಡೆ ಕಟ್ಟಿಹಾಕಿ ಹೋಗಿದ್ದೆ. ಬರೋದರೊಳಗೆ ಗೂಟ ಕಿತ್ತುಗೊಂಡು ಹೋಗಿತ್ತು. ಎಲ್ಲಿ ಕಳೆದುಹೋಯ್ತೋ ಎಂದು ಒಂದೇ ಉಸುರಿಗೆ ಓಡಿ ಬಂದೆ. ಪುಣ್ಯಕ್ಕೆ ನಮ್ಮ ಮನೆಗೆ ಬಂದಿದೆ ..." ಸಮಾಧಾನದ ಉಸಿರುಬಿಟ್ಟ. ದಾನಪ್ಪನಿಗೆ ಉಸಿರು ನಿಂತಂತಾಯಿತು. " ಅಯ್ಯೋ ಮಗನೆ ಎಂಥಾ ಕೆಲಸ ವಾಯ್ತೋ ಇದು ಗುಣವಂತಪ್ಪನದು ಎಂಬ ಸೇಡಿನಿಂದ ಅವನಿಗೆ ಎರಡು ಸಾವಿರ ರೂಪಾಯಿ ದಂಡಕಟ್ಟಿದೆ ; ಇದರ ಮಾಲಿಕ ನಾನೇ ಆಗಿರುವುದರಿಂದ ನಾನೇ ಕಟ್ಟಬೇಕಾಯ್ತಲ್ಲೋ " ಎದೆ ಬಡಿಕೊಂಡು ಅತ್ತ. ನಿರ್ಣಯ ಆಗಿದ್ದರಿಂದ ಹಸುವಿನ ಮಾಲಿಕ ಹೊಲದ ಮಾಲಿಕನಿಗೆ ದಂಡಕೊಡಲೇಬೇಕಾಯ್ತು ಇದನ್ನೇ ಬಸವಣ್ಣನವರು ಹೇಳುವರು :

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ
ಸತ್ಪಾತ್ರಕ್ಕೆ ಸಲ್ಲದಯ್ಯ !
ನಾಯಿಯ ಹಾಲು ನಾರಿಮರಿಗಲ್ಲದೆ
ಪಂಚಾಮೃತಕ್ಕೆ ಸಲ್ಲದಯ್ಯ !

ಎಂಬುದಾಗಿ ಇನ್ನೊಬ್ಬರಿಗೆ ವಿನಾಕಾರಣ ಅನ್ಯಾಯ ಮಾಡಹೋದರೆ ತನಗೇ ಅನ್ಯಾಯವಾಗದಿರದು ಎಂಬ ಪಾಠವನ್ನು ಕಲಿಯುತ್ತೇವೆ. ಈ ಕಥೆಯಿಂದ.

—ತ್ರಿನೇತ್ರಿ

ಮಾತು ಜ್ಯೋತಿರ್ಲಿಂಗ

ಸಂಗ್ರಹ : ಎಂ. ಗಂಗಮ್ಮ

ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ ಇದಾವಂಗಳವಡುವುದಯ್ಯಾ?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬವರಿಲ್ಲ, ಪ್ರಮಾದ ವಶಾತ್ ಬಂದರೆ
ಹುಸಿಯೆನೆಂಬವರಿಲ್ಲ.

ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆ ಇಲ್ಲ.

ಕಾಂಚನವೆಂಬ ನಾಯನಚ್ಚಿ ನಿಮ್ಮ ನಾನು ಮರೆದೆನಯ್ಯ.

—ವಿಶ್ವಗುರು ಬಸವಣ್ಣನವರು

ಹಣವು ಅನೇಕ ತಪ್ಪುಗಳನ್ನು, ಹುಳುಕುಗಳನ್ನು ಮುಚ್ಚುತ್ತದೆ.

—ಸರ್ವೆಂಟಿಸ್

ಹಣ ಕೊಡುವ ದಡ್ಡ ಮನುಷ್ಯ ದೊಡ್ಡ ಮನುಷ್ಯನೆಂದು ಹೊಗಳಿಸಿಕೊಳ್ಳಬಹುದು. ಹಣ ಕೊಡದ ಪ್ರತಿಭಾವಂತ ಯಾವುದೇ ಮಾನ್ಯತೆ ಸಿಗದೆ ಕಣ್ಮರೆಯಾಗಬಹುದು. **—ಜಗದ್ಗುರು ಮಾತೆ ಮಹಾದೇವಿ**

ಹಣದ ಮೌಲ್ಯವನ್ನು ಅರಿಯುವುದು ಅದರಿಂದ ಕೊಳ್ಳುವ ಅಮೂಲ್ಯ ವಸ್ತುಗಳಿಂದಲ್ಲ. ಅದನ್ನು ಸಂಪಾದಿಸುವ ಕಷ್ಟವನ್ನು ಅನುಭವಿಸುವುದರಿಂದ.

—ಫಿಲಿಪ್ ಹೇರಿಯಟ್

ಕೆಲವರು ಹಣವನ್ನು ಸಂಪಾದಿಸುವದು ನೆಮ್ಮದಿಯ ಜೀವನ ನಡೆಸಲಿಕ್ಕಲ್ಲ, ತಲೆನೋವು ತಂದುಕೊಳ್ಳಲಿಕ್ಕೆ. ಏಕೆಂದರೆ ಹಣವನ್ನು ಸಂಗ್ರಹಿಸುವ ದುರಾಶೆಯಲ್ಲಿ ಗಳಿಸುವುದನ್ನು ಬಿಟ್ಟು ಯಾವ ಸುಖವನ್ನೂ ಅನುಭವಿಸರು. **—ಜುವೆನಲ್**

ಹಣವೆನ್ನುವುದು ಆರನೆಯ ಇಂದ್ರಿಯ; ಅದಿಲ್ಲದಿದ್ದಲ್ಲಿ ಉಳಿದ ಐದು ಇಂದ್ರಿಯಗಳು ಏನೂ ಉಪಯೋಗವಾಗವು. **—ಸೋಮರ್ ಸೆಟ್ ಮಾಮ್**

ಹಣವು ಮಾತನಾಡುವಾಗ ಸತ್ಯವು ಮೌನವಾಗಿರುತ್ತದೆ. **–ರಶಿಯನ್ ಗಾದೆ**

ಹಣವೆಂದರೆ ಶಕ್ತಿ, ಸ್ವಾತಂತ್ರ್ಯ, ಸುಪ್ಪತ್ತಿಗೆ ಎಲ್ಲವೂ. ಅದುವೇ ಎಲ್ಲ ಕೆಟ್ಟತನದ ತವರು, ಅದುವೆ ಎಲ್ಲ ವರಗಳ ಆಲಯ. **—ಕಾರ್ಲ್ ಸ್ಯಾಂಡ್ ಬರ್ಗ**

ವಿಶ್ವವಿಭೂತಿ ಬಸವಣ್ಣನವರು-5

ಜಗದ್ಗುರು ಮಾತೆ ಮಹಾದೇವಿ

ಗಂಗಾಂಬಿಕೆಯೊಡನೆ ಸಮಾಲೋಚನೆ

ದೇವಾಲಯದಿಂದ ಹೊರ ಹೊರಟು, ಸೂರ್ಯೋದಯವಾಗುವ ಮುನ್ನವೇ ಮಿಂದು, ನದಿಯ ದಂಡೆಯ ಮೇಲೆ ಧ್ಯಾನಾಸಕ್ತನಾಗಿ ಬಸವಣ್ಣನು ಕುಳಿತಿದ್ದನು. ಬಹಿರ್ಮುಖನಾಗುತ್ತಲೇ ಓರ್ವ ತರುಣಿಯು ಸಂಕೋಚಪಡುತ್ತ ನಿಂತಿರುವುದನ್ನು ಕಂಡು ಬಸವಣ್ಣನು ಕೇಳಿದ:

" ತಾವಾರು ?". ಆಕೆ ಉತ್ತರಿಸಿದಳು : " ತಾವು ಯಾರ ಕೈ ಹಿಡಿಯಲು ನಿರಾಕರಿಸುತ್ತಿರುವಿರೋ ಅಂಥ ದುರ್ಭಾಗ್ಯಳಾದ ಗಂಗಾಂಬಿಕೆ "

" ನೀನು ಈ ವಿಷಯವನ್ನು ಪ್ರಸ್ತಾಪಿಸಿದುದು ಒಳ್ಳಿತೇ ಆಯಿತು. ನಾನು ಯಾವಾವುದೋ ಆದರ್ಶಗಳ ಕನಸನ್ನು ಹೊತ್ತವನು. ನೀವಾದರೋ ಸಹಜವಾದ ಲೌಕಿಕ ಸುಖಾಪೇಕ್ಷೆಯಿಂದ ವೈವಾಹಿಕ ಜೀವನವನ್ನೂ ಪ್ರವೇಶಿಸಲು ಬಯಸುತ್ತಿರುವವರು. ನನ್ನಂಥ ಆದರ್ಶವಾದಿಯ ಕೈಹಿಡಿದು ಯಾವುದೇ ಸುಖವನ್ನು ನೀವು ಪಡೆಯಲಾರಿರಿ. ಆದ್ದರಿಂದ ನೀವಾಗಿಯೇ ಮದುವೆಗೆ ನಿರಾಕರಿಸಿದರೆ ಉಭಯತರ ಸಮಸ್ಯೆಗಳೂ ಪರಿಹಾರವಾಗುವವು ..."

" ನಿಮ್ಮ ಆದರ್ಶಗಳ ಸಾಧನೆಗೆ ಯಾವುದೇ ರೀತಿಯ ಅಡ್ಡಿಯನ್ನುಂಟು ಮಾಡೆನೆಂದು ನಾನು ಮಾತುಕೊಡುತ್ತೇನೆ. ಕೇವಲ ಪತಿಯೆಂದು ನಾನು ತಮ್ಮನ್ನು ಭಾವಿಸದೆ, ಮಾರ್ಗದರ್ಶನಗೈವ ಗುರುವೆಂದು, ಜೀವನದ ಜ್ಯೋತಿಯೆಂದು ಭಾವಿಸುತ್ತೇನೆ. ಸುಖದುಃಖ, ಮಾನಾಪಮಾನ, ನೋವು–ನಲಿವುಗಳೆರಡರಲ್ಲೂ ಎಡಬಿಡದೆ ಅನುಸರಿಸುತ್ತೇನೆ. ನೀವು ಮಹಾಜ್ಯೋತಿಯಾಗಿಉರಿದರೆ ಅದಕ್ಕೆ ಎಣ್ಣೆ-ಬತ್ತಿಯಾಗಿ ನನ್ನ ಬದುಕನ್ನು ಸಮರ್ಪಿಸುತ್ತೇನೆ ..." ಬಸವಣ್ಣನವರಿಗೆ ಆಶ್ಚರ್ಯ ಅಭಿಮಾನ ಉಕ್ಕಿ ಬಂದವು. ನಾಡಹಸು ಸಿಕ್ಕಿತೆಂದು ಭಾವಿಸಿದವನಿಗೆ ಕಾಮಧೇನುವನ್ನು ಕಂಡಂತಾಯಿತು.

" ಸಂಗಮನಾಥನ ಇಚ್ಛೆ, ಆಗಲಿ. ನಿಮ್ಮ ಈ ತ್ಯಾಗ - ಶರಣಾಗತಿ ಭಾವನೆಗಳು ಅಳಿಯದಂತಿದ್ದು, ನನ್ನ ಕನಸನ್ನು ನನಸು ಮಾಡಲು ಸಹಾಯಕವಾಗಲಿ...." ಸಂತೃಪ್ತಿಯಿಂದ ಬಸವಣ್ಣನವರು ಗುರುಗಳ ದರ್ಶನಕ್ಕೆ ಹೊರಟರು.

ಮದುವೆಗೆ ಸಮ್ಮತಿ

ಸಂತೃಪ್ತಿಯಿಂದ ಧ್ಯಾನಿಸಿ, ನಮಸ್ಕರಿಸಿದರು ಬಸವಣ್ಣನವರು :

ಮನವೇ ಸರ್ಪ ತನುವೇ ಹೇಳಿಗೆ
ಹಾವಿನೊಡತಣ ಹುದುವಾಳಿಗೆ
ಇನ್ನಾವಾಗ ಕೊಂದಹುದೆಂದರಿಯೆ
ಇನ್ನಾವಾಗ ತಿಂದಹುದೆಂದರಿಯೆ
ನಿಚ್ಚ ನಿಚ್ಚಕ್ಕೆ ಪೂಜಿಸಬಲ್ಲೊಡೆ ಅದೇ ಗಾರುಡ ಕೂಡಲಸಂಗಮದೇವಾ !

ಗುರುದೇವಾ, ಶರೀರವೆಂಬ ಬುಟ್ಟಿಯಲ್ಲಿ ಮನವೆಂಬ ಸರ್ಪವಿದೆ ಇದರ ಆಟ ಬಹು ವಿಸ್ಮಯಪೂರ್ಣ, ಭಯಾನಕ. ಇದು ಯಾವಾಗ ಪತನವನ್ನು ಮಾಡುವುದೋ ಹೇಳಲಸಾಧ್ಯ. ಗಾರುಡಿ ವಿದ್ಯೆಯನ್ನರಿತವನು; ಹಾವಿನ ಮದ್ದುಳ್ಳವನು ಮಾತ್ರವೇ ಅದನ್ನು ಆಡಿಸಲು ಹೋಗುವಂತೆ, ನಾನು ನಿತ್ಯಾರ್ಚನೆ ಎಂಬ ಮದ್ದನ್ನು ಇರಿಸಿಕೊಂಡೇ ಸಂಸಾರ ಸರ್ಪದೊಡನೆ ಆಡಲು ಹೋಗುವೆ. ತಮ್ಮ ಅನುಗ್ರಹ ಸದಾ ಇರಲಿ. ಎಂದೆಂದೂ ನನ್ನ ಮನಸ್ಸು ಸ್ವಾರ್ಥ-ಸಂಕುಚಿತತೆಗಳಿಂದ ಕಲಂಕಿತವಾಗದಿರಲಿ. ಎನ್ನ ಮನದ ಮೀಸಲು ಕೆಡದಂತಿರಿಸಿ ಗುರುದೇವಾ "

ಬಲದೇವರಸರಿಗೆ ಒಪ್ಪಿಗೆಯನ್ನು ಗುರುಗಳು ತಿಳಿಸಿದಾಗ ಅವರೂ ಸಂತೋಷ ಭರಿತರಾದರು. ಆದರೆ ಬಸವಣ್ಣನವರು ಕೆಲವು ಕರಾರುಗಳನ್ನು ಹಾಕಿದರು. "ನಾನು ಅನೇಕ ಆದರ್ಶಗಳ ಕನಸನ್ನು ನನಸು ಮಾಡಲು ಹೊರಟಾಗ ಯಾವುದೇ ಅಡ್ಡಿ ಆತಂಕವನ್ನು ರಾಜಕೀಯ ಒತ್ತಡವನ್ನು ತರಲಾಗದು. ಎರಡನೆಯದಾಗಿ ತಾನು ರೂಪಿಸಲಿರುವ ಧರ್ಮದ ಪ್ರಕಾರ ಸ್ತ್ರೀ-ಪುರುಷರು ದೇವರ ದೃಷ್ಟಿಯಲ್ಲಿ, ಧಾರ್ಮಿಕ ರಂಗದಲ್ಲಿ ಸಮಾನರಾದ ಕಾರಣ ಗಂಗಾಂಬಿಕೆಗೆ ದೀಕ್ಷಾ ಸಂಸ್ಕಾರ ಕೊಡಲು ಒಪ್ಪಬೇಕು. " ಎರಡನೇ ಕರಾರಿನಿಂದ ಬಲದೇವರಸರು ಹೌಹಾರಿದರು.

" ಎಲ್ಲಾದರೂ ಉಂಟೆ ? ನಮ್ಮ ಸಂಪ್ರದಾಯದ ಪ್ರಕಾರ ಸ್ತ್ರೀಯು ಶೂದ್ರಳು, ಸಂಸ್ಕಾರ ಬಾಹಿರಳು ..."

"ಹಾಗಿದ್ದರೆ ಸಂಸ್ಕಾರ ರಹಿತಳಾದ ಶೂದ್ರ ತಾಯಿಯಲ್ಲಿ ಹುಟ್ಟುವ ಮಗ ಶೂದ್ರತ್ವ ತೊರೆದು ಬ್ರಾಹ್ಮಣ ಹೇಗಾದಾನು. ಜನ್ಮದಿಂದ ಎಲ್ಲರೂ ಶೂದ್ರರು. ಸಂಸ್ಕಾರದಿಂದ ಬ್ರಾಹ್ಮಣರು ಎಂದಾದರೆ ಎಲ್ಲರು ಧರ್ಮ ಸಂಸ್ಕಾರಕ್ಕೆ ಬಾಧ್ಯರಪ್ಪೆ. ಎರಡನೆದಾಗಿ ಸತಿಪತಿ ಒಂದೇ ಸಂಸ್ಕಾರ, ಗುಣ, ಶೀಲದವರಿರಬೇಕು. ಬತ್ತ-ಅಕ್ಕಿ ಎರಡನ್ನೂ ಕೂಡಿಸಿ ಅನ್ನ ಮಾಡಲು ಬರದು, ಮಾಡಿದರೂ ತಿನ್ನಲು ಬರದು. ಹಾಗೆಯೇ ಸಂಸ್ಕಾರ ಸಹಿತನಾದ ಪತಿ, ಸಂಸ್ಕಾರ ರಹಿತ ಪತ್ನಿಯರ ಕೂಟ, ಒಡನಾಟಗಳು ಅಕ್ಕಿ-ಬತ್ತ ಸೇರಿಸಿ ಅಡಿಗೆ ಮಾಡಿದಂತೆ. ಮೂರನೆಯದಾಗಿ ಪುರುಷನಿಗಿರುವಂತೆ ಹೊಟ್ಟೆಯ ಹಸಿವಿದೆ ಸ್ತ್ರೀಗೆ. ಅದಕ್ಕಾಗಿ ಉಣ್ಣುತ್ತಾಳೆ.

ದೇಹದ ಹಸಿವೆಯಾದ ಕಾಮವಿದೆ, ಲಗ್ನ ಮಾಡಿಕೊಳ್ಳುತ್ತಾಳೆ, ಹಾಗೆ ಆತ್ಮವಿದೆ ಆಕೆಯಲ್ಲೂ ; ಆತ್ಮದ ಹಸಿವೆಯೂ ಇದೆ. ಅದಕ್ಕಾಗಿ ಧರ್ಮಸಾಧನೆ ಒದಗಿಸಬೇಕು...." ಬಲದೇವರಸರು ಒಪ್ಪಿ, ಲಗ್ನದ ದಿನವನ್ನು ನಿಶ್ಚಿತಗೊಳಿಸಿ ಪರಿವಾರ ಸಮೇತರಾಗಿ ಕಲ್ಯಾಣಕ್ಕೆ ತೆರಳಿದರು.

ಸಂಗನ ಕರುಣೆಯ ಕಂದ ಗುರು ಬಸವ ಲಿಂಗಾ

ಸಂಗಮನಾಥನು ಕನಸಿನಲ್ಲಿ ಆಜ್ಞಾಪಿಸಿದ್ದಂತೆ ಬಸವಣ್ಣನು ಇರುಳಿನ ಕಡೆಯ ಜಾವ ಆರಂಭವಾಗುತ್ತಿದ್ದಂತೆಯೇ ಸ್ನಾನ ಮಾಡಿ, ಮಡಿಯುಟ್ಟು ದೇವಾಲಯವನ್ನು ಪ್ರವೇಶಿಸಿ ಕುಳಿತುಕೊಳ್ಳುತ್ತಿದ್ದಾನೆ. ಬುದ್ಧ ದೇವನು ಗಯೆಯಲ್ಲಿ ಆಲದ ಗಿಡದ ಕೆಳಗೆ ಕುಳಿತಂತೆ, ಅಂತರ್ಮುಖಿಯಾಗಿ ಕುಳಿತಿದ್ದಾನೆ.

ಅರಿವಿಂದರಿದು ಏನುವ ತಟ್ಟದೆ ಮುಟ್ಟದೆ ಇದ್ದೆನಯ್ಯಾ
ಅಂತರಂಗ ಸನ್ನಿಹಿತ ಬಹಿರಂಗ ನಿಶ್ಚಿಂತನಾಗಿ ಇದ್ದೆನಯ್ಯಾ
ಸ್ವಾತಿಯ ಬಿಂದುವ ಬಯಸುವ ಚಿಪ್ಪಿನಂತೆ
ಗುರುಕಾರುಣ್ಯವ ಬಯಸುತ್ತಿದ್ದೆ ಕೂಡಲ ಸಂಗಮದೇವಾ !

ಅರಿವಿನ ಪ್ರಭೆಯಾಗಿ, ಇಂದ್ರಿಯಗಳನ್ನು ಏನನ್ನೂ ತಟ್ಟಲಿಕ್ಕೆ, ಮುಟ್ಟಲಿಕ್ಕೆ ಬಿಡದೆ ಅಂತರ್ಮುಖಿಯಾಗಿ, ಅಂತರಂಗದಲ್ಲಿ ಮಂತ್ರಧ್ಯಾನ ಮಾಡುತ್ತ, ಬಹಿರಂಗದಲ್ಲಿ ಅಚಲವಾದ ಯೋಗಮುದ್ರೆಯಲ್ಲಿ ಕುಳಿತಿದ್ದಾನೆ. ಸಮುದ್ರದಲ್ಲಿ ತೇಲುತ್ತ ಸ್ವಾತಿ ಮಳೆಯ ಹನಿಗಾಗಿ ಹಾತೊರೆಯುವ ಚಿಪ್ಪಿನಂತೆ ಪರಮಾತ್ಮನೆಂಬ ಮಹಾಗುರು. ಲೋಕಗುರುವಿನ ಅನುಗ್ರಹಕ್ಕಾಗಿ ಕಾತುರನಾಗಿದ್ದಾನೆ. ಅವರ ಮನಸ್ಸು ಮೇಲಮೇಲಕ್ಕೆ ಏರುತ್ತ ಭೂಮವಾಗುತ್ತಿದೆ. ದೈವೀಶಕ್ತಿಯನ್ನು ಕೆಳಗಿಳಿಸಿಕೊಳ್ಳುವ ಸಾಹಸವನ್ನು ಮಾಡುತ್ತಲಿದೆ.

ಆಗ ಇದ್ದಕ್ಕಿದ್ದಂತೆಯೇ ಬೆಳಕು ಕಾಣಿಸಿಕೊಳ್ಳುತ್ತದೆ. ಗೋಲವಾಗಿ ಕಾಣಿಸಿಕೊಂಡ ಬೆಳಗು, ಆಕಾರವನ್ನು ತಳೆಯುತ್ತ ಧ್ಯಾನಾರೂಢನಾದ ಬಸವಣ್ಣನವರ ನೆತ್ತಿಯ ಮೇಲೆ ತನ್ನ ಹಸ್ತದ್ವಯಗಳನ್ನಿಟ್ಟಾಗ, ಅಖಂಡವಾದೊಂದು ಶಕ್ತಿ ದೇಹದಲ್ಲಿ ಅವತರಣವಾಗುತ್ತಿದೆ. ಆ ಬೆಳಗು ಸರ್ವಾಂಗದಲ್ಲೂ ಪ್ರವೇಶಿಸಿ ಪುಳಕಿತರನ್ನಾಗಿ ಮಾಡುತ್ತಿದೆ

ಇಂಥ ಪ್ರಸಂಗದಲ್ಲೊಂದು ಮಹತ್ವದ ಘಟನೆ ನಡೆಯುತ್ತದೆ. "ದೇವರು ನಿರಾಕಾರ ; ಅವನನ್ನು ಪೂಜಿಸುವುದು ಹೇಗೆ ? ಭಕ್ತಿಯನ್ನು ವ್ಯಕ್ತಪಡಿಸುವುದು ಹೇಗೆ ? ಮನುಷ್ಯನಿಗೆ ಇರುವ ಕರಣಗಳು ಮೂರು ; ಶರೀರ, ವಾಕ್ಕು, ಮನ. ಮನದಿಂದ ಮಂತ್ರದ ಮೂಲಕ ಧ್ಯಾನಿಸಬಹುದು ; ಮಾತಿನಿಂದ ವಚನಗಳ ಮೂಲಕ ಪ್ರಾರ್ಥಿಸಬಹುದು. ಕೈಯಿಂದ ಅರ್ಚಿಸಲು ಒಂದು ವಸ್ತು ಬೇಕು.

ಅದು ಪೌರಾಣಿಕ ದೇವತೆಯಾಗಲೀ, ಗಿಡವಾಗಲೀ, ಪ್ರಾಣಿಯಾಗಲೀ, ಮಹಾತ್ಮರ ಆಕಾರವಾಗಲೀ, ಇದ್ದರೆ ದೇವರ ನಿರಾಕಾರ, ನಿರ್ಗುಣತ್ವಕ್ಕೆ ಭಂಗ ಬರುವುದು. ನಿರಾಕಾರ, ನಿರವಯನಾದ ದೇವನನ್ನು ಸಾಕಾರಗೊಳಿಸಿ, ಅರ್ಚನೆಗೆ ಯೋಗ್ಯವನ್ನಾಗಿ ಮಾಡುವುದು ಎಂತು ?" ಈ ಪ್ರಶ್ನೆ ತಲೆಯಲ್ಲಿ ಎಷ್ಟೋ ವರ್ಷಗಳಿಂದ ಇದ್ದು, ಒಂದು ದಿನ ಗಾಢ ಚಿಂತನೆಯಲ್ಲಿ ತೊಡಗಿ ವಿಶಾಲವಾದ ನೆಲಮುಗಿಲುಗಳನ್ನು ದಿಟ್ಟಿಸುವಾಗ ಒಂದು ವಿಚಾರ ಹೊಳೆದಿತ್ತು :

ಕಾರ್ಯದ ಮುಖಾಂತರ ಕರ್ತನ ಅಸ್ತಿತ್ವ, ವ್ಯಕ್ತಿತ್ವ ಅರ್ಥವಾಗುವವು. ಕರ್ತಾರನ ಕಾರ್ಯವೇ ಈ ಜಗತ್ತು. ಇದು ಗೋಲವಾಗಿದೆ. ಗೋಲವು ಅನಾದಿ - ಅನಂತತ್ವಗಳು, ಶೂನ್ಯತ್ವ-ಪರಿಪೂರ್ಣತೆಗಳ ಕುರುಹು. ಆದ್ದರಿಂದ ಗೋಲಾಕಾರದಲ್ಲಿ ಆ ಅನಾದಿ-ಅನಂತನಾದ ದೇವನನ್ನು ಚಿತ್ರಿಸಿದರೆ ಹೇಗೆ ? ಅದನ್ನು ನೋಡುವಾಗ ಹೆಣ್ಣು-ಗಂಡೆಂಬ ಕಲ್ಪನೆ ಬರದು. ಯಾವ ಬ್ರಹ್ಮ - ವಿಷ್ಣು - ಮಹೇಶ್ವರರ ಆಕಾರವೂ ಕಲ್ಪನೆಯಾಗದು. ಅನಂತತೆಯ ಕಲ್ಪನೆ ಬರುವುದು. ದಿಟ್ಟಿಸಿ ನೋಡಿ ದೃಷ್ಟಿಯೋಗ ಅಭ್ಯಸಿಸಲು ಅದರ ಬಣ್ಣವನ್ನು ಕಪ್ಪಾಗಿ ಮಾಡಿದರಾಯ್ತು. ಅಂಗೈಯಲ್ಲಿ ಸ್ಥಿರವಾಗಿ ಕುಳಿತುಕೊಳ್ಳಲು ತಳವನ್ನು ಪೂರ್ಣಗೋಲವಾಗಿ ಮಾಡದೆ ಚಪ್ಪಟೆ ಮಾಡಿದರೆ ಸಾಕು. ಅದು ಗಾತ್ರ, ಹೃದಯದಲ್ಲಿ ಅಂಗುಷ್ಟ ಪ್ರಮಾಣದಲ್ಲಿ ನೆಲೆಸಿರುವ ಪರಮಾತ್ಮನ ಪ್ರಮಾಣದಂತೆ, ಹೆಬ್ಬೆರಳಿನ ಗಾತ್ರವಿದ್ದರಾಯಿತು. ಆ ಕಲ್ಪನೆ ಎಷ್ಟು ಭವ್ಯ ?!

ಮಜ್ಜನವೆರೆದು ಧೂಪದೀಪ ನೈವೇದ್ಯ ಮುಂತಾದ ಅಷ್ಟವಿಧಾರ್ಚನೆ ಮಾಡಲು ಸಹಾಯಕವಾಗುತ್ತದೆ. ನೆಟ್ಟ ದೃಷ್ಟಿಯಿಟ್ಟು ತ್ರಾಟಕ ಯೋಗಾಭ್ಯಾಸ ಮಾಡಲು ಸಾಧನವಾಗುತ್ತದೆ ಮಾತ್ರವಲ್ಲ ಯಾರು ಯಾರು, ಪುರುಷನೇ ಇರಲಿ - ಸ್ತ್ರೀಯೇ ಇರಲಿ, ಬ್ರಾಹ್ಮಣನೇ ಇರಲಿ, ಭಂಗಿಯೇ ಇರಲಿ, ಪೂಜಿಸಲು ಬಯಸುತ್ತಾರೋ ಅವರಿಗೆಲ್ಲ ಕೊಡಬಹುದು. ಜಾತಿವರ್ಣವರ್ಗ ಭೇದಗಳನ್ನು ಇದನ್ನು ಧರಿಸಿದವರು ಮಾಡಬಾರದು ಎಂದರೆ ಒಂದು ಲಾಂಛನದಡಿಯಲ್ಲಿ ಭೇದಗಳನ್ನು ಮರೆತು ಒಂದಾಗಲು ಬರುತ್ತದೆ. ದೇವರನ್ನು ಪೂಜಿಸಲು ತೀರ್ಥಕ್ಷೇತ್ರಗಳಿಗೆ ಅಲೆಯುವುದು, ಹಣ ವ್ಯಯಿಸುವುದು, ಪೂಜಾರಿಗಳ ಹಿಂಸೆ ಸಹಿಸಿಕೊಳ್ಳುವುದು ತಪ್ಪುತ್ತದೆ ; ಮನಬಂದಷ್ಟು ಹೊತ್ತು ಪೂಜಾರಿಯ ಹಂಗಿಲ್ಲದೆ ಪೂಜಿಸಲು ಸಾಧ್ಯವಾಗುತ್ತದೆ. ಅಂಗದ ಮೇಲೆ ಧರಿಸಿಕೊಂಡು ಎಲ್ಲೆಡೆ ಒಯ್ದು, ಬಯಸಿದಾಗ ಪೂಜಿಸಬಹುದು. ಎಂಥ ಸುಂದರ - ಬಂಧುರ, ನವ್ಯ - ದಿವ್ಯ ಕಲ್ಪನೆ ..." ಈ ಕಲ್ಪನೆಯೊಡನೆ ಉತ್ಸಾಹ ಗರಿಗೆದರಿ ಹಾರಿತ್ತು. ಆದರೆ ಈ ಹೊಸ ಆಚರಣೆ ಆರಂಭಿಸುವುದು ಹೇಗೆ ? ಪಾಶುಪತ ಶೈವರಾದ ಗುರುಗಳು ದೇವಾಲಯದ ಲಿಂಗವನ್ನು ಪೂಜಿಸುವ ಸಂಪ್ರದಾಯದವರು. ಅಂಗದ ಮೇಲೆ ಧರಿಸಿಕೊಳ್ಳುವುದನ್ನು ಒಪ್ಪಿಯಾರೆ ? ಉದ್ಧಟತನವೆಂದು ಬೇಸರಪಟ್ಟರೆ ?

ಬಸವಣ್ಣನು ತನ್ನ ಕಲ್ಪನೆಗಳಿಗೆ ರೂಪುಕೊಟ್ಟು, ಇಷ್ಟಲಿಂಗವನ್ನು ರಚಿಸಿ, ಗುಪ್ತವಾಗಿ ಬಚ್ಚಿಟ್ಟುಕೊಂಡಿದ್ದ. ಗುರುಗಳ ಮುಂದೆ ಪ್ರಸ್ತಾಪಿಸುವ ಧೈರ್ಯ ಬಂದಿರಲಿಲ್ಲ.

ಈಗ ಗುರುಕುಲವನ್ನು ಬಿಡುವ ಮತ್ತು ಸ್ವತಂತ್ರನಾಗಿ ಕಾರ್ಯಾರಂಭ ಮಾಡುವ ಕಾಲ ಒದಗಿತ್ತು. ತನ್ನ ಭವಿಷ್ಯವನ್ನು ಅಂತರಂಗದಲ್ಲಿ ನಿರ್ಧರಿಸಿಕೊಂಡು (ಯಾವ ಲೌಕಿಕ ಗುರುವಿನ ಒಪ್ಪಿಗೆಯೂ ಬೇಡ) ಆ ಮಹಾಲೋಕಗುರುವಿನ ಒಪ್ಪಿಗೆಯನ್ನು ಪಡೆಯೋಣವೆಂದು ನಿಶ್ಚಯಿಸಿ ಆ ಇಷ್ಟಲಿಂಗವನ್ನು (ಇಷ್ಟಿಗೆ ಅಂದರೆ ಪೂಜೆಗೆ ಯೋಗ್ಯವಾಗುವ, ಇಷ್ಟಾರ್ಥಗಳನ್ನು ಈಡೇರಿಸುವ, ಸಾಧಕನ ಇಷ್ಟದೈವವಾಗುವ ಕಾರಣ ಇಷ್ಟಲಿಂಗವೆಂದು ಕರೆದರು) ತನ್ನೊಡನೆ ಬಸವಣ್ಣನವರು ತೆಗೆದುಕೊಂಡು ಬಂದಿದ್ದರು

ಯಾವಾಗ ಬೆಳಕು ಒಂದು ಆಕಾರವನ್ನು ತಳೆದು ತನ್ನ ಹಸ್ತವನ್ನು ಬಸವಣ್ಣನ ಮೇಲಿಟ್ಟು ಅನುಗ್ರಹಿಸಿತೋ ಆಗ ಆ ಇಷ್ಟಲಿಂಗವನ್ನು "ಅದರ" ಕೈಯಲ್ಲಿ ಕೊಟ್ಟರು ಅದು ಇಷ್ಟಲಿಂಗವನ್ನು ಬಸವಣ್ಣನ ಕೈಯಲ್ಲಿಟ್ಟು ತಾನೇ ಸದ್ಗುರುವಾಗಿ ಅನುಗ್ರಹಿಸಿ ಬಯಲಿನಲ್ಲಿ ಕರಗಿಹೋಯಿತು. ಹೀಗೆ ಪರಮಾತ್ಮನು ಕಾರುಣ್ಯಮಂ (Grace) ನೀಡಿದಾಗ, ಬಸವಣ್ಣನು ಸಾಮರ್ಥ್ಯಮಂ (Power) ಹೊಂದಿ[1] ಮೆರೆದನು.

ಹೀಗೆ ಸಂಗಂ ಪತಿಯಾಗಿ, ಬಸವಂ ಸತಿಯಾಗಿ, ಪಂಚಾಕ್ಷರಿಯೇ ಗತಿಯಾಗಿ, ಸದ್ಭಕ್ತಿಯೇ ಮತಿಯಾಗಿ[2] ಬಸವಣ್ಣನವರು ಶಿವ ವಧುವಾದರು, ಮಹಾಗುರುವಾದರು. ಹೀಗ ತನ್ನ ಹೃತ್ಕಮಲದೊಳು ಬೆಳೆದ (ರೂಪುಗೊಂಡ) ಲಿಂಗಕ್ಕೆ ಕರಕಮಳವನಾಂತು[3] ಭಕ್ತಿಯಿಂದ ಪಡೆಯುತ್ತಾರೆ. ತಮ್ಮ ಅಂತರಂಗದಲ್ಲಿ ಮಿಂಚಿದ ಕಲ್ಪನೆ, ಈಗ ರೂಪುಗೊಂಡುದೇ ಅಲ್ಲದೆ ದೇವಾನುಗ್ರಹವನ್ನು, ಒಪ್ಪಿಗೆಯನ್ನೂ ಪಡೆದಾಗ ಬಸವಣ್ಣನ ಆನಂದ ಹೇಳತೀರದು. ಸಂತೋಷದ ಹೊನಲು ಕಣ್ಣುಗಳ ಮುಖಾಂತರ ಹರಿಯುತ್ತಿದೆ. ಧನ್ಯತೆಯ ಭಾವ ಪಡಿಮೂಡಿದೆ. ಮುಖದ ಮೇಲೆ ತೇಜಸ್ಸು ಲೋಲಾಡುತ್ತಿದೆ. ತನ್ನ ಆನಂದದ ಭರವನ್ನು ಹೀಗೆ ಹೇಳಿಕೊಳ್ಳುತ್ತಾರೆ :

---

1 ಹರಿಹರನ ಬಸವರಾಜ ದೇವರ ರಗಳೆ

2 ಬಸವಣ್ಣನವರಿಗೆ ಯಾರೂ ವ್ಯಕ್ತಿಗತ ಗುರುವಿಲ್ಲ ; ಇದ್ದಿದ್ದರೆ ಈ ವಚನಗಳ ಸಂದರ್ಭದಲ್ಲಿ ಉಲ್ಲೇಖಿಸದೆ ಇರುತ್ತಿರಲಿಲ್ಲ. ಲೋಕಗುರು ಪರಮಾತ್ಮನೇ ಅವರ ಗುರು.

ನಿನಗೆ ನೀನೇ ಕರ್ತನು ಬಸವಾ
ಎನಗೆ ನೀನೇ ಕರ್ತನು ಬಸವಾ
ನಾ ಮಾಡುವ ಭಕ್ತಿಗೆ ನೀನೇ ಕರ್ತನು ಬಸವಾ
ಕರುಣೆ ಕಪಿಲ ಸಿದ್ಧ ಮಲ್ಲಿನಾಥಯ್ಯ !

ಶ್ರೀಗುರು ಕರುಣಿಸಿ ಹಸ್ತಮಸ್ತಕ ಸಂಯೋಗದಿಂದ
ಪ್ರಾಣಲಿಂಗವನು ಕರತಳಾಮಳಕವಾಗಿ ಕರಸ್ಥಲಕ್ಕೆ ತಂದುಕೊಟ್ಟನಾಗಿ
ಒಳಗೆನ್ನದೆ ಹೊರಗೆನ್ನದೆ ಆ ಲಿಂಗದಲ್ಲಿ
ನಚ್ಚಿ ಮಚ್ಚಿ ಪರಿಣಾಮದೊಳೋಲಾಡಿದೆ.
ಆ ಲಿಂಗವ ಪಡೆದು ಆನಂದಿಸುವೆ ಕೂಡಲ ಸಂಗಮ ದೇವಾ !
ವೇದವೇದಾಂತಗಳಿಗೆ ಅಸಾಧ್ಯವಾದ
ಅನುಪಮ ಲಿಂಗವ ತಂದುಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ
ನಾದಬಿಂದು ಕಳೆಗಳಿಗೆ ಅಭೇದ್ಯವಾದ
ಅಚಲಿತಲಿಂಗವ ತಂದುಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ
ವಾಙ್ಮನಕ್ಕಗೋಚರವಾದ ಅಖಂಡಿತ ಲಿಂಗವ ತಂದುಕೊಟ್ಟನಯ್ಯ
ಸದ್ಗುರು ಎನ್ನ ಕರಸ್ಥಲಕ್ಕೆ
ಇನ್ನು ನಾನು ಬದುಕಿದೆನು, ನಾ ಬಯಸುವ ಬಯಕೆ
ಕೈಸಾರಿತ್ತಿಂದು ಕೂಡಲ ಸಂಗಮದೇವಾ.

ಹೀಗೆ ಸ್ವಯಂ ಸಾಧನೆಯಿಂದ ಪರಮಾತ್ಮನ ದಿವ್ಯಾನುಗ್ರಹವನ್ನು ಪಡೆದು ಪಡೆದು ಮಹಾಗುರುವಾದರು ಬಸವಣ್ಣನವರು. ಅವರ ಸಮಸ್ತ ಕಾರ್ಯಗಳ ಹಿಂದೆ ದೇವನ ಸಂಕಲ್ಪವಿತ್ತು. ಅದನ್ನು ಹರಿಹರ ಕವಿ ಹೀಗೆ ಹೇಳುವನು :

ಬೇಡೆನ್ನ ಕಂದ ನಿನ್ನೊಡನೆ ಬಪ್ಪೆಂ ಬಸವ
ನೋಡು ನಿನ್ನಾಣೆ ನಿನ್ನೊಡನೆ ಬಪ್ಪೆಂ ಬಸವ ...

---

3 ಬಸವಣ್ಣನವರೇ ಇಷ್ಟಲಿಂಗದ ಜನಕರು ಅದನ್ನು ಚಾಮರಸನು ಹೇಳುತ್ತಾನೆ :
ಕಾಯದೊಳು ಗುರುಲಿಂಗಜಂಗಮ
ದಾಯತವನರಿಯಲ್ಕೆ ಸುಲಭೋ
ಪಾಯದಿಂದಿರಿಟ್ಟು **ಬಾಹ್ಯಸ್ಥಲಕ್ಕೆ ಕುರುಹಾಗಿ**
ದಾಯದೋರಿ ಸಮಸ್ತ ಭಕ್ತನಿ
ಕಾಯವನು ಪಾವನವ ಮಾಡಿದ
ರಾಯ **ಪೂರ್ವಾಚಾರ್ಯ** ಸಂಗನ ಬಸವಶರಣಾರ್ಥಿ !

ಬಯಲನೊಂದು ರೂಪಮಾಡಿ ಬಣ್ಣಕ್ಕೆ ತಂದು
ಆ ಬಣ್ಣವ ನಿಜದಲ್ಲಿ ನಿಲಿಸಿದಾತ ನಮ್ಮ ಬಸವಯ್ಯನು !

—ನೀಲಾಂಬಿಕೆ

ನಿರಾಕಾರದ ಮೂರ್ತಿಯ ಆಕಾರಕ್ಕೆ ತಂದೆಯಲ್ಲ ಬಸವಾ
ಆಕಾರದ ಮೂರ್ತಿಯ ಹೃದಯ ಕಂಜದಲ್ಲಿ ವಾಸಂಗೊಂಡು
ತೋರಿದೆಯಲ್ಲಾ ಬಸವಾ.

—ಸಿದ್ಧರಾಮ

ಕಂದ ಬೇಡಯ್ಯ ಬೇಡಯ್ಯ ನೇಹದ ನಿಧಿಯೇ
ಹಿಂದುಗೊಂಡೇ ಬಪ್ಪೆನೆನ್ನ ಸಂಕೃತದ ಸುಧೆಯೇ !
ನೆನೆಯೆ ಮುಂದಿರ್ದಪೆಂ ಕರೆದೊಡೇ ಎಂದೆಪೆಂ
ಮಾನದೊಳಗೆ ಕರದೊಳಗೆ ತನುವಿನೊಳಗಿರ್ದಪೆಂ।
ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪ್ಪೆಂ
ಬಂದಲ್ಲಿ ಬಂದಪೆಂ ನುಡಿದಲ್ಲಿ ನುಡಿದಪೆಂ....
ನಡೆಯಯ್ಯ ನಡೆ ಮಗನೆ ನಡೆ ಕಂದ ಬಸವಣ್ಣ
ಪೊಡವಿಗಧಿಪತಿಯಾಗಿ ಬಾಳೆನ್ನ ಬಸವಣ್ಣ.

ಸಂಗಮನಾಥನ ಸಂಪೂರ್ಣ ಅನುಗ್ರಹ ಬಸವಣ್ಣನವರ ಮೇಲಿತ್ತು. ಅವರ ಎಡಬಿಡದೆ ಸಂಗಾತಿಯಾಗಿ ಅವನಿದ್ದನು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಕಲ್ಯಾಣಕ್ಕೆ ಆಗಮನ

ಜಾತವೇದ ಮುನಿಗಳ ಆಶೀರ್ವಾದ ಹೊತ್ತು, ಸಹಪಾಠಿಗಳ ಹೃದಯಸ್ಪರ್ಶಿ ಬೀಳ್ಕೊಡುಗೆ ಪಡೆದು ತಾನು ವಿದ್ಯಾಭ್ಯಾಸ ಮಾಡಿದ ಗುರುಕುಲದಿಂದ ಬಸವಣ್ಣನವರು ಹೊರಡುತ್ತಾರೆ. ಸುಮಾರು ಎಂಟು ಹತ್ತು ಮಹತ್ವಪೂರ್ಣ ವರ್ಷಗಳನ್ನು ಇಲ್ಲಿ ಕಳೆದಿದ್ದಾರೆ. ಜ್ಞಾನಾರ್ಜನೆ ಮಾಡಿ ಜೀವನವನ್ನು ರೂಪಿಸಿಕೊಂಡಿದ್ದಾರೆ. ಕೋಶಾವಸ್ಥೆಯನ್ನು ಪ್ರವೇಶಿಸುವ ಮುನ್ನ ಕಂಬಳಿ ಹುಳುವಾಗಿದ್ದು, ಕೋಶಾವಸ್ಥೆ ದಾಟಿದ ನಂತರ ಆ ಕೀಡೆ ಬಣ್ಣದ ಚಿಟ್ಟೆಯಾಗಿ ಹಾರುವಂತೆ, ಗುರುಕುಲಕ್ಕೆ ಬರುವ ಮುನ್ನ ವಿಚಾರಮಂಥನದ ಬಿರುಗಾಳಿಯನ್ನು ತಲೆಗೆ ತುಂಬಿಕೊಂಡು ಬಂದಿದ್ದರೆ, ಈಗ ಸಮಾಜದ ಪುನರ್ರಚನೆ, ಸಂಘಟನೆಯ ಬಗ್ಗೆ ಸ್ಪಷ್ಟವಾದ ಕಲ್ಪನೆ ಹೊಂದಿದ್ದಾರೆ.

ಅತ್ಯಂತ ಮೆಚ್ಚುಗೆಯ ಶಿಷ್ಯ ಬಸವಣ್ಣನವರನ್ನು ಕುರಿತು ಕುಲಪತಿ ಜಾತವೇದ ಮುನಿಗಳು ನುಡಿಯುತ್ತಾರೆ : “ಬಸವಣ್ಣಾ, ನೀನು ಸಾಮಾನ್ಯನಲ್ಲ. ಸಮಾಜದ ಲೋಪ-ದೋಷಗಳನ್ನು ಕುರಿತು ಕೆಡುಕೆನಿಸಿದರೂ ಹಳತನ್ನು ಪ್ರತಿಭಟಿಸುವ, ಹೊಸತನ್ನು ಕೊಡುವ ಶಕ್ತಿ ನಮಗಿಲ್ಲ. ಅಂಧಾನುಕರಣೆಯ ವ್ಯಕ್ತಿ ನೀನಲ್ಲ, ಸತ್ಯದ ಆರಾಧಕ ಮತ್ತು ಪ್ರತಿಷ್ಠಾಪಕ. ಮಗುವಾಗಿದ್ದಾಗಲೇ ಅನ್ಯಾಯವನ್ನು ವಿರೋಧಿಸಿದ ಧೀಮಂತ ನೀನು. ಸಂಗಮನಾಥನ ಅಖಂಡಾನುಗ್ರಹ ನಿನ್ನ ಮೇಲಿದೆ. ಮಗು. ನಿನ್ನಿಂದ ಕ್ರಾಂತಿಯನ್ನು ನಾನೂ ಖಂಡಿತಾ ನಿರೀಕ್ಷಿಸುವೆ. ಯಶಸ್ಸು ಸಾಧಿಸು ಹೋಗು. ಮನುಕುಲದ ಮಹಾವೃಕ್ಷವು ತಳೆದ ಅಪೂರ್ವ ಕುಸುಮ ನೀನು.” ಅತ್ಯಂತ ವಾತ್ಸಲ್ಯಪೂರ್ವಕವಾಗಿ ತಲೆ ನೇವರಿಸಿ ಬೀಳ್ಕೊಟ್ಟರು.

ಕಲ್ಯಾಣಕ್ಕೆ ಆಗಮನ ಮತ್ತು ವಿವಾಹ

ಸಹೋದರಿ ಅಕ್ಕನಾಗಲಾಂಬಿಕೆಯೊಡನೆ ಬಸವಣ್ಣನವರು ಹೊರಟು ನಿಂತರು. ಆಕೆಯ ಪತಿ ಶಿವಸ್ವಾಮಿಯು ತನ್ನ ಮನೆತನದ ಕಾರ್ಯನಿರ್ವಹಣೆಗಾಗಿ ಕಪ್ಪಡಿ ಸಂಗಮದ ಸನಿಹದಲ್ಲಿದ್ದ ತನ್ನೂರು ಬ್ರಹ್ಮಪುರಿಯಲ್ಲೇ ಉಳಿದನು. ಬಲದೇವರಸರ ಭಾವೀ ಅಳಿಯ ಬಸವರಸರನ್ನು ಕಂಡು ಬೆರಗಾಗದವರೇ ಇಲ್ಲ. ವಿಲಕ್ಷಣ ತೇಜಸ್ಸು, ಸಾತ್ವಿಕತೆ, ಅರಿವಿನ ಮುಖಮುದ್ರೆಯಿಂದ ಶೋಭಿಸುವ ಬಸವಣ್ಣನವರನ್ನು ಕಂಡು ಬಲದೇವರಸರ ಅದೃಷ್ಟವನ್ನು ಹೊಗಳಿದರು. ಪ್ರಧಾನಿಗಳಾದ ಬಲದೇವರಸರು, ಅವರ ಸಚಿವ ಸಂಪುಟದ ಸಹೋದ್ಯೋಗಿಗಳು, ನಗರ ಪ್ರಮುಖರು ಮೆರವಣಿಗೆಯ ಮುಖಾಂತರ ಸ್ವಾಗತಿಸಿದರು. ಅಂಧಕಾರಮಯ ಪ್ರದೇಶವನ್ನು ಎಳೆಯ ಸೂರ್ಯನು ಹೊಕ್ಕಂತೆ, ಕಲ್ಯಾಣ ನಗರವನ್ನು ಮಹಾಗುರು ಬಸವಣ್ಣನವರು ಪ್ರವೇಶಿಸಿದರು. (ಸಶೇಷ)

ಚಿಂತನಾ

ಪ್ರವಚನ ಕೇಳುವ ಶ್ರೋತೃಗಳಲ್ಲಿ ಮೂರು ಪ್ರಕಾರ. 1. ಬುದ್ಧಿಜೀವಿಗಳು 2. ಭಾವಜೀವಿಗಳು 3. ಮಬ್ಬುಜೀವಿಗಳು. ಎಷ್ಟೇ ಉತ್ತಮ ಪ್ರವಚನಕಾರನು, ಎಷ್ಟೇ ಆಕರ್ಷಣೀಯವಾಗಿ ಪ್ರವಚನ ಹೇಳಿದರೂ ಕೇಳುವಾಗ ಕೆಲವರು ನಿದ್ದೆ ಮಾಡುವುದನ್ನು ಬಿಡರು. ಹೀಗೇಕೆ ? ನೋಡಿ, ರಾತ್ರಿಯ ವೇಳೆ ಪಹರೆ ಮಾಡಲು ಪ್ರಸಾದ ಎಂಬುವ ಕಾವಲುಗಾರನಿದ್ದಾನೆ. ಅವನ ಸಹಾಯಕ್ಕೆ ಸೂಕ್ಷ್ಮ ಗ್ರಹಣ ಶಕ್ತಿ ಇರುವ ಆಜಾದ್, ಭಗತ್‌ಸಿಂಗ್ (ನಾವು ಇಟ್ಟಿರುವ ಹೆಸರುಗಳು) ಎಂಬ ನಾಯಿಗಳಿವೆ. ಕಾವಲುಗಾರ ಮತ್ತು ನಾಯಿಗಳು ಉಭಯಂತರೂ ಪಹರೆ ಮಾಡುತ್ತಿದ್ದರೆ ಯಾವ ಕಳ್ಳನಿಗೂ ಕಾಲಿಡಲು ಧೈರ್ಯವಾಗದು. ಪಹರೆಯುವ ಮಲಗಿ ನಾಯಿಗಳು ಎಚ್ಚರವಿದ್ದರೂ ಕಳ್ಳ ಬರನು. ನಾಯಿಗಳು ಮಲಗಿ ಕಾವಲುಗಾರ ಎಚ್ಚರವಿದ್ದರೂ ಕಳ್ಳನು ಬರನು. ಕಾವಲುಗಾರ ಮತ್ತು ನಾಯಿಗಳು ಉಭಯಂತರೂ ಮಲಗಿದರೆ ಮಾತ್ರ ಕಳ್ಳನು ಪ್ರವೇಶಿಸುವನು. ಹಾಗೆ ಬುದ್ಧಿಯು ಜಾಗ್ರತವಾಗಿದ್ದರೂ ನಿದ್ರೆಯ ಕಳ್ಳನು ಬಾರನು ; ಭಾವ ಜಾಗ್ರತವಾಗಿದ್ದರೂ ನಿದ್ರೆಬಾರದು. ಬುದ್ಧಿ - ಭಾವಗಳೆರಡೂ ಜಾಗೃತವಿದ್ದರಂತೂ ಆವೇಳೆಯ ನಿದ್ರೆ ಬಾರದು. ಎರಡೂ ಕೆಲಸ ಮಾಡದಿದ್ದಾಗ ಮಾತ್ರವೇ ನಿದ್ರೆಯು ಎಂಥ ಆವೇಳೆಯಲ್ಲೂ ಆವರಿಸಿಕೊಳ್ಳುವುದು.

—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಸಮಸ್ಯೆ? ಸಮಾಧಾನ!

—ಚಂದ್ರಶೇಖರ ಬಿರಾದಾರ, ಬಿಜಾಪುರ

❊ "ಹಿಂದು ಜನಾಂಗವಾಚಕ ಶಬ್ದ ; ಇದರಲ್ಲಿ ಧರ್ಮಗಳಿವೆ. ಅವುಗಳಿಗೆ ಸ್ವತಂತ್ರವಾದ ಧರ್ಮಗ್ರಂಥಗಳೂ ಸಂವಿಧಾನವೂ ಇದೆ." ಎಂಬುದಾಗಿ ಬರೆದಿದ್ದೀರಿ. ಹಾಗಾದರೆ ವೈದಿಕ ಧರ್ಮಕ್ಕಿರುವ ಪ್ರಸ್ಥಾನತ್ರಯಗಳಂತೆ, ಲಿಂಗಾಯತಧರ್ಮಕ್ಕೂ ಉಂಟೆ ?

* ಇವೆ. ಲಿಂಗಾಯತ ಧರ್ಮದಲ್ಲಿ ವಚನಗಳೇ ಉಪನಿಷತ್ತುಗಳಂತೆ ; ಶೂನ್ಯ ಸಂಪಾದನೆ ಬ್ರಹ್ಮಸೂತ್ರಗಳಂತೆ ; ಬಸವಗೀತೆ ಭಗವದ್ಗೀತೆಯಂತೆ. ವಚನಗಳೇ ಲಿಂಗಾಯತ ಧರ್ಮದ ಆಧಾರ ಶಾಸ್ತ್ರಗಳು.

—ಪ್ರತಾಪಚಂದ್ರ, ಬೆಂಗಳೂರು

❊ ರಾಷ್ಟ್ರದಲ್ಲಿ ಹೆಚ್ಚಿನ ಭಕ್ತಿಯನ್ನಿಡಬೇಕೋ ಅಥವಾ ಧರ್ಮದಲ್ಲಿ ಹೆಚ್ಚಿನ ಭಕ್ತಿಯನ್ನಿಡಬೇಕೋ ?

* ರಾಷ್ಟ್ರದಲ್ಲಿಡುವ ಪ್ರೇಮ ತಾಯಿಯನ್ನು ಪ್ರೀತಿಸಿದಂತೆ, ಧರ್ಮದಲ್ಲಿಡುವ ಶ್ರದ್ಧೆ ತಂದೆಯಲ್ಲಿಡುವ ಪ್ರೇಮದಂತೆ. ಹೇಗೆ ತಾಯಿತಂದೆ ಉಭಯಂತರ ಆಶೀರ್ವಾದವೂ ಬೇಕೋ ಹಾಗೆ ಉಭಯ ತತ್ವಗಳ ಮೇಲೂ ನಾವು ಪ್ರೇಮವಿಡಬೇಕು. ರಾಷ್ಟ್ರಮಾತೆ ತನ್ನ ಮಣ್ಣಿನಿಂದ ನಮಗೆ ಜನ್ಮ ನೀಡಿದ್ದಾಳೆ. ಧರ್ಮವೆಂಬ ತಂದೆ ಬಾಳಲು ಕಲಿಸುತ್ತದೆ.

—ಬಸವರಾಜಪಾಟೀಲ, ಹುಬ್ಬಳ್ಳಿ

❊ ಈ ಜೀವನವು ರಹಸ್ಯಮಯ. ಇದನ್ನೊಂದು ಆಟಕ್ಕೆ ಹೋಲಿಸುತ್ತಾರೆ. ನಿಜವೆ ?

* ಜೀವನವನ್ನು ಹಲವಾರು ಉದಾಹರಣೆಗಳ ಮೂಲಕ ಚಿತ್ರಿಸುತ್ತಾರೆ. ಇದು ಆಟವೇನೋ ನಿಜ ಹುಡುಗಾಟವಲ್ಲ ; ತೀರ್ಪು - ಬಹುಮಾನಗಳನ್ನು ಒಳಗೊಂಡದ್ದು. ಜೀವಿಯೇ ಆಟಗಾರ, ಜೀವನವೇ ಆಟ, ಸಂಸಾರ-ಸಮಾಜಗಳೇ ಆಟದ ಮೈದಾನ, ಅದೃಷ್ಟವೇ ತೀರ್ಪುಗಾರ, ದೇವರೇ ಬಹುಮಾನ ನೀಡುವವನು. ನಿಷ್ಠೆಯಿಂದ ಆಡಿಗೆದ್ದವರಿಗೆ ಮುಕ್ತಿಯ ಸುವರ್ಣ ಪದಕ.

—ಎಂ. ಜಿ. ಮನೋಹರ, ಮಂಗಳೂರು

❊ ರಾಷ್ಟ್ರವೆಂದರೇನು ಭೂಮಿಯ ಒಂದು ತುಂಡು, ಕಲ್ಲು ಮಣ್ಣುಗಳ ಆಗರ. ಅದರ ಮೇಲೇಕೆ ಪ್ರೀತಿ ಇಡಬೇಕು.

* ತಾಯಿ ಎಂದರೆ ಕೇವಲ ಪಂಚಭೂತಗಳ ಆಗರ, ರಕ್ತಮಾಂಸ ಮೇದಸ್ಸುಗಳ ಮುದ್ದೆ ಎಂದು ತಿಳಿಯಲಾದೀತೆ ? ಆಕೆಯ ಜನ್ಮದಾನ, ಲಾಲನೆ ಪಾಲನೆ, ವಾತ್ಸಲ್ಯಗಳು ಬೆಲೆಕಟ್ಟಲಾರದವು. ಹಾಗೆಯೇ ನಮಗೆ ಆಹಾರ - ಗಾಳಿಗಳನ್ನು ನೀರು - ಶಕ್ತಿಯನ್ನು ದಯಪಾಲಿಸಿರುವ ರಾಷ್ಟ್ರವನ್ನು ತುಂಡು ಭೂಮಿ ಎನ್ನಲಾದೀತೆ ?

—ವೈ. ಎಸ್. ನೂಲ್ವಿ, ಅಥಣಿ

❊ ಜಗಜ್ಯೋತಿ ಬಸವೇಶ್ವರರ ವಚನಗಳು ನನಗೆ ತುಂಬಾ ಹಿಡಿಸಿವೆ. ಅವು ನನಗೆ ಜಪ-ಮಂತ್ರಗಳಾಗಿವೆ. ಬಸವಣ್ಣನವರೇ ನನ್ನ ಆರಾಧ್ಯ ಗುರುವೆಂದು ನಾನು ಭಾವಿಸಿ ಅವರನ್ನು ಭಕ್ತಿ-ಆತ್ಮೀಯತೆಯಿಂದ ನಿತ್ಯಾರ್ಚನೆ ಮಾಡುತ್ತೇನೆ. ನಾನು ಯಾವ ಲೌಕಿಕ ಗುರುಗಳಿಂದಲೂ ಉಪದೇಶವನ್ನು ಪಡೆದಿರುವುದಿಲ್ಲ ಆದರೆ ನನ್ನ ಕೆಲವು ಜನ ಮಿತ್ರರು ಲೌಕಿಕ ಗುರುಗಳಿಂದ ನೀನು ದೀಕ್ಷೆ ಪಡೆಯದಿದ್ದರೆ ನಿನಗೆ ಮೋಕ್ಷವು ದೊರೆಯಲಾರದು ಎನ್ನುವರು. ಇದು ನಿಜವೋ ? ದಯಮಾಡಿ ನನಗೆ ಸಲಹೆಗಳನ್ನು ಸೂಚಿಸಿರಿ.

* "ದೀಕ್ಷೆ ಇಲ್ಲದೆ ಮೋಕ್ಷವಿಲ್ಲ" ಎಂಬ ಶಾಸ್ತ್ರ ನುಡಿ ಸರಿಯೇ. ಆದರೆ ದೀಕ್ಷೆಯು ಫಲಕಾರಿಯಾಗಬೇಕಾದರೆ ಶಿಷ್ಯನಿಗೆ ಮನವೊಪ್ಪಿದ, ಗೌರವ-ಭಕ್ತಿಗಳಿಗೆ ಪಾತ್ರನಾದ ಮತ್ತು ಸಂಜ್ಞಾನ - ಸ್ವಾನುಭಾವಗಳಿಂದ ಶೋಭಿತನಾದ ಗುರುವಾಗ ಬೇಕು. ತತ್ತ್ವನಿಷ್ಠೆ, ಶರಣಾಗತಿ, ಶ್ರದ್ಧೆಗಳನ್ನೊಳಗೊಂಡ ಭಕ್ತನಿರಬೇಕು. ಗೌರವ - ಶ್ರದ್ಧೆಗಳಿಲ್ಲದ ಗುರುವಿನಿಂದ ಔಪಚಾರಿಕ ದೀಕ್ಷೆ ಪಡೆದರೂ ಅದು ಪ್ರಯೋಜನವಿಲ್ಲ. ಆದ್ದರಿಂದ ನಿಮ್ಮ ಗೌರವಕ್ಕೆ ಪಾತ್ರರಾಗಿರುವ, ಮನವೊಪ್ಪಿರುವ ಗುರು ದೊರೆತಿರದಿದ್ದರೆ ಅವಸರದ ಔಪಚಾರಿಕ ಕ್ರಿಯೆ ಬೇಡ. ಯೋಗ್ಯ ಗುರುವಿಗಾಗಿ ಅರಸಿರಿ. ಅತ್ಯಂತ ಉತ್ಕಟ ಏಕಾಗ್ರತೆ, ಶ್ರದ್ಧೆಗಳಿಂದ ಆರಾಧಿಸಿದ್ದೇ ಆದರೆ ಸ್ವತಃ ಬಸವಣ್ಣನವರೇ ಸಗುಣ ರೂಪದಲ್ಲಿ ಕಾಣಿಸಿಕೊಂಡು ಅನುಗ್ರಹಿಸಬಲ್ಲರು. ತನ್ನನಾಶ್ರಯಿಸಿದವರನ್ನು ಉದ್ಧರಿಸುವ ಮಾರ್ಗ ಅವರಿಗೇ ಗೊತ್ತಿದೆ. ಯೋಗ್ಯ ಗುರುವನ್ನು ಕಳಿಸಿಕೊಡುತ್ತಾರೆ. ಇಲ್ಲವೇ ತಾವೇ ಅನುಗ್ರಹಿಸುತ್ತಾರೆ. ಓರ್ವ ಸಬ್ಇನ್ಸ್‌ಪೆಕ್ಟರನಿಂದ ಏನಾದರೊಂದು ಕೆಲಸ ಆಗಬೇಕಾಗಿರುತ್ತದೆ. ಆದರೆ ಅವನು ತುಂಬಾ ಲಂಚಕೋರ. ಲಂಚಕೊಟ್ಟು ಕೆಲಸಮಾಡಿಸಿಕೊಳ್ಳಲು ಮನಸ್ಸಿಲ್ಲ. ಆಗ ಅವನಿಗಿಂತಲೂ ದೊಡ್ಡ ಅಧಿಕಾರಿ ಪ್ರಾಮಾಣಿಕನಿದ್ದರೆ ಅವನನ್ನು ವಿನಂತಿಸಿಕೊಂಡರೆ

ಕೆಲಸವಾಗುತ್ತದೆ. ಅದೇ ರೀತಿ ಮುಕ್ತಿ ಪಥ ದರ್ಶಕನಾದ ಗುರು ಯೋಗ್ಯನಾದವನು ದೊರೆಯದಿದ್ದರೆ, ಮುಕ್ತಿದಾಯಕನಾದ ಬಸವಣ್ಣನೇ ಗುರುವಾಗಿ ಮಾರ್ಗ ತೋರುವನು.

ಚಂದನಾ, ಗಂಗೋತ್ರಿ, ಮೈಸೂರು.

❊ ಆತ್ಮಜ್ಞಾನದಲ್ಲಿ ದಿವಾಳಿ ಪಥ ಹಿಡಿದು, ಜೀವನಾವಶ್ಯಕತೆಗಳನ್ನು ಹಿಗ್ಗಿಸಿಕೊಂಡು ಆರ್ಥಿಕ ಅಶಾಂತಿಗೆ ಕಾರಣರಾಗುತ್ತಿದ್ದೇವೆ. ಅದೇ ರೀತಿ ಸಾಮಾಜಿಕ ವಿಕಾಸಕ್ಕೂ ಸರಿಯಾಗಿ ಗಮನವೀಯದೆ ವಿಗತಿ ಸಾಧಿಸುತ್ತಿದ್ದೇವೆ ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

* ಮಾನವನ ದೇಹಕ್ಕೆ ಕೆಲವು ಅನ್ನಾಂಗಗಳು Vitamins ಬೇಕು. ಅದೇ ರೀತಿ ಸಮಾಜ ಪುರುಷನ ದೇಹಕ್ಕೂ ಕೆಲವು ಅನ್ನಾಂಗಗಳು ಬೇಕು. ಅವು ಯಾವುವೆಂದರೆ ಆರ್ಥಿಕ ಮೌಲ್ಯಗಳಿಗೆ ಕಾರಣವಾಗುವ ಭೌತಿಕ ಪ್ರಗತಿ, ಬೌದ್ಧಿಕ ವಿಕಾಸಕ್ಕೆ ಕಾರಣವಾಗುವ ಬೌದ್ಧಿಕಮೌಲ್ಯಗಳು, ಆಂತರಿಕ ವಿಕಾಸಕ್ಕೆ ಸಹಾಯಕವಾಗುವ ನೈತಿಕ ಮೌಲ್ಯಗಳು. ಆತ್ಮಿಕ ಪ್ರಗತಿಗೆ ಸಹಕಾರಿಯಾಗುವ ಆಧ್ಯಾತ್ಮಿಕ ಮೌಲ್ಯಗಳು ಎಲ್ಲವೂ ಅಳವಟ್ಟಾಗ ವ್ಯಕ್ತಿ–ಸಮಾಜಗಳು ಸರ್ವಾಂಗೀಣ ಪ್ರಗತಿ ಸಾಧಿಸುತ್ತವೆ. ಇಲ್ಲವಾದರೆ ಸಮಾಜ ವಿಕೃತವಾಗಿ ಬೆಳೆಯುತ್ತದೆ.

❊ ಸಾಮಾನ್ಯ ಭಿಕ್ಷುಕರಿಗೂ, ಸುಧಾರಿಸಿದ ಭಿಕ್ಷುಕರಿಗೂ (ರಾಜಕೀಯ ವ್ಯಕ್ತಿಗಳು) ವ್ಯತ್ಯಾಸವೇನು ? ಸಮಾಜದಲ್ಲಿ ಉಭಯತರಿಗೆ ಇರುವ ಸ್ಥಾನವೇನು ?

* ಇದು ವಿಚಿತ್ರ ಸಮಾಜ. ಪ್ರಾಮಾಣಿಕತೆಯಿಂದ ವಿನಂತಿ ಮಾಡಿಕೊಂಡು ಬೇಡುವವನ ಕಂಡರೆ ತಿರಸ್ಕಾರ. ಭಂಡಾರವನ್ನು ಅನೇಕ ರೀತಿಯಿಂದ ಲೂಟಿ ಮಾಡುವವರಿಗೆ ಮನ್ನಣೆ. ಪಿಕ್‌ಪಾಕೆಟ್ ಮಾಡುವವನಿಗೆ ಜೇಲು ; ಹಗಲು ದರೋಡೆ ಮಾಡುವವರಿಗೆ ಸನ್ಮಾನ-ಸತ್ಕಾರ. ಹೊಟ್ಟೆ ಹಸಿವೆಗಾಗಿ ಬೇಡುವದು ಕ್ಷಮ್ಯ. ಅಪರಾಧವಾದರೆ, ತನ್ನ ಅಧಿಕಾರ ಆರೋಹಣಕ್ಕಾಗಿ ಅನ್ಯರ ಆಸ್ತಿ ಲೂಟಿ ಮಾಡುವುದು ಅಕ್ಷಮ್ಯ ಅಪರಾಧ ಎನಿಸದೆ ?

ಬಾಬಾಸಾಹೇಬ ಎಸ್. ಮುಸಳಿ, ಉಕ್ಕಲಿ

❊ ಜವಾಹರಲಾಲ ನೆಹರೂರವರಿಂದ ಮೊರಾರ್ಜಿಯವರೆಗೆ ಸಾಧಿಸಿದ ಪ್ರಗತಿಗೂ ವಿಶ್ವಗುರು ಬಸವಣ್ಣನವರ ಕಾಲದಲ್ಲಿ ಸಾಧಿಸಿದ್ದ ಪ್ರಗತಿಗೂ ವ್ಯತ್ಯಾಸವೇನು ?

* ಜನಾಂಗವನ್ನು ನಿರ್ಮಾಣ ಮಾಡದೆ ಕಾಯಿದೆಗಳನ್ನು ನಿರ್ಮಾಣ ಮಾಡುತ್ತ ಹೋದರು ಇವರು ; ತತ್ತ್ವನಿಷ್ಠರಾದ, ತ್ಯಾಗಿಗಳಾದ ದೇವನಿಗೆ ಶರಣಾ

ಗತರಾದ ಶರಣರನ್ನು ತಯಾರು ಮಾಡಿದರು ಅವರು. ನಮ್ಮ ರಾಜಕೀಯದಲ್ಲಿ ಅಧಿಕಾರದಾಹಿಗಳು ತಯಾರಾದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಸೇವಾಕಾಂಕ್ಷಿಗಳು ತಯಾರಾದರು. ಅಧಿಕಾರಕ್ಕಾಗಿ ಅಧಿಕಾರ ಇವರು ಹಿಡಿದರೆ, ಸೇವೆಗಾಗಿ ಅಧಿಕಾರವನ್ನು ಅವರು ಹಿಡಿದಿದ್ದರು.

ಶಿವಲಿಂಗದೇವರು, ಹಿರೇಮಠ ಭಾಲ್ಕಿ

❊ ಸಾಧಕರನ್ನು ತರಬೇತಿ ಮಾಡುವ ಉದ್ದೇಶ ತಾವಿಟ್ಟುಕೊಂಡಿದ್ದೀರಲ್ಲ. ಅವರು ಕೇವಲ ಬೋಧಕರಾಗಬೇಕೋ, ಸಾಧನೆ ಮಾಡಬೇಕೋ ?

* ಸಾಧನೆಯಿಲ್ಲದ ಬೋಧೆ, ಸೇವೆಯಿಲ್ಲದ ಸಾಧನೆ ನಿಷ್ಪ್ರಯೋಜಕ. ಸರ್ವಾಂಗೀಣ ವ್ಯಕ್ತಿತ್ವ ಬೆಳೆಯಬೇಕಾದರೆ ಅವರು ಶಿವಯೋಗ ಸಾಧಕರು, ಧರ್ಮ ಬೋಧಕರು ಸಮಾಜ ಸೇವಕರು ಆಗಬೇಕೆಂಬುದು ನಮ್ಮ ಉದ್ದೇಶ.

ಎಸ್. ಸಿದ್ಧಮಲ್ಲಿಕಾರ್ಜುನಸ್ವಾಮಿ, ಬಂಡಳ್ಳಿ, ಕೊಳ್ಳೇಗಾಲ ತಾಲ್ಲೂಕು

❊ ಜ್ಞಾನವೆನ್ನುವುದು ಗಂಡೋ ಅಥವಾ ಹೆಣ್ಣೋ ?

* ಅದು ಹೆಣ್ಣೂ ಅಲ್ಲ ಗಂಡೂ ಅಲ್ಲ. ಆಶ್ರಯಿಸಿದ ವ್ಯಕ್ತಿ ಹೆಣ್ಣು ಗಂಡಿರಬಹುದು ಜಡವಾಗಿ ಬೆಳಗುವ ವಿದ್ಯುತ್ತೇ ಹೆಣ್ಣು-ಗಂಡು ಎಂಬ ಭೇದವಿಲ್ಲದೆ ಇರುವಾಗ, ಅಜಡವಾದ ಅರಿವು ಹೆಣ್ಣು ಗಂಡಿರಲು ಸಾಧ್ಯವೆ ? ಅದು ದೈವೀ ಸಂಪತ್ತು ಮಾತ್ರ.

ಮಲಶೆಟ್ಟಿ ಭಾಲಕಿ, ಕಪಲಾಪುರ

❊ ಭೂಲೋಕಾರಾಧ್ಯನಾದ ಶಂಕರನು ಭವಿಯೋ ? ಭಕ್ತನೋ ? ಜಂಗಮನೋ ?

* ಐತಿಹಾಸಿಕವಾಗಿ ಬಾಳಿ ಬೆಳಗಿದ ವ್ಯಕ್ತಿಯಾದ ಆ ಮಹಾಯೋಗಿ, ತಾಯಿ-ತಂದೆಗಳ ಗರ್ಭದಿಂದ ಹುಟ್ಟುವಾಗ ಭವಿ; ಆದರೆ ಮುಂದೆ ಪರಾತ್ಪರ ಪರಬ್ರಹ್ಮನನ್ನು ಧ್ಯಾನಿಸಿದ ಕಾರಣ ಭವಗೆಲಿದ ಭಕ್ತನು, ನಂತರ ಮಾನವ ದೇಹ ದಲ್ಲಿದ್ದೂ ಆತ್ಯಂತಿಕ ಯೋಗಸಿದ್ಧಿಯಿಂದ ಬೆಳಗಿದ ಯೋಗಿರಾಜ, ಅತಿ ಮಾನವ, ಜನನ ಮರಣ ಗಮನಗಳನ್ನು ಶೂನ್ಯ ಮಾಡಿಕೊಂಡು ನಿಂತ ಜಗಜ್ಜಂಗಮ.

ದೇವರು ಕೈಗಳಿಂದ ಕಟ್ಟಲ್ಪಟ್ಟ ದೇವಾಲಯದಲ್ಲಿ ವಾಸಿಸುವುದಿಲ್ಲವು. ಆದರೆ. ಯಾವ ಸ್ತ್ರೀ ಪುರುಷರ ಹೃದಯದಲ್ಲಿ ಪ್ರೇಮವು ನೆಲೆಸಿರುವುದೋ, ಎಲ್ಲರ ಹಿತ ಕ್ಕಾಗಿ ಸೇವೆಮಾಡಲು ಹಾತೊರೆಯುವುದೋ ಅವರ ಹೃದಯಂಗಳಲ್ಲಿ ನೆಲೆಸಿರುವನು

—ಸಂತ ಪಾಲ್ ಮತ್ತು ಔಗ್

ಊರೂರ ಸುತ್ತಿ ಮಾರಾರಿಯ ಹಿರಿಮೆ ಕಂಡೆ

—ಸೋದರಿ ಉಮಾದೇವಿ, ಎಂ.ಎ., ಎಂ.ಇಡಿ.

For oft, When on my Couch I lie
In Vacant or in pensive mood,
They flash upon that inward eye
Which is the bliss of solitude ;
And then my heart with pleasure fills,
And dances with the daffodils.

ಹೀಗೆಂದು ವರಕವಿ ವಿಲಿಯಮ್ ವರ್ಡ್ಸ್‌ವರ್ತ್ ತನ್ನ ಅಂತಃ ಚಕ್ಷುಗಳೆದು ರಿಗೆ ಬಂದು ನರ್ತಿಸಿದ ನಿಸರ್ಗ ಸೌಂದರ್ಯವನ್ನು ಬಣ್ಣಿಸುವಂತಾಗಿತ್ತು ನನ್ನ ಸ್ಥಿತಿ- ಕನ್ಯಾಕುಮಾರಿ, ಕೊಡೈಕೆನಾಲ್. ಕಡಲು ತೀರಗಳು, ಪಳನಿ ಬೆಟ್ಟ ಮತ್ತು ರಾಮೇಶ್ವರ ಇವುಗಳ ನಿಸರ್ಗ ಸೌಂದರ್ಯ ಮನಃಪಟಲದ ಮುಂದೆ ಬಂದು ಸುಳಿ ದಾಡಿದಾಗ. ಅದೇ ಸಮಯದಲ್ಲಿಯೇ ನಮ್ಮ ಗುರುಗಳು ಶಿವಾನುಭವ ಪ್ರವಾಸದ ನೆನಪಿನ ಸರುಳಿಯನ್ನು ಭಾಷೆಯ ಬಟ್ಟೆಯಲ್ಲಿ ಇನ್ನೂ ಬಿಚ್ಚಿಟ್ಟಿಲ್ಲವೇ ಎಂದು ಎಚ್ಚರಿ ಸಿದಾಗ ಅಪೂರ್ವ ದೃಶ್ಯಗಳು ಬಂದು ಅಂತಃಚಕ್ಷುಗಳೆದುರು ನಿಲ್ಲತೊಡಗಿದವು ಒಂದೊಂದಾಗಿ :

ಅಂದು, ಜೂನ್ 10ನೆಯ ತಾರೀಖು ಧರ್ಮಗುರು ಶ್ರೀ ಬಸವೇಶ್ವರರ ಭಾವಚಿತ್ರವನ್ನು ಮುಂದಿಟ್ಟುಕೊಂಡು ಅವರ ಕರುಣೆಯ ಕವಚದೊಳಗೆ ಬಸ್ಸಿನಲ್ಲಿ ಕುಳಿತು, ನಮ್ಮ ವಿಶ್ವಕಲ್ಯಾಣ ಮಿಷನ ಧರ್ಮಭಾನುವಾದ ಪೂಜ್ಯ ಗುರೂಜಿ ಯವರ ಮತ್ತು ಧೃವತಾರೆಯಾದ ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಕರ್ನಾ ಟಕದ ಹಲವೆಡೆಗಳಿಂದ ಆಗಮಿಸಿದ ಆಧ್ಯಾತ್ಮ ಬಂಧುಗಳೊಡನೆ "ಕೆಲವಂ ನೋಡಿ ಕಲಿಯಲ್ಕೆ" ಶಿವಾನುಭವ ಪ್ರವಾಸದ ಮೊದಲ ದಿನವಾದ ಅಂದು ರವಿವಾರ ಬೆಳಗಿನ 8 ಗಂಟೆಗೆ ಹೊರಟೆವು. ಬಾಲರವಿಯು ತನ್ನ ಹೊಂಬೆಳಗಿನ ಕಿರಣಗಳನ್ನು ಬೀರುತ್ತ ನಮಗೆ ಶುಭಕೋರಲು ಆಗ ತಾನೇ ಮೇಲೇರಿಬಂದಿದ್ದ. ನಮ್ಮ ಬಸವ ಭಾರತಿ ವಿದ್ಯಾಲಯದ ಮಕ್ಕಳ ಜಯ್ ಜಯ್‌ಕಾರದರವ ಇನ್ನೂ ಕಿವಿಯಲ್ಲಿ ಮೊಳಗುತಿದೆ. ಬೆಂಗಳೂರು ನಗರದ ನಾಗರಿಕತೆಯ ಪ್ರದರ್ಶನದಾಟ ಸರಿದು ರಮಣೀಯ ಪ್ರಕೃ ತಿಯು ಪ್ರತಿಸ್ಪರ್ಧಿಯಾಗಿ ಬಂದು ನಿಂತಾಗ ಅದರ ಸೌಂದರ್ಯವನ್ನು ಹೃದಯ ಬಟ್ಟಲಲ್ಲಿ ಇಂಬಿಟ್ಟುಕೊಳ್ಳಲು ನಯನೇಂದ್ರಿಯಗಳನ್ನು ತೆರೆದಿಟ್ಟು, ಮಾರ್ಗ ಮಧ್ಯದಲ್ಲಿ ಸಿಕ್ಕ ಹೊಸೂರಿನಿಂದ ಹೊಸ ಹೊಸ ಊರುಗಳನ್ನು ನೋಡುವ

ಕುತೂಹಲದಿಂದ ಕುಳಿತುಕೊಂಡೆವು. ಆಗಾಗ್ಗೆ ನನ್ನ ಬದಿಯಲ್ಲಿ ಕುಳಿತಿದ್ದ ತಿಪಟೂರಿನಲ್ಲಿರುವ ಕಲ್ಪತರು ಕಾಲೇಜಿನ ಮನಶಾಸ್ತ್ರ ಪ್ರಾಧ್ಯಾಪಕೀಯರಾದ ಶ್ರೀಮತಿ ಸುಜಯಾದೇವಿಯೊಡನೆ ಮನಶಾಸ್ತ್ರದ ಬಗ್ಗೆ ಚರ್ಚೆ ಮಾಡಿದಾಗ ಅವರ ಜ್ಞಾನ ಸಾಗರದಿಂದ ನಮಗಾದ ಲಾಭ ಅದೆಷ್ಟು.

ಸಾಮೂಹಿಕವಾಗಿ ಭಜನೆ, ಭಕ್ತಿ ಗೀತೆಗಳನ್ನು ಹಾಡುತ್ತಾ ಸಂಜೆಯ ಆರು ಗಂಟೆಗೆ ಶ್ರೀರಂಗಂ, ತಲುಪಿದೆವು. ಪಲ್ಲವ ಮತ್ತು ಚೋಳರಾಜರಿಂದ ನಿರ್ಮಿಸಲ್ಪಟ್ಟ ಈ ಜಂಭುಕೇಶ್ವರ ಮತ್ತು ಅಖಿಲಾಂಡೇಶ್ವರಿ ಅಮ್ಮನವರ ಭವ್ಯದೇವಾಲಯವು 4 ವಿಭೂತಿ ಪ್ರಾಕಾರಗಳನ್ನು ಹೊಂದಿದೆ. ಬಹು ನಾಜೂಕಿನಿಂದ ಮಾಡಿದ ಶಿಲ್ಪಕಲೆಯು ರೂವಾರಿಯ ಜಾಣ್ಮೆಯನ್ನು ಕೈಚಳಕವನ್ನು ಬಿಂಬಿಸುವುದು. ಗರ್ಭಗುಡಿಯಲ್ಲಿ ಭಕ್ತರು ಕ್ಯೂನಲ್ಲಿ ನಿಂತು 25 ಪೈಸೆ ಹಣ ತೆತ್ತು ಒಳಹೋಗಿ ನೋಡುತ್ತಿದ್ದರಿಂದ ನಾವು ಏನೋ ವಿಶೇಷತೆ ಇರಬೇಕೆಂದು ಅವರಂತೆಯೇ ಹೋಗಿ ನೋಡಿದಾಗ, ಸಾಮಾನ್ಯ ವಸ್ತುಗಳು (ಪಾದುಕೆಗಳು) ಪ್ರಚಾರದಿಂದ ಪೂಜ್ಯವಸ್ತುಗಳು ಹೇಗೆ ಆಗಬೇಕೆಂಬುದನ್ನು ಸಿದ್ಧಪಡಿಸಿ ತೋರಿಸಿದ ಬೀರ್‌ಬಲ್‌ನ ಕಥೆ ನೆನಪಾಗುವುದು. ಒಳಗಿದ್ದ ಸ್ಥಾವರಲಿಂಗವು ಸಾಮಾನ್ಯವಾಗಿ ಇರಬೇಕಾದ ಗಾತ್ರದಲ್ಲಿಯೂ ಇಲ್ಲದ ಅತೀ ಚಿಕ್ಕ ಮೂರ್ತಿಯಾಗಿತ್ತು. ಅಲ್ಲಿಂದ ಹೊರಬಿದ್ದ ನಂತರ ಸೂಕ್ಷ್ಮ ಹಾವ - ಭಾವಗಳನ್ನು ಪ್ರತಿಬಿಂಬಿಸುತ್ತಿದ್ದ ಭಾವಚಿತ್ರಗಳು ನಮ್ಮ ಮನ ಸೆಳೆದವು. ಭಾಷಾ ತೊಡಕಿನಿಂದ ಕಥೆ ಪೂರ್ಣವಾಗಿ ತಿಳಿಯದಿದ್ದರೂ ಅವುಗಳ ವೇಷ-ಭೂಷಣ ಭಾವಗಳಿಂದ ನಾವು ಸ್ವಲ್ಪಮಟ್ಟಿಗೆ ಗ್ರಹಿಸಿಕೊಂಡವು. [ಅವರ ಭಾಷಾಭಿಮಾನ ಹೆಚ್ಚಾಯಿತೇನೊ ಎನಿಸುವುದು.] ಭದ್ರಕಾಳಿಯನ್ನು ನೃತ್ಯದಲ್ಲಿ ಸೋಲಿಸಿದ ಆಕಾಶಲಿಂಗದ ಭಾವಚಿತ್ರದ ವರ್ಣ ವೈವಿಧ್ಯತೆ ನಯನ ಮನೋಹರವಾಗಿದೆ. ತನ್ನ ಕಣ್ಣುಗಳನ್ನೇ ಶಿವಲಿಂಗಕ್ಕೆ ಅರ್ಪಿಸಿ ಅರ್ಚನೆ ಮಾಡಿದ ಬೇಡರ ಕಣ್ಣಪ್ಪನ ಚಿತ್ರವೂ ಸುಂದರವಾಗಿದೆ.

ರಾತ್ರಿ ಪ್ರಸಾದ ಮುಗಿದ ಮೇಲೆ ಗುರುಬಸವಣ್ಣನವರನ್ನು ನೆನೆಯುತ್ತಾ ಎಲ್ಲರೂ ಶವಾಸನ (ನಿದ್ರಾಸನ) ಹಾಕುತ್ತಿದ್ದಂತೆಯೇ, ನಮ್ಮನ್ನೇ ಕಾಯುತ್ತ ಕಾಣದೆಡೆಯಲ್ಲಿ ಕುಳಿತಿದ್ದ ನಿದ್ರಾದೇವಿ ಬಂದು ತನ್ನ ಸೆರಗ ಬೀಸಿ ವೀರರ ನಿಗ್ರಹಿಸಿ ನೀರ ಮಾಡಿ ಶಾಪಾನುಗ್ರಹ ಸಮರ್ಥರ ಸತ್ತಂತಿರಿಸಿದಳು, ಕೆಲವೇ ಗಂಟೆಗಳ ನಂತರ ಎಚ್ಚರಿಕೆ ಕಾಯಕದ ನಮ್ಮ ಬಸ್ ಮ್ಯಾನೇಜರ್‌ನ ಧ್ವನಿ :

'ಅಂಗವಿಕಾರ ಸಾಕೇಳಿ, ಬಹುವಿಧದಂಗ ಪ್ರಕೃತಿಯ ಮರೆದೇಳಿ
ಜಂಬುಕೇಶ್ವರನಿಗೆ ಸುಪ್ರಭಾತವ ಹೇಳುವ ಏಳಿ,
ಪಚ್ಚಪುಲಿಂಗ ಬೆಟ್ಟವ ನಾವ್ ಹತ್ತುವ ಏಳಿ'

ಆಗ ತ್ವರಿತವಾಗಿ ನಾವೆದ್ದು, "ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದು", ಚಂದ್ರಮ ತನ್ನ ಶುಭ್ರಧವಳ ಬೆಳುದಿಂಗಳಿನಿಂದ ಸೌಂದರ್ಯವನ್ನು ಇಮ್ಮಡಿಯಾಗಿಸಿದ್ದ ಕಾವೇರಿಯಲ್ಲಿ ಮಿಂದೆವು. ನಂತರ "ಜಗದಗಲ, ಮುಗಿಲಗಲ, ಮಿಗೆಯಗಲ"ನಾದ ಮಹಾಲಿಂಗವ ಚುಳುಕಾಗಿಸಿ ಶ್ರೀಗುರು ಕೊಟ್ಟ ಇಷ್ಟಲಿಂಗವನ್ನು ಕರಕಮಲದ ಮೇಲಿಟ್ಟು ಬಟ್ಟ ಬಯಲಿನಲ್ಲಿ ಉಸುಕಿನ ಹಾಸಿನ ಮೇಲೆ ಕುಳಿತು ವಿಶ್ವಾತ್ಮನನ್ನು ಪೂಜಿಸುತ್ತಾ ಆನಂದತುಂದಿಲರಾಗಿದ್ದ ನಾವು ಮ್ಯಾನೇಜರ್‌ನ ಅವಸರದ ಕರೆಗೆ ಓಗೊಟ್ಟು ಎದ್ದು ಹೊರಟೆವು. ಸುಪ್ರಭಾತದಲ್ಲಿ ಶ್ರೀರಂಗನಾಥ ದೇವಾಲಯ ಸಂದರ್ಶನ. ಮುಗಿಲೆಡೆಗೆ ಶಿರವ ಚಾಚಿ ನಿಂತು ಬೃಹದಾಕಾರದ 7 ಪ್ರಕಾರಗಳನ್ನು ಹೊಂದಿದ ಶ್ರೀರಂಗಂನ ರಂಗನಾಥ ದೇವಾಲಯ ಶಿಲ್ಪಿಯ ಕಲ್ಪನೆಯ ಉಳಿಗೆ ಸಿಲುಕಿ ಕಲ್ಲರಳಿ ಕಲೆಯಾಗಿ ನಿಂತಿದೆ. ಕಟೆದ ಒಂದೊಂದು ಮೂರ್ತಿಯೂ ಒಂದೊಂದು ಪೌರಾಣಿಕವೋ, ಐತಿಹಾಸಿಕವೋ ದಂತಕಥೆಯನ್ನು ಹೇಳುತ್ತಾ ನಿಂತಿವೆ. ಫ್ರಾನ್ಸಿಸ್ ಬೇಕನ್ ತನ್ನ "ಆಫ್ ಟ್ರಾವೆಲ್" ಎಂಬ ಪ್ರಬಂಧದಲ್ಲಿ ಪ್ರವಾಸಗಳಲ್ಲಿ ಸ್ಥಳೀಯ ಮಾರ್ಗದರ್ಶಕನೊಬ್ಬನ ಅವಶ್ಯಕತೆಯನ್ನು ಒತ್ತಿ ಹೇಳುವ ಹಾಗೆ ನಮಗೆ ಸ್ಥಳೀಯ ಹಾಗೂ ನಿರಂತರ (ಪೂಜ್ಯ ಮಾತಾಜಿಯವರು) ಮಾರ್ಗದರ್ಶಕರಿಬ್ಬರಿದ್ದರು. ದೇವಾಲಯದುದ್ದಕ್ಕೂ ಸಾಗಿತ್ತು ಅವರ ವಿವರಣೆ. ರಂಗನಾಥನು ಶಯನಿಸಿದ ಗರ್ಭಗುಡಿಯ ಮೇಲೆ 500 ಸೇರು ಬಂಗಾರವನ್ನು ಹಾಕಿ ಮಾಡಿದ ಗೋಪುರ ರವಿಯ ರಶ್ಮಿಯನ್ನು ಪ್ರತಿಫಲಿಸಿ ಥಳಥಳನೆ ಹೊಳೆಯುತ್ತಿತ್ತು. 25 ಸೇರು ಚಿನ್ನದ ಲೇಪನ ಮಾಡಿಸಿಕೊಂಡು ನಿಂತ ಗರುಡಗಂಭವೂ ಸ್ಮರಣಾರ್ಹವಾದುದು. ಪೂಜೆಯ ಸಾಮಾನಿಗಲ್ಲದೆ ಪೂಜೆ ಮಾಡಿದವರಿಗೂ ಹತ್ತು ರೂಪಾಯಿ ತೆತ್ತೆವು. ಮುಂದೆ ಪಚ್ಚಪುಲಿಂಗ ಬೆಟ್ಟಕ್ಕೆ ಹೊರಟೆವು.

ಬೆಟ್ಟವನ್ನು ಹತ್ತುವಾಗ ಏನೊ ಅವ್ಯಕ್ತ ಆನಂದ. ಅಲ್ಲಲ್ಲೇ ನಿಂತು ಪ್ರಕೃತಿಯ ಸೌಂದರ್ಯವನ್ನು ಮನದಣಿಯೆ ಸವಿದು ಅದರ ಸ್ಥಿರಚಿತ್ರಣ ಮಾಡಿಕೊಂಡರು ಮಾತಾಜಿ. ಎತ್ತ ನೋಡಿದರೂ ಪಚ್ಚೆಯ ಪೈರು-ಮಧ್ಯೆ ಭೂಮಿಯನ್ನು ಬೇರ್ಪಡಿಸಿದ್ದ ತಿಳಿ ನೀಲಿ ಬಣ್ಣದ ನೀರ ಹೊತ್ತ ನದಿ ಕಾಲುವೆಗಳು, ಪ್ರಕೃತಿಯ ನೆತ್ತಿಯ ಮೇಲಿಟ್ಟ ಬೈತಲೆ ಬಟ್ಟನಂತಿದ್ದ ರಸ್ತೆಗಳು, ಸೇತುವೆ ಮತ್ತು ರೇಲ್ವೆ ಹಳಿಗಳು. ಇವುಗಳೆಲ್ಲದರ ಮೇಲೆ ಹೊಂಗಿರಣಗಳನ್ನು ಚೆಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿ 'ನಾನಿದ್ದರಲ್ಲವೇ ನೀವು ಇವುಗಳನ್ನೆಲ್ಲಾ ನೋಡಲಾಗುವುದು' ಎಂದು ನಗುತ್ತಾ ನಿಂತಿದ್ದ ನೇಸರ. ಮೇಲೇರಿ ಮಾತೃಭೂತೇಶ್ವರ ಲಿಂಗವನ್ನು ನೋಡಿದ ಮೇಲೆ "ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ ಸುಳಿದು ಬೀಸುವ ಗಾಳಿ ನಿಮ್ಮ ದಾನ"ಗಳನ್ನು ಸೌಂದರ್ಯೋಪಾಸಕರಾದ ನಮಗಾಗಿ ಇತ್ತ ಸೃಷ್ಟಿಕರ್ತನಿಗೆ ನಾವೆಲ್ಲರೂ ಕೃತಜ್ಞತೆಯನ್ನು ಪ್ರಾರ್ಥನೆಯ ಮೂಲಕ ಸಲ್ಲಿಸಿದೆವು.

ತಿರುಚಿರಾಪಳ್ಳಿಯಿಂದ ಹೊರಟು ಮಂಟಪಂ ಸೇರಿದಾಗ 6-30 ಆಗಿತ್ತು. ಅಲ್ಲಿಂದ ಉಗಿಬಂಡಿಯಲ್ಲಿ ಹೋಗಿ ರಾಮೇಶ್ವರ ದ್ವೀಪವನ್ನು ತಲುಪಿದೆವು. ರೈಲು ಹೋಗುವ ಒಂದುಮೈಲು ಉದ್ದದ, ಸಮುದ್ರಕ್ಕೆ ಹಾಕಿದ ಸೇತುವೆಯನ್ನು ವಿಶೇಷ ರೀತಿಯಿಂದ ಕಟ್ಟಿರುವರು. ಅದು ಹಡಗುಗಳು ಬಂದಾಗ ತೆರೆದು ಹೋದ ನಂತರ ಮುಚ್ಚಿ, ಟ್ರೇನ್ ಹೋಗಲು ಸೇತುವೆ ಮಾಡಿರುವರು. ಇದನ್ನು ನೋಡುವ ಅವಕಾಶ ಒದಗಲಿಲ್ಲ ಮಾತ್ರವಲ್ಲದೆ ಆಗ ರಾತ್ರಿಯೂ ಆಗಿತ್ತು. ಈ ರೀತಿ ನಿರ್ಮಿಸಿದ ಇಂಜಿನಿಯರ್‌ಗಳ ಬುದ್ಧಿವಂತಿಕೆ ಶ್ಲಾಘನೀಯ.

ದಿನಾಂಕ 12ರಂದು ಸುಪ್ರಭಾತವಲ್ಲೆದ್ದು ರಾಮೇಶ್ವರ ದೇವಾಲಯವನ್ನು ನೋಡ ಹೊರಟೆವು. ವಿಶಾಲವಾದ ಸುಂದರ ದೇವಾಲಯವದು. 1212 ಕಂಭಗಳ ಆಧಾರದ ಮೇಲೆ ನಿಂತಿದ್ದು ಸಮುದ್ರದ ವಿಕೋಪಕ್ಕೆ ಪಟ್ಟಣವೀಡಾದಾಗ ದೇವಾಲಯದ ಚಾವಣಿ ಎತ್ತರವಾಗಿರುವುದರಿಂದ ರಕ್ಷಣೆ ನೀಡುವುದಂತೆ. "1964 ರಲ್ಲಿ ವಿಪ್ಲವಕ್ಕೊಳಗಾಗಿ ಧನುಷ್ಕೋಡಿದ್ವೀಪ ಮುಳುಗಿ, ರಾಮೇಶ್ವರ ಅಪಾಯ ಸ್ಥಿತಿಯಲ್ಲಿದ್ದಾಗ ಜನ ಎಷ್ಟೋ ದಿನಗಳವರೆಗೆ ದೇವಾಲಯದ ಮೇಲೆ ಕುಳಿತಿದ್ದರು" ಎಂದು ನಮ್ಮ ಮಾರ್ಗದರ್ಶಕರು ವಿವರಿಸಿದರು. ದೇವಾಲಯದ ವೈಶಿಷ್ಟ್ಯವೆಂದರೆ ತಮಿಳಿನ ಓಂ ಆಕಾರದಲ್ಲಿ ಇರುವ 22 ತೀರ್ಥಗಳು. ಅವುಗಳ ಹೆಸರು ತುಂಬಾ ಚೆನ್ನಾಗಿವೆ. ಮಹಾಲಕ್ಷ್ಮಿ, ಸಾವಿತ್ರಿ, ಗಾಯಿತ್ರಿ, ಸರಸ್ವತಿ, ಸೇತುಮಾಧವ, ನಳ, ನೀಲ, ಗವ್ಯ, ಬ್ರಹ್ಮಹತ್ಯವಿಮೋಚನ, ಚಕ್ರ, ಶಿವ, ಸೂರ್ಯ, ಚಂದ್ರ, ಸರ್ವ, ಶಂಖು, ಗಯ, ಗಂಗಾ, ಯಮುನಾ, ಸತ್ಯ, ಗಂಧ. ಮಾಧವ, ಗವಾಕ್ಷ, ಮುಗ್ಧ ಭಕ್ತರು ಇವುಗಳಲ್ಲಿ ಸ್ನಾನವನ್ನು ಮಾಡಿ ಸಂತಸದಿಂದ ಪ್ರದಕ್ಷಿಣೆ ಮಾಡುತ್ತ ಸಾಗುತ್ತಿದ್ದರೆ, ಅದಕ್ಕಿಂತ ಹೆಚ್ಚು ಆನಂದ ನಮಗಾಗುತ್ತಿತ್ತು. ಶಿಲ್ಪಕಲೆಯನ್ನು ನೋಡುತ್ತ, ಮುಂದೆ ಸಾಗುತ್ತಿದ್ದರೆ. ಮನುಷ್ಯನ ಸೌಂದರ್ಯ ಪ್ರಜ್ಞೆಯ ಅವಿಷ್ಕಾರಕ್ಕೆ ಶಾಶ್ವತ ರೂಪಕೊಡುವ ಪ್ರಯತ್ನದ ಫಲದಂತಿದೆ ಅಲ್ಲಿಯ ಶಿಲ್ಪಕಲೆ. ಕಂಭಗಳ ಮೇಲೆ ಉದಾತ್ತಕಲೆಯ ಅಭಿವ್ಯಕ್ತಿ, ಅಖಂಡ ಕಲ್ಲಿನಿಂದ ನಿರ್ಮಿಸಿದ ಗರ್ಭಗುಡಿಯ ಕಂಭಗಳ ಅಲಂಕರಣ ಸುಂದರವಾಗಿವೆ. ಗರ್ಭಗುಡಿಯಲ್ಲಿ ಸ್ಫಟಿಕಲಿಂಗ, ರಾಮೇಶ್ವರಲಿಂಗಗಳಿವೆ. ಬದಿಯ ಪ್ರಾಂಗಣದಲ್ಲಿ ಪರ್ವತವರ್ಧಿನಿ ಅಂಬಾಳ್ ದೇವಾಲಯವಿದೆ. ಪ್ರಾಕಾರದ ಮೇಲೆ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಹಾಳಾಗದಿರಲೆಂದು ಸಿಮೆಂಟಿನ ಲೇಪನ ಮಾಡಲಾಗಿದೆ. ಗರ್ಭಗುಡಿಯ ಸುತ್ತ ಸಹಸ್ರಲಿಂಗ, ಉಪ್ಪುಲಿಂಗ, ಶಂಕರನಾರಾಯಣ (ಹರಿಹರ) ಚಾಮುಂಡೇಶ್ವರಿ, ಮುರುಘರ್, ದೊಡ್ಡನಂದಿ ಮೊದಲಾದ ವಿಗ್ರಹಗಳಿವೆ. ಕಾಲಕಾಲಕ್ಕೆ ಬದಲಾಗುವ ಜನಗಳ ಮನೋವೃತ್ತಿಯನ್ನು ಎತ್ತಿ ತೋರಿಸಲು ಉನ್ನತಮಟ್ಟದ ಕಲ್ಪನೆಯಲ್ಲಿ ಕೆತ್ತಿದ ಮೂರ್ತಿಗಳೆರಡಿವೆ ಹೊರಪ್ರಾಂಗಣಲ್ಲಿ. ಸತ್ಯಯುಗವನ್ನು ಬಿಂಬಿಸುವಂತೆ ಗಂಡನನ್ನು ಹೊತ್ತ ಹೆಂಡತಿ ; ಕಲಿಯುಗವನ್ನು ಬಿಂಬಿಸುವಂತೆ

ಹೆಂಡತಿಯನ್ನು ಹೊತ್ತ ಪತಿಯ ಮೂರ್ತಿಗಳು ಹಾಸ್ಯದ ಹೊನಲನ್ನು ಹರಿಸುವ ಮೂರ್ತಿಗಳಾಗಿವೆ.

ಬಂಗಾಳ ಕೊಲ್ಲಿಯ ದಂಡೆಯ ಮೇಲಿರುವ ಶಂಕರ ಮಠದಲ್ಲಿ ಮೇಲೆ ಶಂಕರಾಚಾರ್ಯರು ಮಂಡನಮಿಶ್ರರೊಂದಿಗೆ ಚರ್ಚೆ ಮಾಡುತ್ತಿರುವ, ಪಕ್ಕದಲ್ಲಿ ಭಾರತಿ ಮಂಡಿಸಿರುವ ದೃಶ್ಯ. ಸುತ್ತಲೂ ಗೋಡೆಗಳ ಮೇಲೆ ಕಪ್ಪುಕಲ್ಲಿನಿಂದ ಕಟೆದ ಋಷಿ-ಮುನಿಗಳ, ಕವಿಗಳ, ಪೌರಾಣಿಕವಾಗಿ ಹೆಸರಾದಂತಹ ಸತ್ಯವಾನ್ ಸಾವಿತ್ರಿ, ತಿರುವಳ್ಳುವರ್, ಅಗಸ್ತ್ಯಮುನಿ, ಅನಸೂಯ-ಲೋಪಮುದ್ರ, ನಳಾಯಿನಿ-ಸುಮತಿ, ತ್ಯಾಗರಾಜ, ಮೀರಾ-ರೂಪಗೋಸ್ವಾಮಿ, ಶಿವಾಜಿ, ಹಕ್ಕ-ಬುಕ್ಕ, ವಾಚಸ್ಪತಿ, ತುಲಸೀದಾಸ-ವಾಲ್ಮೀಕಿ ಮೊದಲಾದವರ ಮೂರ್ತಿಗಳು. ಅವರ ಜೀವನದಲ್ಲಿ ಬರುವ ಕೆಲವು ಘಟನೆಗಳನ್ನು ಬಿಂಬಿಸುವ ದೃಶ್ಯಗಳಲ್ಲಿವೆ.

ಎದುರಿಗೆ ನರ್ತಿಸುತ್ತಿರುವ ಮನದ ಪುಟಗಳಲ್ಲಿ ಎಂದೆಂದೂ ಅಳಿಯದ ಸ್ಮೃತಿಯನ್ನು ಅಚ್ಚೊತ್ತಿರುವ ಸುಂದರ ಬಂಗಾಳಕೊಲ್ಲಿ. ಹೆಚ್ಚಾಗಿ ಅಲೆಗಳಿಲ್ಲದ ಕಡಲು. ಬಿಳಿಯ ಮರಳ ದಂಡೆಯ ಮೇಲೆ ಭಕ್ತರಿಂದ ದರ್ಭೆಪೂಜೆ ಮಾಡಿಸಿ ಪಾಪ ಪರಿಹಾರ ಮಾಡಿಸುತ್ತಾ ಕುಳಿತ ಪೂಜಾರಿಗಳ ಸಾಲು ಒಂದು ಕಡೆ. ಇನ್ನೊಂದೆಡೆ ಮರಳ ಲಿಂಗವ ಪೂಜೆ ಮಾಡಿದರೆ ಪಾಪ ಪರಿಹಾರವಾಗುವುದೆಂದು ಕರೆದು ಹೇಳುತ್ತಿದ್ದ ಕಾವಿ ವೇಷಧಾರಿಗಳ ಸಾಲು. ಅವರೆದುರಿಗೆ ಮೂಢತನದ ಬಲೆಗೆ ಸಿಕ್ಕ ಜನಗಳ ಗುಂಪು. ಇವರನ್ನು ನೋಡಿಯೇ ಬಸವಣ್ಣನವರು,

"ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ,
ಬಿಲ್ಲ ನಾರಿ ದೈವ ಕಾಣಿರೋ !
ದೈವ ದೈವವೆಂದು ಕಾಲಿಡಲಿಂಬಿಲ್ಲ" ಎಂದರೇನೋ !

ರಾಮೇಶ್ವರದಿಂದ ಮುಂದೆ ತಿರುಚಂದೂರಿಗೆ ಸಾಗಿದೆವು. ಬಸ್ಸಿನಲ್ಲಿ ಪೂಜ್ಯ ಮಾತಾಜಿ ಮತ್ತು ಅಪ್ಪಾಜಿಯವರಿಂದ ಹಲವಾರು ಸ್ಫುರಣ-ಕಿರಣಗಳು ವಿಚಾರಪೂರ್ಣ ವಿಷಯಗಳು ಹೊರಹೊಮ್ಮಿ ಬರುತ್ತಲೇ ಇದ್ದವು. ಸಾಮಾನ್ಯವಾಗಿ ಪೂಜ್ಯರೊಡನೆ ಪ್ರವಾಸವೆಂದರೆ ನುಡಿಯುವ ಗ್ರಂಥಾಲಯದೊಡನೆ ಮಾತು ; ನಡೆವ ಲಿಂಗದೊಡನೆ ಜ್ಞಾನಮಂಥನ, ಹೊಸ ಹೊಸ ವಿಷಯಗಳು ಪುಂಖಾನುಪುಂಖವಾಗಿ ಬರುತ್ತಿರುತ್ತವೆ. ಕೇಳುತ್ತಾ ಭಜನೆ ಮಾಡುತ್ತಾ ಸಾಗುತ್ತಿದ್ದಂತೆ ತಿರುಚಂಧೂರು ಬಂದೇಬಿಟ್ಟಿತು ರಾತ್ರಿ 10-30ಕ್ಕೆ. ಬೆಳಿಗ್ಗೆ ಕಲಾವೈಭವದಿಂದ ಮೆರೆಯುತ್ತಿರುವ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಹೋದೆವು. ಮುರುಗನ ಸತಿಯರಾದ ವಳ್ಳಿಯಮ್ಮ-ದೇವಯಾನಿಯರ ಮೂರ್ತಿಗಳನ್ನು ಕಂಡೆವು. ಪ್ರಾಂಗಣದ ಶಿಲ್ಪಕಲೆ ರಾಮೇಶ್ವರದ ದೇವಾಲಯವನ್ನು ಹೋಲುವುದು. ಅಲ್ಲಿನ ವರ್ಣಚಿತ್ರಗಳು ಬಹಳ ಮುಂದ್ದಾಗಿವೆ. ಕುಮಾರ ಸಂಭವದ ಕಥೆ ಕಲೆಯ ರೂಪದಲ್ಲಿ ಹೊರಹೊಮ್ಮಿದೆ.

ಅಲ್ಲಿಂದ ಅದೇ ದಿನ ಭಾರತಮಾತೆಯ ಪಾದದಡಿಯಾದ ಕನ್ಯಾಕುಮಾರಿಗೆ ನಮ್ಮ ಆಗಮನ. ಭಾಷೆಯಲ್ಲಿ ವ್ಯಕ್ತಪಡಿಸಲಾರದಷ್ಟು ಆನಂದ ಆ ನಿಸರ್ಗದ ನಡುವೆ ನಿಂತಾಗ.

ನಮ್ಮ ಹಸಿದ ಜಠರಾಗ್ನಿಗೆ ಪ್ರಸಾದದ ಆಹುತಿನೀಡಿ, 1892ರಲ್ಲಿ ಪರನಾಡಿಗೆ ಸಾಗಿ ಆಧ್ಯಾತ್ಮ ಹಸಿವೆಯನ್ನು ಹಿಂಗಿಸಿದ ಸ್ವಾಮಿ ವಿವೇಕಾನಂದರ ಸ್ಮಾರಕವನ್ನು ನೋಡಲು ಹೋದೆವು. ದೋಣಿ ಭಾಗೀರಥಿಯಲ್ಲಿ ಐದೇ ನಿಮಿಷಗಳ ಪಯಣ ಸಮುದ್ರದಲ್ಲಿ. "ನಂಬಿದೆ ಗುರುವೆ ನಂಬಿದೆ ಸ್ವಾಮಿ" ಎಂಬ ಅಕ್ಕಮಹಾದೇವಿಯ ಹಾಡಿನೊಂದಿಗೆ ಸಾಗಿದೆವು. ಇಳಿಯುವಾಗ ರಬ್ಬರಿನ ಟೈರುಗಳು ಕಣ್ಣಿಗೆ ಬಿದ್ದವು. ಅಂತೆಯೇ ಅವಿಲ್ಲವಿದ್ದರೆ ದೋಣಿಗೆ ಆಪಾಯ ಎಂದೂ ಗೊತ್ತಾಯಿತು. ರಬ್ಬರ್ ಟೈರುಗಳು ಸಾಮಾನ್ಯ ವಸ್ತುಗಳು. ಆದರೆ ದೋಣಿಯನ್ನು ರಕ್ಷಿಸುತ್ತವೆ. ಅದೇ ರೀತಿ ನಮ್ಮ ಸಮಾಜದಲ್ಲಿ ಬುದ್ಧಿಜೀವಿಗಳು ಮಾತ್ರವಲ್ಲ ಮುಖ್ಯ, ಸಾಮಾನ್ಯನಂತೆ ದುಡಿಯುವ ಕೃಷಿಕ, ಕಾರ್ಮಿಕ ಎಲ್ಲರ ವೃತ್ತಿಗಳೂ ಮುಖ್ಯ ಎನಿಸಿತು.

ಬಂಡೆಯ ಮೇಲೆ ಕಾಲಿಡುತ್ತಿದ್ದಂತೆಯೇ ಅವರ್ಣನೀಯ ಆನಂದದ ಅನುಭವ. ಕಪ್ಪು ಕೆಂಪು ಬೂದು ಬಣ್ಣದ ಕಲ್ಲಿನಲ್ಲಿ ಕೆತ್ತಿದ ಮಂಟಪ. ಒಳಗೆ ಕಲೆಯ ಸಾಕಾರವೇ ಮೈವೆತ್ತಂತಿರುವ ಕಂಭಗಳು, ಕಾಲಿಟ್ಟರೆ ಕೊಳೆಯಾಗುವುದೇನೋ ಎನ್ನುವಂತಿರುವ, ಮಿರ ಮಿರನೆ ಮಿಂಚುವ ನೆಲ. 8 ಅಡಿ ಎತ್ತರದ, ಧೀರ, ಧೀಮಂತಿಕೆ. ಕರುಣೆಯ ಸಾಕಾರವಾಗಿ ನಿಂತ ಆಧ್ಯಾತ್ಮ **ಪುರುಷ** ಸಿಂಹನನ್ನೂ ಪ್ರತಿಬಿಂಬಿಸುವ ಆತುರ ನಲಕ್ಕೆ... ಎದುರಿಗೆ ತಪಸ್ವಿನಿ ಕನ್ಯಾಕುಮಾರಿಯ ಪಾದವಿರುವ ಮಂದಿರ. ಆಚಾರದ ಕಂಭದ ಮೇಲೆ ಆಧ್ಯಾತ್ಮ ದೇಗುಲವ ಕಟ್ಟಿ, ಅರಿವಿನ ಕಳಸವಿಕ್ಕಿ ಭವದ ನಿದ್ರೆಯಲ್ಲಿದ್ದ ಬಾಂಧವರನ್ನೆಚ್ಚರಿಸಿ ವಿಶ್ವ ಬಂಧುತ್ವವನ್ನು ತರಲೆತ್ನಿಸಿದ ಧೀರ ಸನ್ಯಾಸಿ ಒಂದೆಡೆಗೆ. ಹರನೇ ಗಂಡನಾಗಬೇಕೆಂದು ಹಂಬಲಿಸಿ ತಪಿಸಿದ ಯೋಗಿಣಿ ಇನ್ನೊಂದೆಡೆ. ಇವರ ಸ್ಮರಣೆಗಾಗಿ ಕಟ್ಟಿರುವ ಈ ಸ್ಮಾರಕಗಳು ನಿಜವಾಗಿಯೂ ಅದ್ಭುತವಾಗಿವೆ. ಹಿಂಭಾಗದಲ್ಲಿ ಧ್ಯಾನಮಂದಿರ. ಒಳಗೆ ವಿದ್ಯುದಲಂಕೃತವಾದ ಓಂಕಾರ. ಗುರುದ್ವಯರೊಂದಿಗೆ ಮೌನಧ್ಯಾನ ಮಾಡಿ ಮಂದಿರದ ಹಿಂದೆ ಹೋಗಿ ನಿಂತರೆ ಅಲ್ಲಿನ ದೃಶ್ಯ ಹೃದಯಂಗಮ, ವರ್ಣಿಸಲಸದಳ. ಅಲೆಗಳು ಓಡಿ ಬಂದು ನೀರಿನ ಮಧ್ಯೆ ಇರುವ ಬಂಡೆಗಳಿಗೆ ಬಡಿದು ಮೇಲೆ ಚಿಮ್ಮಿ ಮತ್ತೆ ಕೆಳಗೆ ಹರಿದು ಬರುವಾಗ ಅದೇನು ಲಿಂಗಕ್ಕೆ ಹಾಲಿನ ಅಭಿಷೇಕ ಮಾಡುತ್ತಿರುವವೇನೊ ಎನಿಸುವುದು, ಸ್ಮಾರಕವಿರುವ ಬಂಡೆಗೆ ಬಂದು ಅಪ್ಪಳಿಸಬೇಕೆಂದಿದ್ದರೂ ಕೆಲವು ಅಲೆಗಳು ಸೋತುಹೋಗುತ್ತಿದ್ದವು. ಆ ಬಂಡೆಯಂತೆಯೇ ಇತ್ತು ವಿವೇಕಾನಂದರ ಅಚಲ, ಸ್ಥಿರ, ಧೀಮಂತ, ಸಾಹಸಪೂರ್ಣ ವ್ಯಕ್ತಿತ್ವ. ತೀರವನ್ನು ಬಂಧಿಸಿರುವ ತೆಂಗಿನಮರದ ಸಾಲುಗಳು ಭಾರತಮಾತೆಯ ಹಸಿರು ಪತ್ತಲದ ನೆರಿಗೆಗಳಂತಿವೆ. ಕೆಂಪು ಹಾವಣಿಯ ಮನೆಗಳು ಪತ್ತಲದ ಮೇಲಿನ ವರ್ಣವಿನ್ಯಾಸಗಳಂತಿವೆ.

ರಾತ್ರಿ ಪ್ರಸಾದವಾದ ನಂತರ ಇನ್ನೊಂದು ಅಪೂರ್ವಾನುಭವ. "ಮಾತಾಜಿಯವರು ಹೇಳಿಕಳಿಸಿದ್ದಾರೆ. ಬೇಗನೇ ಬರಬೇಕಂತೆ" ಸಿದ್ಧನಂಜಪ್ಪ ಬಂದು ಕರೆದರು. ತುಂಬಾ ದಣಿದು ಮಲಗುವ ಸಿದ್ಧತೆ ನಡೆಸಿದ್ದ ನಮಗೆ ಉತ್ಸಾಹ ಗರಿಗೆದರಿತು. "ಸುಮ್ಮನೆ ಹೇಳಿಕಳಿಸುವವರಲ್ಲ ಏನಾದರೂ ವಿಶೇಷವಿರಲೇಬೇಕು" ಎಂದು ಅವಸರದಿಂದ ಓಡಿದೆವು. ಜೀವಂತ ಸ್ವರ್ಗವನ್ನು ಪ್ರವೇಶಿಸಿದಂತಾಯಿತು ಏರುವ ಚಂದಿರನ ಕಿರಣಗಳಲ್ಲಿ ಕುಣಿಯುತ್ತಿದ್ದ ಸಮುದ್ರವನ್ನು ಕಂಡು. ಈ ದಿವ್ಯಾನುಭವವನ್ನು ತಾವಷ್ಟೇ ಅನುಭವಿಸಿದರೆ ಸಾಲದೆಂದು ನಮಗೂ ಉಣ್ಣಿಸಲು ಕರೆಧರೆಂದು ತಿಳಿದಾಗ ಹೃದಯ ಕೃತಜ್ಞತೆಯಿಂದ ಪುಳಕಿತವಾಯಿತು. ನೋಡು ನೋಡುತ್ತಿದ್ದಂತೆಯೇ ಪ್ರಕೃತಿಯ ಸೊಬಗಿಗೆ ಮನಸೋತು ಲೀನವಾಗಿದ್ದ ಅವರ ಮಧುರ ಕಂಠದಿಂದ ವೀಣೆಯ ತರಂಗಗಳು ಬರತೊಡಗಿದವು "ಸುಳಿಯುತಿಹ ಹೊಳೆಯುತಿಹ ಕಾಣುವೆಡೆಯಲ್ಲೆಲ್ಲಾ ಕಾಣಲೊಲ್ಲದೇ ಬಾಲೆ ಅವನ ಸಿರಿಲೀಲೆ." ವಿಶ್ವಾತ್ಮನ ಆ ಸಿರಿಲೀಲೆಯನ್ನು ಮಾರುತ ತಾನು ಕೇಳಿ ಪಸರಿಸಲೆಂದು ಕೊಂಡೊಯ್ಯುತ್ತಿದ್ದ. ಮಾತಾಜಿಯವರು ಮಂದಸ್ಮಿತವದನೆಯಾಗಿ, ತನ್ಮಯರಾಗಿ ಹಾಗೆ ಹಾಡುತ್ತಿದ್ದಾಗ ಅದಾವುದೋ ಲೋಕದಲ್ಲಿ ನಿಂತಂತಹ ಪರಿ ನಮ್ಮದು. ಭಕ್ತಿ, ಜ್ಞಾನ, ವೈರಾಗ್ಯಗಳ ತವರೂರಾದ ಯೋಗಿಣಿ ಸೃಷ್ಟಿಯಲ್ಲಿ ನಡೆಯುತ್ತಿರುವ ಈ ಪೂಜೆಯಲ್ಲಿ ತಾನೂ ಭಾಗಿಯಾಗಿ ಹಾಡುತ್ತಾ ನಿಂತಾಗ ಇತ್ತ ಭಕ್ತಿ, ಜ್ಞಾನ-ವೈರಾಗ್ಯಗಳ ಸಂಗಮದ ಸಂಕೇತವೆನಿಸಿರುವ ಅರಬ್ಬೀಸಮುದ್ರ, ಬಂಗಾಳಕೊಲ್ಲಿ, ಹಿಂದೂಮಹಾಸಾಗರದಲ್ಲಿ ಕನ್ಯಾಕುಮಾರಿಯು ಆಧ್ಯಾತ್ಮ ನವನೀತ ಪಡೆಯಲು ಕಡೆಯುತ್ತಿರುವಾಗ ಎಬ್ಬಿಸುವ ಅಲೆಗಳು ಓಡಿಬಂದು ಭಾರತಮಾತೆಯ ಪಾದ ತೊಳೆಯುತ್ತಿದ್ದವು ಸುತ್ತಲಿನ ವನರಾಜಿಯೇ ಪುಷ್ಪಸಮೂಹವಾಗಿ ಚಂದ್ರಮನೇ ಆರತಿಯಾಗಿ, ನಮ್ಮೆಲ್ಲರ ಭಕ್ತಿಯೇ ಬೋನವಾದಾಗ ಅಲೆಗಳು ಓಂಕಾರವನ್ನು ಎಡೆಬಿಡದೆ ನುಡಿದು ಮಾತಾಜಿಯವರ ಗಾನದ ಆರಾಧನೆಯಲ್ಲಿ ಶ್ರುತಿ ಹಿಡಿದು ತಾವೂ ಭಾಗಿಗಳಾದಂತಿದ್ದವು. ಮಧುರ ವೀಣೆಯಂತೆ ಮಾತಾಜಿಯವರ ದಿವ್ಯ ಕಂಠ ಉಲಿಯುತ್ತಲೇ ಇತ್ತು ಹಾಡುಗಳ ಮೇಲೆ ಹಾಡುಗಳು.

"ಸೃಷ್ಟಿಯ ದೇವ ದೇಗುಲದೊಳಗೆ ಕರ್ತನ ಪೂಜೆಯು ಸಾಗುತಿದೆ "
"ನಶ್ವರ ಮಾಯಾ ಸಾಗರದೊಳಗೆ ಬಾಳಿನ ದೋಣಿಯು ಸಾಗುತಿದೆ "
"ನಂಬಿದೆ ಗುರುವೆ ನಂಬಿದೆಸ್ವಾಮಿ ಅಂಬಿಕಾ ರಮಣ ನೀನಂಬಿಗಾ "

"Man may come and men may go, I will go for ever." ಎಂದು ಹೇಳುತ್ತಾ ನದಿ ಹರಿಯುವಂತೆ ಸೃಷ್ಟಿಕರ್ತನ ಪೂಜೆ, ಯಾರಾದರೂ ನೋಡಲಿ ಬಿಡಲಿ, ನಿರಂತರವಾಗಿ ಸಾಗುತ್ತಲೇ ಇದೆ. ಸೃಷ್ಟಿಯಲ್ಲಿ ಅದನ್ನು ಅರಿಯಲು ಕಣ್ಣುಗಳು ಬೇಕು ಎಂಬ ಧ್ವನಿ ಗೀತೆಯಲ್ಲಿ ತುಂಬಿತ್ತು.

ಚಂದ್ರಮನ ಶುಭ್ರ ಜ್ಯೋತ್ಸ್ನೆಯನ್ನು ಕಂಡು ತನ್ಮಯರಾದ ಮಾತಾಜಿ ಮೆಲ್ಲನೆ ಉದ್ಗಾರ ತೆಗೆದರು : "ನೋಡಿ! 'ಕಾದಂಬರಿ' ಕಾವ್ಯದಲ್ಲಿ ಕವಿ ನಾಗವರ್ಮ ಹೇಳುವಂತೆ ಶಿವನು ನಕ್ಕಾಗ ಪಸರಿಸಿದ ಅವನ ದಂತಗಳ ಧವಳ ಧವಳ ಕಾಂತಿಯೇ ಚಂದ್ರಮನ ಬೆಳಕಾಗಿ ಚೆಲ್ಲಿದೆ ಎಂಬುದು ಈಗ ಸ್ಪಷ್ಟವಾಗದೆ ? ಬಂಡೆಗಳ ಮೇಲೆ ಚಿಮ್ಮುತ್ತಾ ಆಟವಾಡುತ್ತಿರುವ ಅಲೆಗಳನ್ನು ಕಂಡು ಮಂತ್ರಮುಗ್ಧರಾಗಿ ನಿಂತಿದ್ದ ನಮ್ಮನ್ನು ಮಳೆಯು ಎಚ್ಚರಿಸದಿದ್ದರೆ ಇನ್ನೂ ಎಷ್ಟು ಹೊತ್ತು ಹಾಗೆಯೇ ನಿಲ್ಲುತ್ತಿದ್ದೆವೋ! ಇನ್ನೂ ನೋಡೋಣ ಎಂದು ಚಿಕ್ಕಮಕ್ಕಳಂತೆ ಹಟ ಹಿಡಿದು ಹಠ ಮಾಡುತ್ತಿದ್ದ ಮನಸ್ಸನ್ನು ಗದರಿಸಿ ತಂಗುದಾಣದೆಡೆಗೆ ಕರೆದೊಯ್ಯಬೇಕಾದರೆ ಸಾಕು ಸಾಕಾಯಿತು.

ಮರುದಿನ ಬೆಳಿಗ್ಗೆ ಬೆಂಕಿಯ ಉಂಡೆಯಂತೆ ಕಡಲಿಂದ ಎದ್ದುಬಂದ ಬಾಲ ರವಿಯ ಬಾಲಲೀಲೆಯ ನೋಡಿ, ಪರಶುರಾಮ ಸಂಸ್ಥಾಪಿಸಿದ ಕನ್ಯಾಕುಮಾರಿ ದೇವಾಲಯಕ್ಕೆ ಹೋದೆವು. ಅಲ್ಲಿ ಯೋಗಿಣಿಯಾಗಿದ್ದ ಅವಳ ಮೂರ್ತಿಗೆ ಹೇರಿದ ಒಡವೆಗಳು ಬಹಳ ಹಾಸ್ಯಾಸ್ಪದವಾಗಿವೆ. ಮೂಗಿನ ಮೇಲಿರುವ ವಜ್ರದ (ಮೊದಲು ಬೈತಲೆಯಲ್ಲಿ ಇದ್ದ ವಜ್ರವು ಬ್ರಿಟಿಷರಿಂದ ಕದಿಯಲ್ಪಟ್ಟಿದೆಯಂತೆ) ಬೆಳಕನ್ನು ಲೈಟ್ ಹೌಸ್ ಎಂದುಕೊಂಡು ಬಂದ ಹಡಗೊಂದು ಅಪಘಾತಕ್ಕೊಳಗಾಯಿತೆಂದಾಗ ಅದರ ತೀಕ್ಷ್ಣತೆಯನ್ನು ನೀವು ಊಹಿಸಬಹುದು.

1948ರಲ್ಲಿ ಗಾಂಧೀಜಿಯವರ ದೇಹದ ಬೂದಿಯನ್ನು ತಂದಿಟ್ಟ ಜಾಗದಲ್ಲಿ ನಿಲ್ಲಿಸಿದ ಅವರ ಸ್ಮಾರಕ ಮತ್ತು ಮಂದಿರ ತೀರದ ದಂಡೆಯ ಮೇಲಿದ್ದು ಪ್ರಶಾಂತತೆಯಿಂದ ಕೂಡಿದೆ. ಸೂರ್ಯಬೆಳಕು ಮಧ್ಯಾಹ್ನ 12 ಗಂಟೆಗೆ ಮೂರ್ತಿಯ ಮೇಲೆ ಬೀಳುವಂತೆ ಮಾಡಿರುವುದು ಅಲ್ಲಿನ ವೈಶಿಷ್ಟ್ಯ.

ಅಲ್ಲಿಂದ 6 ಕಿ.ಮೀ ದೂರದಲ್ಲಿರುವ ವಿವೇಕಾನಂದಪುರದಲ್ಲಿರುವ ವಿವೇಕಾನಂದ ಕೇಂದ್ರಕ್ಕೆ ಹೋದಾಗ ಅಲ್ಲಿ ಸಿಕ್ಕ ಆದರದ ಸ್ವಾಗತ, ನಯ, ವಿನಯಭರಿತ ನಡೆ-ನುಡಿ ಸ್ಮರಣೀಯ. ವಿವೇಕಾನಂದರವರ ಜೀವನ ಚರಿತ್ರೆಯನ್ನೂ ಅವರ ಉದಾತ್ತ ತತ್ವಗಳನ್ನೂ ಪ್ರದರ್ಶಿಸಿದ್ದ ಪ್ರದರ್ಶನಾಲಯವನ್ನೂ, ಧ್ಯಾನಮಂದಿರ ಗ್ರಂಥಾಲಯ, ಲೆಕ್ಚರ್ ಹಾಲ್‌ಗಳನ್ನು ನೋಡಿ ಅವುಗಳ ಪ್ರಶಾಂತತೆ, ಶಿ... ಸ್ವಚ್ಛತೆಯನ್ನು ಮೆಚ್ಚಿದೆವು. 80 ಎಕರೆಗಳುಳ್ಳ ಅದು ಊರ ಹೊರಗಿದ್ದು ...ನೇ ಆದ ಸುಂದರ ಕ್ಯಾಂಪಸ್‌ನ್ನು ಹೊಂದಿದೆ. ಅಲ್ಲಿನ ಪ್ರಮುಖ ಕಾರ್ಯ...ರಾದ ಮಂಗಳೂರಿನ ರಘುನಂದನ ಎಂಬ ಸಾಧಕರು ಮಂಗಳೂರಿಗೆ ... ಪ್ರವಚನ ಕೇಳಿದ್ದು ಪೂರ್ವಭಾವೀ ಪರಿಚಿತರಿದ್ದು ಮಾತಾಜಿಯವರನು ಭಾಷಣ ಮಾಡಲು ವಿನಂತಿಸಿಕೊಂಡರು. ಆಶ್ರಮವಾಸಿಗಳೆಲ್ಲ ಉಪನ್ಯಾಸಭವನದಲ್ಲಿ ಸಮಾವೇಶವಾದರು. ಸಂಜೆ 7 ಗಂಟೆಗೆ ಪ್ರವಚನ ಆರಂಭವಾಯಿತು.

(ಸಶೇಷ)

ಶಾಲೆಗಳಿಗಾಗಿ "ಕಲ್ಯಾಣ ಕಿರಣ"

ಕರ್ನಾಟಕ ರಾಜ್ಯದ ವಿದ್ಯಾ ಇಲಾಖೆಯ ನಿರ್ದೇಶಕರು, (ಪಠ್ಯಪುಸ್ತಕ ಸಮಿತಿ), ಚಾಮರಾಜಪೇಟೆ, ಬೆಂಗಳೂರು, ತಮ್ಮ ಪತ್ರ No. TBC-1/78-79 ದಿನಾಂಕ 18-5-79 ಮೂಲಕ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಸಾಮಾಜಿಕ, ಅಧ್ಯಾತ್ಮಿಕ ಮಾಸಪತ್ರಿಕೆ "ಕಲ್ಯಾಣ ಕಿರಣ" ವನ್ನು ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಎಲ್ಲಾ ಶಿಕ್ಷಣ ಸಂಸ್ಥೆಗಳೂ ಮತ್ತು ಸರಕಾರಿ ಶಾಲೆಗಳೂ ತಮ್ಮ ವಾಚನಾಲಯಗಳಿಗಾಗಿ ಕಲ್ಯಾಣ ಕಿರಣ ಪತ್ರಿಕೆಯನ್ನು ತರಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ವಾರ್ಷಿಕ ಚಂದಾ ಹನ್ನೆರಡು ರೂಪಾಯಿ ಇರುವದು. ಪ್ರತಿ ತಿಂಗಳೂ ಒಂದನೆ ತಾರೀಖಿಗೆ ಬೆಂಗಳೂರಿನಿಂದ ಹೊರಡುವ 64 ಪುಟಗಳ ಈ ಮಾಸ ಪತ್ರಿಕೆ ಪೂಜ್ಯ ಮಾತೆ ಮಹಾದೇವಿಯವರ ಸಂಪಾದಕತ್ವದಲ್ಲಿ ಹೊರಡುತ್ತಿದೆ. ವಿಳಾಸ : ಕಲ್ಯಾಣ ಕಿರಣ ಕಾರ್ಯಾಲಯ, 'ಬಸವ ಮಂಟಪ' ನಂ. 24, ಕಾರ್ಡ್ ರೋಡ್ ಎರಡನೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

—ವ್ಯವಸ್ಥಾಪಕರು

ಗ್ರಂಥಾಲಯಗಳಿಗೆ "ಕಲ್ಯಾಣ ಕಿರಣ"

ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಗ್ರಂಥಪಾಲಕರು ತಮ್ಮ ಪತ್ರ No. A 2-3-NPS-55/11746/78-79 ದಿನಾಂಕ 21-2-1979ರ ಮೂಲಕ ...ರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ-ನಗರ ಕೇಂದ್ರ ಗ್ರಂಥಾಲಯಗಳಿಗೂ, ಅಧ್ಯಾತ್ಮಿಕ ಪತ್ರಿಕೆ "ಕಲ್ಯಾಣ ಕಿರಣ" ವನ್ನು ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆ. ಈ ಅವ...ವನ್ನು ಉಪಯೋಗಿಸಿಕೊಂಡು ಎಲ್ಲಾ ನಗರ-ಜಿಲ್ಲಾ ಕೇಂದ್ರ ಗ್ರಂಥಾಲಯಗಳೂ "...ಣ ಕಿರಣಕ್ಕೆ ಚಂದಾದಾರರಾಗಬೇಕೆಂದು ವಿನಂತಿಸಿಕೊಳ್ಳುತ್ತೇವೆ. ವಾರ್ಷಿಕ ...ನ್ನೆರಡು ರೂಪಾಯಿ ಇದ್ದು, ಪ್ರತಿ ತಿಂಗಳ ಒಂದನೇ ತಾರೀಖು ಬೆಂಗಳೂರಿನಿಂದ ಹೊ...ಡುವ, ಅರವತ್ನಾಲ್ಕು ಪುಟಗಳ ಈ ಮಾಸಿಕ ಅಧ್ಯಾತ್ಮ-ಸಾಮಾಜಿಕ ವಿಷಯಗಳಿಗೆ ಮೀಸಲಾಗಿದ್ದು, ಪೂಜ್ಯ ಮಾತೆ ಮಹಾದೇವಿಯವರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿದೆ. ಪತ್ರಿಕೆಯ ವಿಳಾಸ: ಕಲ್ಯಾಣ ಕಿರಣ ಕಾರ್ಯಾಲಯ, 'ಬಸವ ಮಂಟಪ' ನಂ. 24, ಕಾರ್ಡ್ ರಸ್ತೆ, ಎರಡನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು-10.

—ವ್ಯವಸ್ಥಾಪಕರು

Licence to post without pre-payment No. WPP-25



Correspond to :

Phone : Basava Mantapa : 82335 Phone : Basava Gangotri : 34

Basava Mantapa

No. 24, Chord Road, 2nd Block, Rajajinagar, Bangalore-560010

Cover Printed by : Bhaskar Printers, B-53